
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಮಾರ್ಚ್ 12, 2008 ರೂ. 12/-



ಬಿಜೆಪಿ ಸೇರಲು 50 ಕೋಟಿ!

ಾಂತ್ರಿ'ಕ ಬಜೆಟ್ಟೋ, 'ಭ್ರಾಂತಿಕ' ಬಜೆಟ್ಟೋ?

ದ್ರಾವತಿ: ಪೊಲೀಸ್-ಗಣಿ ಮಾಫಿಯಾಗೆ ದಲಿತ ನಾಯಕ ಬಲಿ

ದಿ ನಿಸಾರ್‌ಗೆ ಚೆಡ್ಡಿ ಗಾಯಕರ ನಿಷೇಧ



ಜಾತಿ ಸಮಾವೇಶ ರೆಡ್ಡಿಗಳ ರಗಳೆ





ಸಿಂಹನ 'ಬಣ್ಣ' ವಿರಾಮ!

'ಮಾಂತ್ರಿ'ಕ ಬಜೆಟ್ಟೋ 'ಭ್ರಾಂತಿ'ಕ ಬಜೆಟ್ಟೋ?



ಚಾರ್ವಾಕ

ಶಿವಸುಂದರ್

ಯುಪಿಎ ಸರಕಾರದ ಐದನೇ ಮತ್ತು ಚುನಾವಣಾ ಬಜೆಟ್ಟನ್ನು ಹಣಕಾಸು ಮಂತ್ರಿ ಪಿ.ಚಿದಂಬರಂ ಅವರು ಮಂಡಿಸಿದ್ದಾರೆ. ಎಲ್ಲಾ ಬಜೆಟ್ ಪಂಡಿತರು, ಉದ್ಯಮಿಗಳು, ಬಹುರಾಷ್ಟ್ರೀಯ ಕಂಪನಿಗಳು, ಯೂನಿವರ್ಸಿಟಿ ಬುದ್ಧಿಜೀವಿಗಳು ಮತ್ತು ಸಾಮಾನ್ಯ ಜನರು, ಬಿಜೆಪಿಯನ್ನು ಹೊರತುಪಡಿಸಿ ಎಲ್ಲಾ ರಾಜಕೀಯ ಪಕ್ಷಗಳು ಈ ಬಜೆಟ್ಟನ್ನು ಜನತೆಯ ಬಜೆಟ್ಟೆಂದು ಹೊಗಳುತ್ತಿದ್ದಾರೆ. 1997ರಲ್ಲಿ ಯುಎಫ್ ಸರ್ಕಾರದ ಹಣಕಾಸು ಮಂತ್ರಿಯಾಗಿದ್ದಾಗಲೂ ಚಿದಂಬರಂ ಅವರು ಮಂಡಿಸಿದ್ದ ಬಜೆಟ್ಟನ್ನು ಡ್ರೀಂ ಬಜೆಟ್ಟೆಂದು ವರ್ಣಿಸಲಾಗಿತ್ತು. ಆದರೆ ಅದನ್ನು ಆ ರೀತಿ ಕೊಂಡಾಡಿದವರು ದೊಡ್ಡ ಕಾರ್ಪೊರೇಟ್ ಉದ್ಯಮಿಗಳು. ಸಾಮಾನ್ಯ ಜನರು ಮತ್ತು ಪ್ರಜ್ಞಾವಂತರು ಅದನ್ನು ಖಂಡತುಂಡವಾಗಿ ವಿರೋಧಿಸಿದ್ದರು. ಆದರೆ ಈ ಬಜೆಟ್ಟನ್ನು ಮಾತ್ರ ಎಲ್ಲರೂ ಕೊಂಡಾಡುತ್ತಿದ್ದಾರೆ. ಇದನ್ನು ಹೊಗಳಲು ಎಲ್ಲರೂ ಬಳಸುತ್ತಿರುವ ಉಪಮೇಯವೆಂದರೆ "ಎಲ್ಲಾ ವರ್ಗಗಳನ್ನು ಸಂತುಷ್ಟಗೊಳಿಸುವ ಬಜೆಟ್" ಎಂದು.

ವಾಸ್ತವವಾಗಿ ಈ ಬಣ್ಣನೆಯೇ ಈ ಬಜೆಟ್‌ನ ಪ್ರಾಮಾಣಿಕತೆಯ ಬಗ್ಗೆ ಸಾಕಷ್ಟು ಪ್ರಶ್ನೆಗಳನ್ನು ಮೂಡಿಸಬೇಕು. ಈ ಪ್ರಶ್ನೆ ಒಂದು ಬಜೆಟ್ಟಿನ ಪ್ರಶ್ನೆಯಲ್ಲ, ಬದಲಿಗೆ ಸರ್ಕಾರದ ಆರ್ಥಿಕ ನೀತಿಗಳ ಪ್ರಶ್ನೆಯೇ ಆಗಿದೆ. ಹೀಗಾಗಿ ಬಜೆಟ್ಟು ಜನಪರವ್ರೋ ಅಲ್ಲವ್ರೋ ಎಂಬ ಬಗ್ಗೆ ಚರ್ಚಿಸುವ ಮೊದಲು ಎಲ್ಲಾ ಬಜೆಟ್ಟಿನ ಬಗ್ಗೆಯೂ ಮಾಧ್ಯಮಗಳು ಮತ್ತು ಸರ್ಕಾರಗಳು ಹುಟ್ಟಿಹಾಕಿರುವ ಮತ್ತು ಜನಪ್ರಿಯವಾಗಿರುವ ಕೆಲವು ಮಿಥ್ಯೆಗಳನ್ನು ಒಡೆದುನೋಡುವ ಅಗತ್ಯವಿದೆ.

ಮೊದಲನೆಯದಾಗಿ ಯಾವುದೇ ಬಜೆಟ್ಟು - ಪಿ.ಚಿದಂಬರಂ ಅವರ ಈ ಸಾಲಿನ 'ಜನಪ್ರಿಯ' ಬಜೆಟ್ಟು ಸಹ - ಸರ್ಕಾರಗಳು ಈವರೆಗೆ ಅನುಸರಿಸಿಕೊಂಡು ಬಂದಿರುವ ಆರ್ಥಿಕ ನೀತಿಗೆ ಮತ್ತು ಅದರಲ್ಲಿ ನಿರ್ಧಾರಿತವಾಗಿರುವ ಜನಪರವ್ರೋ ಅಥವಾ ಜನವಿರೋಧಿಯೋ ಆದ ದಿಕ್ಕಿಗೆ ವ್ಯತಿರಿಕ್ತವಾಗಿರುವುದಿಲ್ಲ. ಅಸಲು ಬಜೆಟ್ಟೆಂದರೆ ಏನು? ಒಂದು ಸರ್ಕಾರ ಹಾಕಿಕೊಂಡಿರುವ ಆರ್ಥಿಕ ನೀತಿಯ ಅನುಸಾರ ಆ ವರ್ಷಕ್ಕೆ ಹಣವನ್ನು ಎಲ್ಲೆಲ್ಲಿಂದ ರೂಢಿಸಿಕೊಳ್ಳುತ್ತದೆ ಮತ್ತು ಹೇಗೆ ತನ್ನ ಆರ್ಥಿಕ ನೀತಿಗಳಲ್ಲಿ ಹಾಕಿಕೊಂಡಿರುವ ಗುರಿಗಳನ್ನು ಮುಟ್ಟಲು ವೆಚ್ಚ ಮಾಡುತ್ತದೆ ಎಂಬುದೇ ಆಗಿದೆ. ವಾಸ್ತವವಾಗಿ ಬಜೆಟ್ಟಿನಲ್ಲಿ ಘೋಷಿಸುವ ಯೋಜನೆಗಳ ಸ್ವರೂಪಗಳನ್ನು ಸಹ ಹೆಚ್ಚು ಕಡಿಮೆ ಯೋಜನಾ ಆಯೋಗವು ಅಂತಿಮಗೊಳಿಸಿರುತ್ತದೆ. ಹೀಗಾಗಿ ಬಜೆಟ್ಟನ್ನು ಒಂದು ಸರ್ಕಾರ ಅನುಸರಿಸಿಕೊಂಡು ಬಂದಿರುವ ಆರ್ಥಿಕ ನೀತಿಗಳಿಂದ ಹೊರತುಪಡಿಸಿ ನೋಡಲು ಸಾಧ್ಯವಿಲ್ಲ. ಆದ್ದರಿಂದಲೇ ಈ ಜನಪ್ರಿಯ ಬಜೆಟ್ಟನ್ನು ಸಹ ಯುಪಿಎ ಸರ್ಕಾರದ ಅಥವಾ 1991ರಿಂದ ಈ ದೇಶವನ್ನು ಆಳಿದ ಎಲ್ಲಾ ಸರ್ಕಾರಗಳ ಜನವಿರೋಧಿ ನೀತಿಗಳಿಂದ ಹೊರತುಪಡಿಸಿ ನೋಡಲು ಸಾಧ್ಯವಿಲ್ಲ.

ಎರಡನೆಯದಾಗಿ ಬಜೆಟ್ಟುಗಳ ಬಗ್ಗೆ ಮಾಧ್ಯಮಗಳು ಮತ್ತು ಸರ್ಕಾರವು ಬಯಲುಪಡಿಸದ ಮತ್ತೊಂದು ಪ್ರಮುಖ ವಿಷಯವೆಂದರೆ ಯೋಜನೆಗಳ ಬಾಬತ್ತುಗಳಿಗೆ ಹಂಚಲಾಗಿರುವ ಹಣದಲ್ಲಿ ವಾಸ್ತವ ಹೆಚ್ಚಳ ಎಷ್ಟು ಎಂಬುದು. ಉದಾಹರಣೆಗೆ ಈ ಸಾಲಿನ ಬಜೆಟ್ಟಿನಲ್ಲೂ ಚಿದಂಬರಂ ಅವರು ಎಲ್ಲಾ ಇಲಾಖೆಗಳಿಗೂ ಮತ್ತು ಯೋಜನೆಗಳಿಗೂ ಕನಿಷ್ಟ ಶೇ.3ರಿಂದ ಶೇ.7ರವರೆಗೆ - ಕೆಲವು ವಿಶೇಷ ಬಾಬತ್ತುಗಳಿಗೆ ಶೇ.20ರವರೆಗೆ - ಹಣಕಾಸು ಹಂಚಿಕೆಯನ್ನು ಹೆಚ್ಚಿದ್ದಾರೆ. ಇದನ್ನು ಆಧರಿಸಿಯೇ ಹಲವು ಪಂಡಿತರು ಇದೊಂದು ಎಲ್ಲಾ ವರ್ಗಗಳನ್ನು ಗಮನದಲ್ಲಿಟ್ಟುಕೊಂಡಿರುವ ಬಜೆಟ್ಟೆಂದೇ ಬಣ್ಣಿಸುತ್ತಿದ್ದಾರೆ. ಇದು ಎಷ್ಟು ಮೂರ್ಖತನದ ಗ್ರಹಿಕೆ ಎಂಬುದನ್ನು ನೋಡೋಣ. ಈ ಬಾರಿ ಆಹಾರ ಸಬ್ಸಿಡಿಯ ಬಾಬತ್ತಿಗೆ ಶೇ.3.5ರಷ್ಟು ಹೆಚ್ಚುವರಿ ಹಣವನ್ನು ಹಂಚಲಾಗಿದೆ. ಇದನ್ನು ಬಡಜನರ ಬಗ್ಗೆ ಯುಪಿಎ ಸರ್ಕಾರಕ್ಕಿರುವ ಕಾಳಜಿ ಎಂದು ಬಣ್ಣಿಸಲು ಸಾಧ್ಯವೇ? ಈವರೆಗೆ ಕೇಂದ್ರ ಸರ್ಕಾರವು ಆಹಾರ ಸಬ್ಸಿಡಿಯ ಬಾಬತ್ತಿಗೆ 25,000 ಕೋಟಿ ರೂ.ಗಳಷ್ಟು ಸಬ್ಸಿಡಿಯನ್ನು ನೀಡುತ್ತಿತ್ತು, ಆದ್ದರಿಂದಲೇ ಪಡಿತರ ಅಂಗಡಿಗಳಲ್ಲಿ ಅಲ್ಪಸ್ವಲ್ಪವಾದರೂ ಆಹಾರ ಧಾನ್ಯಗಳು ಬಡವರಿಗೆ ದೊರಕುತ್ತಿತ್ತು. ಆದರೆ ವಿಶ್ವ ವಾಣಿಜ್ಯ ಸಂಸ್ಥೆಯ ಶರತ್ತುಗಳಿಗೆ ಒಪ್ಪಿಕೊಂಡ ನಂತರ ಸರ್ಕಾರವು ಈ ಆಹಾರ ಸಬ್ಸಿಡಿಯನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳುವ ನೀತಿಯನ್ನು ಅನುಸರಿಸುತ್ತಿದೆ. ಹೀಗಾಗಿಯೇ ಪಡಿತರ ಪದ್ಧತಿಯಲ್ಲಿ ಕಡು ಬಡವರಿಗೆ ಮಾತ್ರ ಪಡಿತರ ಎಂಬ ಪದ್ಧತಿಯೂ, ಕಡು ಬಡವರು ಯಾರು ಎಂಬುದಕ್ಕೆ ಬಹುಪಾಲು ಬಡವರನ್ನು ಹೊರಗಿಡುವಂತಹ 13 ಮಾನದಂಡ ಇತ್ಯಾದಿಗಳು ಜಾರಿಗೆ ಬರುತ್ತಿವೆ. ಈ ಎಲ್ಲಾ ನೀತಿಗಳ ದಿಕ್ಕೂ, ಕೇಂದ್ರ ಸರ್ಕಾರದ ಆಹಾರ ಸಬ್ಸಿಡಿಯನ್ನು ಕಡಿತಗೊಳಿಸುವ ಕಡೆಗೆ ಇದೆ. ಈಗ ಚಿದಂಬರಂ ಅವರ ಈ ಬಜೆಟ್ಟು ಮಾತ್ರ ಈ ಒಟ್ಟಾರೆ ನೀತಿಗೆ ವಿರುದ್ಧವಾಗಿರಲು ಹೇಗೆ ಸಾಧ್ಯ? ಹಾಗಿದ್ದರೆ ಆಹಾರ ಸಬ್ಸಿಡಿಯ ಬಾಬತ್ತಿಗೆ ಶೇ.3ರಷ್ಟು ಏರಿಕೆ ಮಾಡಿರುವುದು ಸುಳ್ಳೇ?

ಖಂಡಿತಾ ಸುಳ್ಳಲ್ಲ. ಆದರೆ ಅದು ವಾಸ್ತವವಾಗಿ ಆಹಾರ ಸಬ್ಸಿಡಿಯ ನೈಜ ಪಾಲನ್ನು ಕಳೆದ ವರ್ಷಕ್ಕಿಂತ ಜಾಸ್ತಿ ಮಾಡುವ ಬದಲು ಕಡಿಮೆ ಮಾಡುತ್ತದೆ! ಅದು ಹೇಗೆಂದರೆ ಸರ್ಕಾರವೇ ಹೇಳಿಕೊಂಡಿರುವಂತೆ ನಮ್ಮ ಆರ್ಥಿಕತೆಯು ಶೇ.7ರ ಹಣದುಬ್ಬರವನ್ನು ಎದುರಿಸುತ್ತಿದೆ. ಅಂದರೆ ಎಲ್ಲಾ ಸೇವೆ ಮತ್ತು ಸರಕುಗಳ ಬೆಲೆ ಕಳೆದ ವರ್ಷಕ್ಕಿಂತ ಶೇ.7ರಷ್ಟು ಹೆಚ್ಚುತ್ತದೆ ಅಂದರ್ಥ. ಅಂದರೆ ಕಳೆದ ವರ್ಷ ಕಿರಾಣಿ ಅಂಗಡಿಯಲ್ಲಿ 100ರೂ.ಗೆ ಐದು ಕೆಜಿ ಅಕ್ಕಿ ಸಿಗುತ್ತಿದ್ದರೆ ಈ ವರ್ಷ ಅದಕ್ಕೆ 107 ರೂ. ಕೊಟ್ಟರೆ ಮಾತ್ರ ಐದು ಕೆಜಿ ಅಕ್ಕಿ ಸಿಗುತ್ತದೆ ಎಂದರ್ಥ. ಈಗ ಸರ್ಕಾರವು ಕಳೆದ ವರ್ಷ 100 ರೂ. ಕೊಟ್ಟು ಐದು ಕೆಜಿ ಅಕ್ಕಿಯನ್ನು ಕೊಡಿಸುತ್ತಿತ್ತು ಎಂದಾದಲ್ಲಿ ಈ ವರ್ಷ ಅದು ಆ ಬಾಬತ್ತಿಗೆ 107 ರೂ. ಕೊಟ್ಟರೆ ಮಾತ್ರ ಐದು ಕೆಜಿ ಅಕ್ಕಿ ಸಿಗುತ್ತದೆ ಎಂದರ್ಥ ಎಂದಾಯಿತು.

(14ನೇ ಪುಟಕ್ಕೆ)

No Comments

"ಒಟ್ಟು ಸಮಾಜದಲ್ಲಿ ಕನೆ ಪದರವೆಂದು ಭಾವಿಸುತ್ತಿದ್ದ ಮಂದಿ ಈಗ ಆಸೆ ಆಮಿಷಗಳಿಗೆ ಬಲಿಯಾಗಿ ಮೂಗರಂತೆ ಮೌನಿಗಳಾಗಿರುವ ಈ ಸಂದರ್ಭದಲ್ಲಿ ನಾವು ಸಮಾಜದ ಬುದ್ಧಿಜೀವಿ ವರ್ಗಗಳಿಂದ ಅಪೇಕ್ಷಿಸುವುದಾದರೂ ಏನನ್ನು? ನಮ್ಮ ಅಪೇಕ್ಷೆಗಳೇ ಅತಿಯಾಯಿತೋ? ಅಥವಾ ಯುಗಧರ್ಮಗಳ ಮೌಲ್ಯಗಳ ಪಲ್ಲಟವ್ರೋ? "ಹೆಳವನ ಮೇಲೆ ಕುರುಡ ಕೂತಿದ್ದಾನೆ-ದಾರಿ ಸಾಗುವುದೆಂತೋ ಕಾಣಬೇಕು?"

-ಎಸ್.ತ್ಯಾಗರಾಜ್, 'ಸಂವಾದ' ಪತ್ರಿಕೆಯಲ್ಲಿ

"ಪ್ರತಿಯೊಬ್ಬ ತಂದೆಗೂ ತನ್ನ ಮಗಳ ಮದುವೆಯನ್ನು ನಡೆಸುವ ಬಾಧ್ಯತೆ ಇದೆ."

-ಮುಂಬೈ ಹೈಕೋರ್ಟ್

"ನನಗೆ ಕನ್ನಡಿಗರ ಬಗ್ಗೆ ಅಪಾರ ಗೌರವವಿದೆ. ಆದ್ದರಿಂದಲೇ ನಾನು ಕನ್ನಡಿಗರೊಬ್ಬರನ್ನು ಪ್ರಧಾನಿಯನ್ನಾಗಿ ಮಾಡಿದ್ದೆ."

-ಲಾಲೂ ಪ್ರಸಾದ್ ಯಾದವ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಸಿನಿಮಾ ಒಂದು ಜನಪದ ಕಲೆ. ಆಧುನಿಕ ಜನಪದ ಕಲೆ."

ಪ್ರೊ.ಬರಗೂರು ರಾಮಚಂದ್ರಪ್ಪ

"ಮೈಸೂರು ವಿಶ್ವವಿದ್ಯಾಲಯವು ಇತ್ತೀಚೆಗೆ ಅಂತರರಾಷ್ಟ್ರೀಯ ಮಟ್ಟದಲ್ಲೂ ಅತ್ಯುತ್ತಮ ಹೆಸರು ಮಾಡುತ್ತಿರುವುದರಿಂದ ಈ ಬಾರಿ ಕೇಂದ್ರ ಬಜೆಟ್ಟಿನಲ್ಲಿ ನಮ್ಮ ವಿಶ್ವವಿದ್ಯಾಲಯಕ್ಕೆ ಪಿ.ಚಿದಂಬರಂ ಅವರು ನೂರು ಕೋಟಿ ದುಡ್ಡು ಕೊಟ್ಟಿರಬಹುದು."



-ಪ್ರೊ.ಟಿ.ಸಿ.ಶಂಕರಮೂರ್ತಿ, ಹಂಗಾಮಿ ಕುಲಪತಿ

"ಮೌಲ್ಯಗಳು ಮತ್ತು ಸಿದ್ಧಾಂತಗಳನ್ನು ತೊರೆದು ಕೇವಲ ಅಧಿಕಾರಕ್ಕಾಗಿ ಪಕ್ಷಾಂತರವನ್ನು ಮಾಡುವುದು ಸಲ್ಲದು."


-ಬಿ.ಸೋಮಶೇಖರ್, ಸಂಯುಕ್ತ ಜನತಾದಳದ ಅಧ್ಯಕ್ಷ

"ನಾನು ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದ ಯೋಜನೆಗಳನ್ನೇ ಕೇಂದ್ರ ಯಥಾವತ್ತಾಗಿ ಅನುಸರಿಸಿದೆ."

-ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ

"ಹಾಲಿ ಅಧ್ಯಕ್ಷ ಮುಷರಫ್ ಅಧ್ಯಕ್ಷ ಪದವಿಯನ್ನು ತೊರೆಯುವ ತನಕ ನಮ್ಮ ಪಕ್ಷ ಹೊಸ ಸರ್ಕಾರದ ಭಾಗವಾಗಲಾರದು."

-ನವಾಜ್ ಶರೀಫ್, ಪಾಕಿಸ್ತಾನದ ಅಧ್ಯಕ್ಷ ಆಕಾಂಕ್ಷಿ



"ಮಾರ್ಚ್ 1ರೊಳಗೆ ಕಬ್ಬಿಗೆ 200 ರೂ. ಬೆಂಬಲ ಬೆಲೆ ಘೋಷಿಸದಿದ್ದರೆ ಮಾರ್ಚ್ 3ರಂದು ರಾಜಭವನಕ್ಕೆ ಮುತ್ತಿಗೆ ಹಾಕುತ್ತೇವೆ."

- ಪುಟ್ಟಣ್ಣಯ್ಯ, ರೈತ ಸಂಘದ ಅಧ್ಯಕ್ಷರು

ಸಜ್ಜನ ಖಂಡಿತವಾದಿ!

"ಚಿದಾನಂದ ಮೂರ್ತಿಯವರ ಜೀವನಗಾಥೆಯ ಬಗ್ಗೆ ಸವಿವರ ಮಾಹಿತಿ ಕೊಟ್ಟು ರಹಮತ್ ತರೀಕೆರೆಯವರು ಅವರ ವ್ಯಕ್ತಿತ್ವವನ್ನು ಚೆನ್ನಾಗಿಯೇ ಪರಿಚಯಿಸಿದ್ದಾರೆ. ಆದರೆ ಕೊನೆಯಲ್ಲಿ ಇಂಥ ಹಿರಿಯರ ಬಗ್ಗೆ ಹೀಗೆಲ್ಲಾ ಬರೆಯಲು ವೇದನೆಯಾಗುತ್ತದೆ ಎಂದು ಬರೆದಿರುವುದು ಮಾತ್ರ ನಾಟಕೀಯ ಎನಿಸುತ್ತದೆ. ಖಂಡಿತವಾದಿ ಲೋಕವಿರೋಧಿ ತಾನೆ?"

-ಪ್ರೊ.ಶಿವರಾಮಯ್ಯ

ಆದರೆ ವಿಜ್ಞಾನ ಸಾಂಪ್ರದಾಯಿಕವಾಗಬಹುದಲ್ಲ!



"ಹಳೆಯದನ್ನು ಮಾತ್ರ ಜಾನಪದವೆಂದು ಕರೆದು ಜಾನಪದಕ್ಕೆ ಆಧುನಿಕ ಮುಖವಿಲ್ಲವೆಂದು ಭಾವಿಸುವುದು ಸರಿಯಲ್ಲ. ಜಾನಪದವು ಗ್ರಾಮೀಣ ಪರಂಪರೆಯಿಂದ ನಗರಕ್ಕೂ ಮೌಖಿಕ ಪರಂಪರೆಯಿಂದ ಲಿಖಿತಕ್ಕೂ ಬಂದಿದೆ. ಈಗ ವಿಜ್ಞಾನ ವಲಯಕ್ಕೂ ವಿಕಸನ ಹೊಂದಿದೆ."

-ಪ್ರೊ.ಬರಗೂರು ರಾಮಚಂದ್ರಪ್ಪ

ಧರ್ಮದ ಆಧಾರದಲ್ಲಿ ಒಡೆಯುವುದಕ್ಕಿಂತ ಇದು ವಾಸಿ

"ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಮಾತ್ರ ಸಾಲ ಮನ್ನಾ ಮಾಡುವ ಮೂಲಕ ಕೇಂದ್ರ ಸರ್ಕಾರ ರೈತರನ್ನು ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದೆ."

-ಯಡಿಯೂರಪ್ಪ

ಒಂದು ಆತ್ಮ ವಿಮರ್ಶೆ

"ರಾಜ್ಯದಲ್ಲಿ ರೈಲ್ವೆ ಕಾಮಗಾರಿಗಳು ನೆನೆಗುದಿಗೆ ಬೀಳಲು ರಾಜ್ಯದ ಸಂಸದರೇ ಕಾರಣ. ರಾಜ್ಯದ ಬಗ್ಗೆ ಕಾಳಜಿ ಇಲ್ಲದ ಸಂಸದರ ಬಗ್ಗೆ ಎಚ್ಚರಿಕೆಯಿಂದಿರಬೇಕು."

-ದೇವೇಗೌಡ

ರಾಜಕೀಯ 'ಸೆರೆ'




"ಈ ಹಿಂದೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಪಕ್ಷಗಳು ಕಾಂಗ್ರೆಸ್ ಪಕ್ಷದ ಮುಖಂಡರ ಮೇಲೆ ಸೇಡು ತೀರಿಸಿಕೊಳ್ಳಲೆಂದೇ ರಾಜ್ಯದಲ್ಲಿ ಸಾರಾಯಿ ನಿಷೇಧ ಮಾಡಿದವು."

-ಬಿ.ಕೆ.ಹರಿಪ್ರಸಾದ್

ಮೂರು ವರ್ಷ, ನಾವು, ನೀವು ಮತ್ತು 'ಲಂಕೇಶ್'

ವಮೊನ್ನೆ ನಮ್ಮ ವಕೀಲ ಮಿತ್ರ ಬಿ.ಟಿ. ವೆಂಕಟೇಶ್ ಲೇ ಮೂರು ವರ್ಷಗಳಾಯಿತಾ?" ಎಂದು ಅಚ್ಚರಿ ಪಡಿಸಿದರು. ಹೌದು, ಈ ನಿಮ್ಮ ಪತ್ರಿಕೆ ಹುಟ್ಟು ಪಡೆದು ಮೂರು ವರ್ಷಗಳಾಗಿವೆ. ಅದು ದೀರ್ಘಕಾಲವಲ್ಲವೆನಿಸಿದರೂ, ಇದೇ ಮೂರು ಗಳಲ್ಲಿ ಧರಂಸಿಂಗ್ ಸರ್ಕಾರ ಉರುಳಿದ್ದು, ರಸ್ವಾಮಿಯ ದರ್ಬಾರು ನಡೆದಿದ್ದು, ಯಡಿ ರಪ್ಪ ಅತ್ತೂ ಕರೆದು ಹನ್ನೊಂದು ದಿನಗಳ ಕಾಲ ಮಂತ್ರಿ ಆದದ್ದು, ಈಗ ರಾಜ್ಯಪಾಲರೇ ಅಧಿಕಾರದ ನೆ ಹಿಡಿದಿರುವುದನ್ನು ನೋಡಿದರೆ ಈ ಮೂರು ಗಳಲ್ಲಿ ಎಷ್ಟೆಲ್ಲಾ ನಡೆದಿದೆ ಅನ್ನಿಸುವುದಿಲ್ಲವೇ. ಯೇ ಅದೇ ಕಾಲಾವಧಿಯಲ್ಲಿ ಇರಾಕಿನ ಮೇಲೆ ನಡೆದಿದ್ದು, ಸದ್ದಾಂ ಹುಸೇನನ್ನು ಅಮೆರಿಕ ದದ್ದು, ಟೋನಿ ಬ್ಲೇರ್‌ನನ್ನು ಬ್ರಿಟನ್ನಿನ ಪ್ರಧಾನಿ ದಿಂದ ಕಿತ್ತೊಗೆದದ್ದು, ಪಶ್ಚಿಮ ಬಂಗಾಳದಲ್ಲಿ ನಿಸ್ಟರ ಸರ್ಕಾರ ನಂದಿಗ್ರಾಮದ ನೂರಾರು ನನ್ನು ಕೊಂದದ್ದು, ನರಹಂತಕ ನರೇಂದ್ರ ಮೋದಿ ಚುನಾವಣೆಯಲ್ಲಿ ಗೆದ್ದದ್ದು, ಕರ್ನಾಟಕದ ರೈತರೂ ದಂತೆ ಭಾರತದಾದ್ಯಂತ ಸಾವಿರಾರು ಕೃಷಿಕರು ಹತ್ಯೆ ಮಾಡಿಕೊಂಡಿದ್ದನ್ನೆಲ್ಲ ನೆನಪಿಸಿಕೊಂಡ ದವೂ ಮೂರು ವರ್ಷಗಳಲ್ಲೇ ಇಷ್ಟೆಲ್ಲಾ ಆಗಿದೆಯಾ ೊ ಅನ್ನಿಸುತ್ತಲ್ಲವೆ.

ಅದೆಲ್ಲ ಹೊರಗಿನ ಮಾತಾಯಿತು, ನಿಮ್ಮ ಈ ಕಳೆದ ಮೂರು ವರ್ಷಗಳಲ್ಲಿ ಬೆಳೆದಿರುವ ಮನ್ನೇ ನೋಡಿ. ಸ್ನೇಹಿತರು ಮತ್ತು ಆಪ್ತರು ದ ಧನಸಹಾಯ, ಚಿಕ್ಕದಾದರೂ ಚೊಕ್ಕದಾದ ನ ಮನಸ್ಕರ ತಂಡ, ಓದುಗ ಮಿತ್ರರ ಪ್ರೋತ್ಸಾಹ ತ್ತು ಬೆಂಬಲ–ಈ ಮೂರು ಅಂಶಗಳ ಬಂಡವಾಳ ಪ್ರಾರಂಭವಾದ 'ಲಂಕೇಶ್' ವಾರಪತ್ರಿಕೆ ಈಗ ' ಎಂಬ ಯಶಸ್ವಿ ಮಾಸಿಕ ಪತ್ರಿಕೆಯನ್ನೂ ತ್ತಿದೆಯಲ್ಲದೆ, ಪುಸ್ತಕ ಪ್ರಕಾಶನಕ್ಕೂ ದಾಪುಗಾಲು ದೆ. 'ಲಂಕೇಶ್ ಪ್ರಕಾಶನ'ದಿಂದ 'ಗೈಡ್' ಓದುಗರ ಕ್ಕೆ ಪ್ರಕಟಿಸಿರುವ ಸ್ಪರ್ಧಾತ್ಮಕ ಪುಸ್ತಕಗಳನ್ನು ೊಂಡಂತೆ 'ಲಂಕೇಶ್' ಓದುಗರಿಗೆ ಪಿ. ಲಂಕೇಶರ ಕಗಳನ್ನಲ್ಲದೆ ಇತರೆ ಸಾಹಿತ್ಯಿಕ ಪುಸ್ತಕಗಳನ್ನೂ ತಂದಿದೆ. ಇದೇ ವಾರ ನಡೆಯಲಿರುವ 'ಲಂಕೇಶ್ ಕಾರ್ಯಕ್ರಮದಲ್ಲಿ ಬಿಡುಗಡೆಯಾಗಲಿರುವ ಗಳನ್ನು ಸೇರಿಸಿದರೆ, ಕಳೆದ ಒಂದೂವರೆ ಗಳಲ್ಲಿ 30 ಪುಸ್ತಕಗಳನ್ನು ಪ್ರಕಟಿಸಿದ ಹೆಮ್ಮೆ ೇಶ್'ಗಿದೆ.



ಪ್ರತೀವಾರ 'ಲಂಕೇಶ್' ವಾರ ಪತ್ರಿಕೆಯ ಕೆಲಸ ಮುಗಿಯುತ್ತಿದ್ದಂತೆ 'ಗೈಡ್' ಕೆಲಸ, ನಂತರ ಪ್ರಕಾಶನದ ಕೆಲಸ ಪ್ರಾರಂಭಿಸುವ ನಮ್ಮ ಇಡೀ ತಂಡ ಇದೇ ಮೂರು ವರ್ಷಗಳಲ್ಲಿ ಒಂದು ಚಿಕ್ಕದಾದ ಸಂಸ್ಥೆಯನ್ನೇ ಬೆಳೆಸಿದೆ. ನಾವೆಲ್ಲರೂ ಅಪಾರ ಶ್ರಮ ಮತ್ತು ಕಾಳಜಿಯಿಂದ ದುಡಿದಿರುವುದರಿಂದಲೇ ಇದು ಸಾಧ್ಯವಾಗಿದೆ ಎಂದು ಹೆಮ್ಮೆಯಿಂದಲೇ ಹೇಳಿಕೊಳ್ಳುತ್ತಿದ್ದೇನೆ.

ಆದರಷ್ಟೇ ಮುಖ್ಯವಾದದ್ದು ನಾವು ಬೆಳೆದಂತೆ ನಮ್ಮ ಜವಾಬ್ದಾರಿಗಳೂ ಹೆಚ್ಚಾಗಿರುವುದು. ಒಂದೆಡೆ ರಾಜ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ಆಗುಹೋಗುಗಳ ಬಗ್ಗೆ ಎಚ್ಚರ, ಇನ್ನೊಂದೆಡೆ ರಾಜ್ಯದ ಯುವ ಜನಾಂಗಕ್ಕೆ ಮಾರ್ಗದರ್ಶನ, ಮತ್ತೊಂದೆಡೆ ಅನ್ಯಾಯ, ಅನೀತಿಯ ವಿರುದ್ಧದ ನಿರಂತರ ಹೋರಾಟ–ಹೀಗೆ ಮೂರೂ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿರುವ ನಮ್ಮ ಸಂಸ್ಥೆ ಅದೆಷ್ಟೋ ಸಮುದಾಯಗಳಿಗೆ ಒಂದು ಸಾಂತ್ವನದ ಕೇಂದ್ರವೂ ಆಗಿದೆ. ಇವತ್ತು ಅನ್ಯಾಯಕ್ಕೊಳಗಾದ ಮಹಿಳೆಯರು, ದಬ್ಬಾಳಿಕೆಗೆ ತುತ್ತಾದ ದಲಿತರು, ದಾರಿ ಕಾಣದಾದ ರೈತರು, ಶೋಷಣೆಗೆ ಗುರಿಯಾದ ಯುವಕರು, ಕೋಮುವಾದಿಗಳ ಅಟ್ಟಹಾಸದಿಂದ ಕಂಗಾಲಾಗಿರುವ ಅಲ್ಪಸಂಖ್ಯಾತರು ಒಂದಿಷ್ಟು ನೆಮ್ಮದಿಗೆ, ಬದುಕಿನ ಬಗ್ಗೆ ಒಂದಿಷ್ಟು ದೃಢತೆಗೆ ನಮ್ಮ ಆಫೀಸನ್ನು ಎಡತಾಕುತ್ತಾರೆ.



ಆಶೆ ಮತ್ತು ಕಾಳಜಿಗಳೊಂದಿಗೆ ಸ್ಪಂದಿಸಿದ, ಪ್ರತಿವಾರ ಮತ್ತು ತಿಂಗಳು ನಮ್ಮ ಪ್ರಕಾಶನದ ಪತ್ರಿಕೆಗಳನ್ನು ಕೊಂಡು ಓದುವ, ವಿಮರ್ಶಿಸುವ, ಬೆನ್ನುತಟ್ಟುವ ನಿಮ್ಮಂತಹ ಓದುಗರು ನಮ್ಮನ್ನು ಪ್ರೋತ್ಸಾಹಿಸಿದ್ದರಿಂದ ಮತ್ತು ಬೆಂಬಲಿಸಿದ್ದರಿಂದ. ನಿಮಗೆ ನಮ್ಮ ಧನ್ಯವಾದಗಳು.

ಮೂರೇ ಮೂರು ವರ್ಷ. ಬರೀ ಕನಸು ಮತ್ತು ಸಂಕಲ್ಪ ಹೊತ್ತು ಹೊಸ ಹೆಜ್ಜೆ ಇಟ್ಟಾಗ ಜನ್ಮವೆತ್ತಿದ 'ಲಂಕೇಶ್' ಇವತ್ತು ಒಂದು ಪ್ರಮುಖ ಪ್ರಕಾಶನ ಸಂಸ್ಥೆಯಾಗಿ ಬೆಳೆದಿದೆ. ಆದರೆ ಇದನ್ನು ಇನ್ನೂ ಗಟ್ಟಿಯಾದ ಸಂಸ್ಥೆಯಾಗಿ ಸ್ಥಾಪಿಸುವ, ಆರ್ಥಿಕವಾಗಿ ಬಲಗೊಳಿಸುವ ಜವಾಬ್ದಾರಿ ನನ್ನ ಮೇಲಿದೆ. ನನ್ನ ಒಂದೇ ಒಂದು ಆಶೆ ಯಾವುದೆಂದರೆ ನಾಳೆ ನಾನಿಲ್ಲದಿದ್ದರೂ ಈ ಸಂಸ್ಥೆ ಮುಂದುವರಿಯಬೇಕು ಎಂಬುದು. ಯಾಕೆಂದರೆ 'ಲಂಕೇಶ್' ಕೇವಲ ಒಂದು ಪತ್ರಿಕೆಯಲ್ಲ, ಯಾರೊಬ್ಬರ ಮಾಲೀಕತ್ವದ್ದಲ್ಲ, ಬದಲಾಗಿ ಇದು ಈ ರಾಜ್ಯದ ಪ್ರಜ್ಞಾವಂತರ, ಶೋಷಿತರ, ದಬ್ಬಾಳಿಕೆಗೊಳಗಾದವರ, ರಾಜಕೀಯ ಮೌಲ್ಯಗಳಿಗೆ ಬದ್ಧರಾಗಿರುವ ಎಲ್ಲಾ ಜನರ ಪತ್ರಿಕೆ, ಅವರೆಲ್ಲರ ದನಿ, ಅವರೆಲ್ಲರ ಸ್ವತ್ತು.

ಈ ಆಶೆಯನ್ನು ನಿಮ್ಮ ಬೆಂಬಲವೇ ಈಡೇರಿಸಬೇಕಿದೆ....

ಮಾರ್ಚ್ 8ರ 'ಲಂಕೇಶ್ 73' ಕಾರ್ಯಕ್ರಮಕ್ಕೆ ಬನ್ನಿ, ನಿಮ್ಮ ಸ್ನೇಹಿತರನ್ನು ಕರೆತನ್ನಿ. ಲಂಕೇಶರ ನೆನಪು, ಪುಸ್ತಕಗಳ ಸಂಭ್ರಮ, ಅಪ್ಪನ ನೆನಪಿನಲ್ಲಿ ನನ್ನ ತಂಗಿ ಬೇಬಿ (ಕವಿತಾ) ನೀಡುವ ಪ್ರಶಸ್ತಿ ವಿಜೇತ ಚಿತ್ರ ಪ್ರದರ್ಶನ... ಎಲ್ಲವೂ ಅಂದು ಅಲ್ಲಿ ನಡೆದಿರುತ್ತದೆ. ಹಾಗೆಯೇ ನಮ್ಮೆಲ್ಲರ ಭೇಟಿ ಕೂಡ.

ಇದು ನಿಮಗೆಲ್ಲ ನನ್ನ ಪ್ರೀತಿಯ ಆಹ್ವಾನ.

-ಗೌರಿ ಲಂಕೇಶ್



ಕಂಡಹಾಗೆ

ಲಂಕೇಶ್-73

ಪುಸ್ತಕ ಸಂಭ್ರಮ

ಪುಸ್ತಕಗಳು	ಪುಸ್ತಕದ ಬಗ್ಗೆ ಮಾತನಾಡುವವರು
ಟೀಕೆ-ಟಿಪ್ಪಣಿ-ಸಂಪುಟ 3 ಪಿ. ಲಂಕೇಶ್ (ಸಂಯೋಜನೆ: ಬಳಿದಾಳೆ ಈಶ)	ಜಿ. ರಾಜಶೇಖರ್
ಸಾಹಿತಿ ಸಾಹಿತ್ಯ ವಿಮರ್ಶೆ ಪಿ. ಲಂಕೇಶ್ (ಸಂಯೋಜನೆ: ಡಾ. ವಿ.ಎಸ್. ಶ್ರೀಧರ)	ರಹಮತ್ ತರೀಕೆರೆ
ರೂಪಕ ಲೇಖಕರು ಪಿ. ಲಂಕೇಶ್ ಮತ್ತು ಎಸ್.ಎಫ್. ಯೋಗಪ್ಪನವರ್	ಬಂಜಗೆರೆ ಜಯಪ್ರಕಾಶ್
ರೈತರ ಆತ್ಮ-ಹತ್ಯೆ ಶಿವಸುಂದರ್	ಅಬ್ದುಸ್ಸಲಾಂ ಪುತ್ತಿಗೆ

ಅಧ್ಯಕ್ಷತೆ: ಬರಗೂರು ರಾಮಚಂದ್ರಪ್ಪ

ಅದೇ ದಿನ ಗೌರಿ ಲಂಕೇಶರ 'ಬೆನಜೀರ್' ಮತ್ತು ಏಕಲವ್ಯರ 'ಮನುಸ್ಮೃತಿ' ಪುಸ್ತಕಗಳು ಬಿಡುಗಡೆಯಾಗಲಿವೆ.

ಪ್ರಶಸ್ತಿ ಪ್ರದಾನ

ಕವಿತಾ ಲಂಕೇಶರಿಂದ 2007ನೇ ಸಾಲಿನ ಅತ್ಯುತ್ತಮ ಚೊಚ್ಚಲ ನಿರ್ದೇಶಕರಿಗೆ ರಾಷ್ಟ್ರೀಯ ಮಟ್ಟದ

ಲಂಕೇಶ್ ಚಿತ್ರ ಪ್ರಶಸ್ತಿ ಪ್ರದಾನ

ಪ್ರಶಸ್ತಿ ವಿಜೇತ ಚಲನಚಿತ್ರ ಪ್ರದರ್ಶನ


ಎಲ್ಲರಿಗೂ ಪ್ರೀತಿಯ ಸ್ವಾಗತ

ಮಾರ್ಚ್ 8, 2008
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
ಸಂಜೆ 4ಕ್ಕೆ

ರೆಡ್ಡಿಗಳ ರಗಳೆ


ಈಗ ರೆಡ್ಡಿಗಳ ಸರದಿ. ದನಿಯೇ ಇಲ್ಲದ ಲಂಬಾಣಿ, ಗೊಲ್ಲ, ತಿಗಳ, ಮಡಿವಾಳರಂಥ ಜಾತಿಗಳೇ ರ್‍ಯಾಲಿ, ಸಮಾವೇಶ ಮಾಡಿ ಗುಡುಗುತ್ತಿರುವಾಗ ತಕ್ಕಮಟ್ಟಿಗಾದರೂ ಅನುಕೂಲಸ್ಥರಾದ ರೆಡ್ಡಿಗಳು 'ತಾಕತ್ತು' ತೋರಿಸದಿದ್ದರೆ ಹೇಗೆ?

ಬಹುಶಃ ಇದೇ ಏಪ್ರಿಲ್ 26 ಮತ್ತು 27 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುವ 'ರೆಡ್ಡಿ ಜನಾಂಗದ ಮಹಾಸಮಾವೇಶ' ಸ್ವಾತಂತ್ರ್ಯಾನಂತರದ ಮೊಟ್ಟಮೊದಲ ಕರ್ನಾಟಕದ ರೆಡ್ಡಿಗಳ ಶಕ್ತಿ ಪ್ರದರ್ಶನವಾಗಲಿದೆ!




ನಂದೀಶ್ ರೆಡ್ಡಿ

ಈಗಾಗಲೇ ಆನೇಕಲ್, ಕೋರಮಂಗಲ, ಅಗರ, ಹೂಡಿ, ಬಳ್ಳಾರಿ, ಮಾಲೂರು, ಚಂದಾಪುರಗಳಲ್ಲಿ ನಡೆದ ರೆಡ್ಡಿಗಳ ಪೂರ್ವಭಾವಿ ಸಮಾವೇಶ, ಕಾಂಗ್ರೆಸ್ ನಾಯಕ ರಾಮಲಿಂಗಾರೆಡ್ಡಿಯವರ ಅಧ್ಯಕ್ಷತೆಯ ಸ್ವಾಗತಸಮಿತಿ ಮತ್ತು ರೆಡ್ಡಿ ನಾಯಕರ ಓಡಾಟವನ್ನೇ ಲೆಕ್ಕ ಹಾಕಿ ಹೇಳುವುದಾದರೆ ಅದು ಕಮ್ಮಿಯೆಂದರೂ ಎರಡು ಲಕ್ಷ ರೆಡ್ಡಿಗಳ ಬೃಹತ್ ರ್‍ಯಾಲಿಯಾಗುತ್ತದೆ. ಪ್ರಶ್ನೆಯೆಂದರೆ, ಈತನಕ ತಮ್ಮನ್ನು ಒಕ್ಕಲಿಗರ ಜೊತೆ ಗುರುತಿಸಿಕೊಂಡು ಆದಿಚುಂಚನಗಿರಿ ಬಾಲಗಂಗಾಧರನಾಥರ ಫೋಟೋ ಇಟ್ಟುಕೊಳ್ಳುತ್ತಿದ್ದ ರೆಡ್ಡಿಗಳೇಕೆ ಪ್ರತ್ಯೇಕ ಐಡೆಂಟಿಟಿಗಿಳಿದಿದ್ದಾರೆ? ಇದು ಒಕ್ಕಲಿಗರ ವಿರುದ್ಧದ ಅಸಹನೆಯೇ? ಗಣಿ ಖದೀಮ ಜನಾರ್ದನ ರೆಡ್ಡಿಯ ಹುನ್ನಾರವೇ? ಅಥವಾ ತಮ್ಮ ಅಸ್ತಿತ್ವಕ್ಕಾಗಿ ರೆಡ್ಡಿಗಳು ನಡೆಸುತ್ತಿರುವ ಹೋರಾಟವೇ? ಜಾಗತೀಕರಣದ ಬಿರುಗಾಳಿಗೆ ಸಿಲುಕಿದ ಅನುಕೂಲಸ್ಥ ರೆಡ್ಡಿಗಳೂ ಅನಿವಾರ್ಯವಾಗಿ ಬೀದಿಗಿಳಿಯಬೇಕಾಗಿಬಂದಿದೆಯೇ?



ಅಶ್ವಥನಾರಾಯಣರೆಡ್ಡಿ




ರೆಡ್ಡಿ ವೀರಣ್ಣ

ಇಂತಹ ಪ್ರಶ್ನೆಗಳನ್ನೆಲ್ಲಾ ಬದಿಗಿಟ್ಟು ರೆಡ್ಡಿಗಳ ರ್‍ಯಾಲಿಯ ಹಿಂದಿನ ಕೈಗಳಾದರೂ ಯಾರೆಂಬುದನ್ನು ಕೆದಕಿದರೆ ಅದೇ ಮತ್ತೊಂದು ವೃತ್ತಾಂತವಾಗುತ್ತದೆ. ಸದ್ಯ ಇಡೀ ಕರ್ನಾಟಕದ ರೆಡ್ಡಿಗಳ ನೇತೃತ್ವ ಕಾಂಗ್ರೆಸ್ ನಾಯಕ ರಾಮಲಿಂಗಾ ರೆಡ್ಡಿಯುವರ ಕೈಯೊಳಗಿರುವ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಆ ಕಾಲದಿಂದಲೂ ಕರ್ನಾಟಕದ ರೆಡ್ಡಿಗಳ ಪ್ರಾತಿನಿಧಿಕ ಸಂಸ್ಥೆಯಾದ ರೆಡ್ಡಿ ಜನಸಂಘವೇ ಸಮಾವೇಶದ ನೇತೃತ್ವ ವಹಿಸಿದೆ ನಿಜ. ಆಂಧ್ರದ ರೆಡ್ಡಿಗಳಿಗೂ ಕರ್ನಾಟಕದ ರೆಡ್ಡಿಗಳಿಗೂ ವ್ಯತ್ಯಾಸವಿದೆ. ಕನ್ನಡಿಗರ ಕಣ್ಣಲ್ಲಿ ರಾಮಲಿಂಗಾ ರೆಡ್ಡಿಯೇ ಬೇರೆ, ಗಣಿ ಮಾಫಿಯಾದ ಜನಾರ್ದನ ರೆಡ್ಡಿಯೇ ಬೇರೆ.

ಈಗ ರಾ.ಲಿಂ. ರೆಡ್ಡಿಯವರ ಪಕ್ಕ ನಿಂತು ತಾನೂ ಕರ್ನಾಟಕದ ರೆಡ್ಡಿಗಳ ನಾಯಕ, ಬಿಜೆಪಿ ಸರ್ಕಾರ ಬಂದರೆ ನಾನೂ ಮುಖ್ಯಮಂತ್ರಿ ಆಕಾಂಕ್ಷಿ ಎಂದು ಜನಾರ್ದನ್ ರೆಡ್ಡಿ ಗುಟುರು ಹಾಕಿಬಿಟ್ಟರೆ ಅದನ್ನು ಮುಗ್ಧ ರೆಡ್ಡಿಗಳು ಮನ್ನಿಸಬೇಕೆ? ಮುಂದೊಂದು ದಿನ ಆಂಧ್ರದ ಮುಖ್ಯಮಂತ್ರಿ ವೈ.ಎಸ್. ರಾಜಶೇಖರರೆಡ್ಡಿಯ ಮಗ ಜಗನ್‌ಮೋಹನ್ ರೆಡ್ಡಿ ತಾನೂ ಬೆಂಗಳೂರಿನ ಪ್ರಜೆ, ಆ ಕಾಲದಿಂದಲೂ ಹೆಚ್ಚೆಸ್ಸಾರ್ ಲೇಔಟಿನಲ್ಲಿದ್ದೇನೆಂದು ವರಾತ ಕ್ಕಿಳಿದರೆ ಜನ ಒಪ್ಪಬೇಕೆ?


ಅಷ್ಟಕ್ಕೂ ಚುನಾವಣೆಯ ಆಜುಬಾಜಿನಲ್ಲೇ ರೆಡ್ಡಿಗಳ ಮಹಾರ್‍ಯಾಲಿ ನಡೆಯುತ್ತಿರುವುದಕ್ಕೂ ಕಾರಣಗಳಿವೆ. ಸಮಾವೇಶಕ್ಕೂ ರಾಜಕೀಯಕ್ಕೂ ಸಂಬಂಧವೇ ಇಲ್ಲ, ಸ್ವಾತಂತ್ರ್ಯಾನಂತರ ಈ ಥರದ ರೆಡ್ಡಿಗಳ ಸಮಾವೇಶ ನಡೆಯುತ್ತಿರುವುದು ಇದೇ ಮೊದಲು. ಮೊದಲು ರೆಡ್ಡಿಗಳೆಲ್ಲ ಒಗ್ಗಟ್ಟಾಗಬೇಕು, ಶೈಕ್ಷಣಿಕವಾಗಿ ತೀರ ಹಿಂದುಳಿದ ರೆಡ್ಡಿಗಳಿಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಾಲೇಜುಗಳನ್ನು ತೆರೆಯುವುದೇ ಸಮಾವೇಶದ ಮುಖ್ಯ ಉದ್ದೇಶ, ಹೇಗೂ ದೇವೇಗೌಡರೇ ಒಳ ಮೀಸಲಾತಿಯನ್ನು ಪ್ರಸ್ತಾಪಿಸಿದ್ದಾರಲ್ಲ; ರೆಡ್ಡಿಗಳನ್ನೂ ಒಕ್ಕಲಿಗರ ಲೆಕ್ಕಕ್ಕೆ ಸೇರಿಸೋ ಬದಲು ನಮಗೇ ಪ್ರತ್ಯೇಕ ಮೀಸಲಾತಿ ಕೊಡಿ ಎಂದು ಕೇಳೋದರಲ್ಲಿ ತಪ್ಪೇನಿದೆ? ಎನ್ನುತ್ತಾರೆ ರಾಮಲಿಂಗಾರೆಡ್ಡಿ.

ನಿಜ, ಕರ್ನಾಟಕದ ಮೊದಲ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರ ನಂತರ ಆ ಮಟ್ಟದ ನಾಯಕನೊಬ್ಬ ರೆಡ್ಡಿಗಳ ನಡುವಿನಿಂದ ಉದ್ಭವಿಸಿಲ್ಲ. ಚಿಂತಾಮಣಿಯ ಚೌಡರೆಡ್ಡಿ, ಕೃಷ್ಣಾರೆಡ್ಡಿ, ವರ್ತೂರಿನ ಅಶ್ವತ್ಥನಾರಾಯಣ ರೆಡ್ಡಿ, ಸಿಪಿಎಂ ನಾಯಕ ಶ್ರೀರಾಮರೆಡ್ಡಿ, ಗೌರಿಬಿದನೂರಿನ ಜ್ಯೋತಿರೆಡ್ಡಿ ಮತ್ತು ಬೆಂಗಳೂರಿನ ರಾಮಲಿಂಗಾ ರೆಡ್ಡಿಯಂಥ ಹೆಸರುಗಳನ್ನು ಬಿಟ್ಟರೆ ತೀರ ಇತ್ತೀಚೆಗೆ ಬಳ್ಳಾರಿಯ ಗಣಿಕಳ್ಳ ರೆಡ್ಡಿಗಳ ಹೆಸರೇ ಕೇಳಿಬರುತ್ತಿದೆ. ಕರ್ನಾಟಕದ ಜನಸಂಖ್ಯೆಯಲ್ಲಿ ಸರಿಸುಮಾರು ನಲವತ್ತೈದು ಲಕ್ಷದಷ್ಟಿರುವ ರೆಡ್ಡಿಗಳೆಂದರೆ ಸರ್ಕಾರದ ಕಣ್ಣಲ್ಲಿ ಒಕ್ಕಲಿಗರೆ.



ರಾಮಲಿಂಗಾರೆಡ್ಡಿ

ನಿನ್ನೆಮೊನ್ನೆಯ ತನಕ ಒಕ್ಕಲಿಗರ ಜೊತೆಗೇ ಪ್ರವರ್ಗ 3A ನಲ್ಲಿ ಮೀಸಲಾತಿ ಹಂಚಿಕೊಳ್ಳುತ್ತಿದ್ದ ರೆಡ್ಡಿಗಳೆಲ್ಲ ಕೆಲವೆಡೆ ಗೌಡರ ಲೆಕ್ಕಕ್ಕೇ ಜಮೆಯಾಗುತ್ತಿದ್ದರು. ಪ್ರವರ್ಗ 3A ನಲ್ಲಿದ್ದ ಬಣಜಿಗರು, ಕರಾವಳಿಯ ಬಂಟರು, ಶೆಟ್ಟರು ಇತ್ಯಾದಿಗಳ ಜೊತೆ ಮೀಸಲಾತಿ ಹಂಚಿಕೊಳ್ಳಬೇಕಿದ್ದ ರೆಡ್ಡಿಗಳಿಗೆ ತಮ್ಮ ಸಮಾನ ಜಾತಿಗಳಂತೆ ಒಂದೇ ಒಂದು ಮೆಡಿಕಲ್ ಕಾಲೇಜ್, ಇಂಜಿನಿಯರಿಂಗ್ ಕಾಲೇಜಿಲ್ಲ ಎಂಬುದು ಸತ್ಯವೇ. ಚಿಂತಕ ಶೂದ್ರ ಶ್ರೀನಿವಾಸ್, ಡಾ. ಸುದರ್ಶನ್, ಪರಿಸರವಾದಿ ಯಲ್ಲಪ್ಪ ರೆಡ್ಡಿ, ಇಂಜಿನಿಯರಿಂಗ್ ದೂರ್ತ ಬಲವೀರರೆಡ್ಡಿಯ ಹೊರತಾಗಿ ಬೇರೆ ಸಾಂಸ್ಕೃತಿಕ ನಾಯಕರ್‍ಯಾರೂ ರೆಡ್ಡಿ ಜನಾಂಗದಿಂದ ಹುಟ್ಟಿ ಬರಲಿಲ್ಲ. ಆದರೆ ಹೆಸರು ಮಾಡಿದ್ದು ಮಾತ್ರ ಕುಪೇಂದ್ರರೆಡ್ಡಿ, ಜಯರಾಮರೆಡ್ಡಿ, ದಯಾನಂದರೆಡ್ಡಿ, ರೆಡ್ಡಿ ವೀರಣ್ಣ, ಪಿಚ್ಚರೆಡ್ಡಿ, ಕುಮಾರಸ್ವಾಮಿರೆಡ್ಡಿ, ರಾಮಚಂದ್ರರೆಡ್ಡಿಯಂಥ ಭೂಕಂಟಕರೆ.



ಜನಾರ್ದನ ರೆಡ್ಡಿ

ದುರಂತವೆಂದರೆ ಇಂಥ ರಿಯಲ್ ಎಸ್ಟೇಟ್ ದಂಧೆಯ ರೆಡ್ಡಿಗಳೇ ಇವತ್ತು ರೆಡ್ಡಿಗಳ ನಾಯಕರ ಪೋಜು ಕೊಡುತ್ತಿರುವುದು. ದೇಶಪಾಂಡೆ ಭಾರೀ ಕೈಗಾರಿಕಾ ಮಂತ್ರಿಯಾಗಿದ್ದ ಎರಡು ದಶಕಗಳ ಕಾಲ ಬೆಳ್ಳಂದೂರು, ಕರಿಯಮ್ಮನ ಅಗ್ರಹಾರ, ದೇವರಬಿಸನಹಳ್ಳಿ, ಇಬ್ಬಲೂರು, ಅಗರ, ಸರ್ಜಾಪುರ ಸುತ್ತಮುತ್ತಲ ನೂರಾರು ರೆಡ್ಡಿ ರೈತರ ಬೆಲೆಬಾಳುವ ಭೂಮಿಗೆ ನಕಲಿ ಐಟಿ ಕಂಪೆನಿಗಳ ಹೆಸರಲ್ಲಿ ಕುತ್ತು ತಂದಿದ್ದೇ ಈ ಕುಪೇಂದ್ರರೆಡ್ಡಿ, ಜಯರಾಮರೆಡ್ಡಿ, ರೆಡ್ಡಿ ವೀರಣ್ಣ, ರಾಮಚಂದ್ರರೆಡ್ಡಿ, ಪಿಚ್ಚ ರೆಡ್ಡಿ, ಕುಮಾರಸ್ವಾಮಿಯಂಥ ಹುಟ್ಟಾ ನೆಲಹುಡುಕರು. ಆನಂತರ ಸಿಂಧ್ಯಾ, ಕಟ್ಟಾನಾಯ್ಡು ಕೈಗಾರಿಕಾ ಮಂತ್ರಿಗಳಾದ ಮೇಲೂ ಮತ್ತು ಇವತ್ತಿನ ತನಕ ಕೆಐಎಡಿಬಿಯ ಕಳ್ಳರನ್ನು ಬುಟ್ಟಿಗೆ ಹಾಕಿಕೊಂಡು ನಕಲಿ ಕಂಪೆನಿಗಳ ಹೆಸರಲ್ಲಿ ರೈತರ ಭೂಮಿ ದೋಚಿದ ಇಂಥ ರೆಡ್ಡಿಗಳೇ ಇವತ್ತು ರೆಡ್ಡಿ ಸಮಾವೇಶದ ಬಾವುಟ ಹಿಡಿದಿದ್ದಾರೆ.

ಬೆಂಗಳೂರಿನ ಅಭಿವೃದ್ಧಿಗೆಂದು, ಕಳ್ಳ ಕಂಪೆನಿಗಳಿಗೆಂದು, ಎಸ್‌ಇಝೆಡ್‌ಗಳ ಹೆಸರಲ್ಲಿ ಸಾವಿರಾರು ರೆಡ್ಡಿ ಕುಟುಂಬಗಳು ಬೀದಿಗೆ ಬಿದ್ದಾಗ ಇವರ್‍ಯಾರೂ ದನಿಯೆತ್ತಲಿಲ್ಲ. ರೆಡ್ಡಿಗಳ ಮಕ್ಕಳಿಗೆ ಐಟಿ ಕಂಪೆನಿಗಳಲ್ಲಿ ಕೆಲಸ ಕೊಡಿಸಿ ಎಂದು ಕನ್ನಡ ಹೋರಾಟಗಾರ ಪ್ರಭಾಕರ್‌ರೆಡ್ಡಿ ಥರದವರು ಪ್ರತಿಭಟನೆಗಿಳಿದಾಗ ಇವರ್‍ಯಾರೂ ಕೈಜೋಡಿಸಲಿಲ್ಲ. ಈಗ ಚುನಾವಣೆಯ ಹೊಸ್ತಿಲಲ್ಲಿ ನಿಂತು ರೆಡ್ಡಿಗಳೇ ಒಂದಾಗಿ ಎಂದರೆ ನಂಬಬೇಕೆ?

ನಕಲಿ ಐಟಿ ಕಂಪೆನಿಗಳ ಹೆಸರಲ್ಲಿ ಬೀದಿಪಾಲಾದ ನೂರಾರು ರೆಡ್ಡಿ ಕುಟುಂಬಗಳು ಇವತ್ತಿಗೂ ಸುಪ್ರೀಂಕೋರ್ಟಿಗೆ ಅಲೆಯುತ್ತಿದ್ದಾರೆ. ಅವತ್ತು ಬೀದಿಗೆ ಬಿದ್ದ ರೆಡ್ಡಿಗಳು ಇದೇ ವರ್ತೂರಿನ ಮಾಜಿ ಶಾಸಕ ಬಿಜೆಪಿಯ ಅಶ್ವತ್ಥನಾರಾಯಣರೆಡ್ಡಿಯ ಕಾಲಿಗೆ ಬಿದ್ದು ಕಣ್ಣೀರಿಟ್ಟಿದ್ದರು. ಇದೇ ರೆಡ್ಡಿಯ ಜನಸಂಘದ ಬಾಗಿಲು ಕಾದರು. ದೌರ್ಭಾಗ್ಯವೆಂದರೆ ರೆಡ್ಡಿ



ಹೊಗೇನಕಲ್ ವಿವಾದ ತಮಿಳುನಾಡಿನ ಮತ್ತೊಂದು ಕಿತಾಪತಿ!

ಕರ್ನಾಟಕ ಮತ್ತು ತಮಿಳುನಾಡುಗಳ ನಡುವಿನ ಕಾವೇರಿ ನೀರು ಹಂಚಿಕೆಯ ವಿವಾದವೇ ಇನ್ನೂ ಬಗೆಹರಿದಿಲ್ಲ. ಆಗಲೇ ನೆರೆಯ ತಮಿಳುನಾಡು ಸರ್ಕಾರ ಕರ್ನಾಟಕದ ವಿರುದ್ಧ ಕಾಲು ಕೆರೆದು ಜಗಳ ಕಾಯುವುದಕ್ಕೆ ಮತ್ತೊಂದು ವಿವಾದವನ್ನು ಶುರುಹಚ್ಚಿಕೊಂಡಿದೆ. ಅದು ಕರ್ನಾಟಕ-ತಮಿಳುನಾಡು ಗಡಿಯಲ್ಲಿ ಕಾವೇರಿ ನದಿ ನಿರ್ಮಿಸಿರುವ ಹೊಗೇನಕಲ್ ನಡುಗಡ್ಡೆಯ ವಿವಾದ. ವಾಸ್ತವದಲ್ಲಿ ಈ ನಡುಗಡ್ಡೆ ಕರ್ನಾಟಕಕ್ಕೆ ಸೇರಿದ್ದಾದರೂ ತಮಿಳುನಾಡು ಅದು ತನ್ನ ಭೂಭಾಗ ಎಂದು ಹೇಳುತ್ತಾ ಅಲ್ಲಿ ಅನೇಕ ಅಭಿವೃದ್ಧಿ ಯೋಜನೆಗಳನ್ನು ಸ್ಥಾಪಿಸಲು ಹೊರಟಿದೆ. ಆ ಮೂಲಕ ಕನ್ನಡಿಗರ ತಾಳ್ಮೆಯನ್ನು ಅದು ಪರೀಕ್ಷಿಸುತ್ತಿದ್ದರೆ ಕರ್ನಾಟಕ ಸರ್ಕಾರ ಅದನ್ನು ಧೈರ್ಯವಾಗಿ ಎದುರಿಸುವ ಎದೆಗಾರಿಕೆಯನ್ನು ತೋರದೇ ನಾಮರ್ದನಂತೆ ವರ್ತಿಸುತ್ತಿದೆ. ಮೊನ್ನೆ ಕೆಲವು ಕನ್ನಡ ಸಂಘಟನೆಗಳ ನೇತೃತ್ವದಲ್ಲಿ ಕರ್ನಾಟಕದ ರೈತರು ತಮಿಳುನಾಡಿನ ಈ ಧೋರಣೆಯ ವಿರುದ್ಧ ಪ್ರತಿಭಟನೆ ನಡೆಸಿರುವುದು ಸಾಂಕೇತಿಕವೆಂಬಂತೆ ಕಾಣಬಹುದಾದರೂ ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳು ಈಗಲೇ ಎಚ್ಚೆತ್ತುಕೊಂಡು ವಿವಾದವನ್ನು ಮಾತುಕತೆಯ ಮೂಲಕ ಬಗೆಹರಿಸದಿದ್ದರೆ ಮುಂದೆ ಆಗಬಹುದಾದ ಅನಾಹುತಗಳ ಮುನ್ಸೂಚನೆ ಕೂಡ ಹೌದು.

ಏನಿದು ಹೊಗೇನಕಲ್ ವಿವಾದ?

ಕಾವೇರಿ ನದಿಯು ತನ್ನ ಕ್ರಮಗತಿಯಲ್ಲಿ ಹರಿಯುತ್ತಾ ಕರ್ನಾಟಕ ಮತ್ತು ತಮಿಳುನಾಡುಗಳ ಗಡಿ ಭಾಗದ ಹೊಗೇನಕಲ್ ಎಂಬಲ್ಲಿ ಒಂದು ನಡುಗಡ್ಡೆಯನ್ನು, ಜಲಪಾತವನ್ನೂ ಸೃಷ್ಟಿಸಿದೆ. ಈ ನಡುಗಡ್ಡೆಯ ಮುಕ್ಕಾಲು ಭಾಗ ವಾಸ್ತವದಲ್ಲಿ ಕರ್ನಾಟಕಕ್ಕೆ ಸೇರಬೇಕು. ಆದರೆ, ತನ್ನ ಮೊಂಡು ವಾದಕ್ಕೆ ಪ್ರಸಿದ್ಧಿಯಾಗಿರುವ ತಮಿಳುನಾಡು ಇಡೀ ದ್ವೀಪ ತನ್ನದೇ ಸ್ವಾಮ್ಯಕ್ಕೆ ಒಳಪಟ್ಟಿದೆ ಎಂದು ವಾದಿಸುತ್ತಾ ದ್ವೀಪದ ಬಹುತೇಕ ಭಾಗವನ್ನು ಅತಿಕ್ರಮಿಸಿದೆ; ಅಲ್ಲಿ ವೀಕ್ಷಣ ಗೋಪುರ, ತೂಗುಸೇತುವೆ, ತಡೆಗೋಡೆ ಮೆಟ್ಟಲು ಮುಂತಾದವುಗಳನ್ನು ನಿರ್ಮಿಸಿಕೊಂಡಿದೆ.


ರಾಜ್ಯದ ಗಡಿಯಲ್ಲಿ ತಮಿಳುನಾಡು ಸರ್ಕಾರ ಇಂತಹದೊಂದು ಭೂಕಬಳಿಕೆ ನಡೆಸಿದ್ದನ್ನು ಕೆಲವು ಪತ್ರಿಕೆಗಳು ಈ ಹಿಂದೆಯೇ ವರದಿ ಮಾಡಿ ಕರ್ನಾಟಕ ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸಿದ್ದವು. ಮಹಾದೇವ ಪ್ರಸಾದ್ ಚಾಮರಾಜನಗರದ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ವಿಧಾನಸಭೆಯಲ್ಲೂ ಈ ಬಗ್ಗೆ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸಿದ್ದರು. ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಚಂದ್ರಶೇಖರಯ್ಯನವರು ಸ್ಥಳಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಜಿಲ್ಲಾ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರಾಗಿದ್ದ ಸುರೇಶ್ ನೇತೃತ್ವದಲ್ಲಿ ಒಂದು ತಂಡವನ್ನೂ ರಚಿಸಿದ್ದರು. ಹತ್ತು ಸರ್ಕಾರಿ ಅಧಿಕಾರಿಗಳು ಮತ್ತು ಕೆಲವು ಸಾರ್ವಜನಿಕರನ್ನು ಒಳಗೊಂಡ ಈ ಸಮಿತಿಯು ತಮಿಳುನಾಡು ಕರ್ನಾಟಕಕ್ಕೆ ಸೇರಿದ ಹೊಗೇನಕಲ್ ನಡುಗಡ್ಡೆಯನ್ನು ಅತಿಕ್ರಮಣ ಮಾಡಿರುವುದಾಗಿ ಮೇಲ್ನೋಟಕ್ಕೇ ಕಾಣುತ್ತಿದೆಯೆಂದು ತಿಳಿಸಿತ್ತು. ಅಲ್ಲದೇ, ತಮಿಳುನಾಡು ಮತ್ತು ಕರ್ನಾಟಕ ಸರ್ಕಾರಗಳೆರಡೂ ಈ ಪ್ರದೇಶದ ಮರುಸರ್ವೇ ಕಾರ್ಯವನ್ನು ಜಂಟಿಯಾಗಿ ನಡೆಸಿ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳಬೇಕೆಂದೂ ಅದು ತಿಳಿಸಿತ್ತು.

ಆದರೆ ಇಂತಹದೊಂದು ಜಂಟಿ ಸರ್ವೇ ಕಾರ್ಯವನ್ನು ನಡೆಸುವ ಇಂಗಿತವನ್ನು ಕರ್ನಾಟಕ ಸರ್ಕಾರ ಆರಂಭದಲ್ಲಿ ತೋರಲಿಲ್ಲ. ಜೊತೆಗೆ ತಮಿಳುನಾಡು ಕೂಡ ತಡಮಾಡದೇ ಅವಸರವಸರವಾಗಿ ಈ ಪ್ರದೇಶದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡು ಈ ಪ್ರದೇಶ ತನ್ನದೇ ಎಂಬ ಸೂಚನೆಯನ್ನು ಕರ್ನಾಟಕಕ್ಕೆ ಮತ್ತೊಮ್ಮೆ ರವಾನಿಸಿತು.


ಅಲ್ಲಿಯವರೆಗೂ ಸಂಯಮದಿಂದ ಕಾಯ್ದಿದ್ದ ಕನ್ನಡಪರ ಸಂಘಟನೆಗಳು ಕೊನೆಗೆ 'ಹೊಗೇನಕಲ್ ಜಲಪಾತ ಉಳಿಸಿ' ಎಂಬ ವಿಶಾಲ ಘೋಷಣೆಯಡಿ ಸಂಘಟಿತವಾಗಿ ಹೋರಾಟಕ್ಕೆ ಸಜ್ಜಾಗಿಬಿಟ್ಟವು. ಇದಕ್ಕೆ ಜಿಲ್ಲಾಭಿವೃದ್ಧಿ ಹೋರಾಟ ಸಮಿತಿಯೂ ಜೊತೆಗೂಡಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲು ನಿರ್ಧರಿಸಿಬಿಟ್ಟವು. ಚಾಮರಾಜನಗರ, ಕೊಳ್ಳೇಗಾಲ ಮತ್ತಿತರ ಪ್ರದೇಶಗಳಿಂದ ಹಲವಾರು ಬಸ್ಸು, ಲಾರಿ, ಕಾರುಗಳಲ್ಲಿ ನೂರಾರು ಸಂಖ್ಯೆಯಲ್ಲಿ ತೆರಳಿದ ಕನ್ನಡಿಗರು ಹೊಗೇನಕಲ್ಲಿನಲ್ಲಿ ಪ್ರತಿಭಟನೆಯನ್ನೂ ನಡೆಸಿದರು. ಇದರಿಂದ ತಮಿಳುನಾಡಿನ ವಿಧಾನಸಭೆಯಲ್ಲೂ ಈ ಕುರಿತು ಚರ್ಚೆಗಳಾರಂಭವಾದವು. ಆಗಲೇ ಅಲ್ಲಿಯ ತನಕ ಕುಂಭಕರ್ಣ ನಿದ್ರೆಯಲ್ಲಿದ್ದ ಕರ್ನಾಟಕ ಸರ್ಕಾರ ನಿಧಾನವಾಗಿ ಕಣ್ಣು ಬಿಟ್ಟಿದ್ದು! ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಮಹದೇವ ಪ್ರಸಾದ್ ಅವರು ತಕ್ಷಣ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್

...ಸಂಘಟನೆಯಲ್ಲೂ ಕುಪೇಂದ್ರರೆಡ್ಡಿ, ಕಂಟ್ರಾಕ್ಟರ್ ...ರಾಮರೆಡ್ಡಿಯಂಥವರೇ ಪ್ರಭಾವಿಗಳಾಗಿಬಿಟ್ಟಿದ್ದರು. ...ವ್ಯಕ್ತವಾಗಿ ಕೆಐಎಡಿಬಿಯ ಹಗಲು ದರೋಡೆಯನ್ನು ...ಬಿಟ್ಟ ಹಾಕಿದ ಇಂಥ ಖದೀಮರೇ ಇವತ್ತು ...ಮಲಿಂಗಾರೆಡ್ಡಿ, ಕೆ.ಬಿ. ಮುನಿವೆಂಕಟರೆಡ್ಡಿ, ಜ್ಯೋತಿರೆಡ್ಡಿ, ...ಪಿಎಸ್ ಅಧಿಕಾರಿ ಕೆ.ಸಿ. ರಾಮಮೂರ್ತಿಯಂಥವರನ್ನು ...ಂದಿಟ್ಟುಕೊಂಡು ಸಮಾವೇಶಕ್ಕೆ ಮುಂದಾಗಿದ್ದಾರೆ.


ವಿಚಿತ್ರವೆಂದರೆ ವಿರೋಧಿ ...ಮುಖ ಎಚ್.ಕೆ. ಪಾಟೀಲರನ್ನು ...ಗತ ಸಮಿತಿಗೆ ...ಕಿಕೊಂಡಿರುವುದು. ಜೊತೆಗೇ ...ಿ ಖದೀಮ ಜನಾರ್ದನರೆಡ್ಡಿಯ ...ಾ ಅಣ್ಣ ಬಳ್ಳಾರಿಯ ಮಾಜಿ ...ೇಯರ್ ಸೋಮಶೇಖರರೆಡ್ಡಿಯೂ ...ಗತ ಸಮಿತಿಯಲ್ಲಿದ್ದಾನೆ. ಈತನಕ ...ಂಗಾಯತರ ನಾಯಕರಂತಿದ್ದ ...ಚ್.ಕೆ. ಪಾಟೀಲರನ್ನು ಬಹುಶಃ ...ಿ ಲಿಂಗಾಯತರೆಂದು ಬಗೆದು ...ಮ್ಮ ಜೊತೆ ಹಾಕಿಕೊಳ್ಳುವ ...ಡ್ಡಿಗಳ ಉದ್ದೇಶ ಸ್ವಾಗತಾರ್ಹವೆ. ...ುಂಬರುವ ಚುನಾವಣೆಯಲ್ಲಿ ...ಂಗಳೂರೊಂದರಲ್ಲೇ ಕನಿಷ್ಠ ಎಂಟು ...ಂದಿ ರೆಡ್ಡಿಗಳು ಶಾಸಕರಾಗುತ್ತಾರೆ. ...ತ್ತೀಚೆಗೆ ಬಿಜೆಪಿಗೆ ಬಂದ ...ಾದ್‌ರೆಡ್ಡಿ ಎಂಬ ಭೂಗಳ್ಳ ...ಮ್ಮನಹಳ್ಳಿಯಿಂದ ...ಕ್ಕಳಿಯಲು ಗಣಿ ರೆಡ್ಡಿಯನ್ನು ...ಂದಿಟ್ಟುಕೊಂಡು ...ಬಗಿಳಿದಿದ್ದಾನೆ. ಕುಪೇಂದ್ರರೆಡ್ಡಿಗೆ ...ಾಸ ಕೆ.ಆರ್. ಪುರಂ ವಿಧಾನಸಭಾ ...ತ್ರದಿಂದ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿ ...ರ್ಊರು ಕೃಷ್ಣಪ್ಪನನ್ನು ತುಳಿಯುವ ...ರಾಶೆ ಹುಟ್ಟಿದೆ. ಇದ್ದುದರಲ್ಲಿ ...ಗ್ಯನಾದ ನಂದೀಶ್‌ರೆಡ್ಡಿ ಸಿ.ವಿ. ...ಮನ್ ನಗರಕ್ಕೋ ಕೆ.ಆರ್. ...ದಕ್ಕೋ ಭಾವಿ ಎಮ್ಮೆಲ್ಲೇ ...ಾಂಕ್ಷಿ. ವರ್ತೂರಿನ ಮಾಜಿ ...ಸಕ ಅಶ್ವತ್ಥ ನಾರಾಯಣರೆಡ್ಡಿ ...ಡಿಎಸ್ ತೊರೆದು ಬಿಜೆಪಿಗೆ ಬಂದಮೇಲೆ ಹೇಳ ಹೆಸರಿಲ್ಲದಂತಾಗಿದ್ದ, ಈಗ ರೆಡ್ಡಿಗಳ ರ‍್ಯಾಲಿಯ ನೆಪದಲ್ಲಿ ಬಿಜೆಪಿ ಟಿಕೆಟ್ ಗಿಟ್ಟಿಸಲು ಹಿಂಜರಿಯಲಾರ.



ಜಯರಾಮ್‌ರೆಡ್ಡಿ



ಪಾಪಣ್ಣ ರೆಡ್ಡಿ



ಕುಪೇಂದ್ರ ರೆಡ್ಡಿ

ಇದು ಪಕ್ಕದ ಕೋಲಾರ ಜಿಲ್ಲೆಗೂ ವ್ಯಾಪಿಸಿದೆ. ಚಿಂತಾಮಣಿಯ ಕೃಷ್ಣಾರೆಡ್ಡಿ, ಗೌರಿಬಿದನೂರಿನ ಜ್ಯೋತಿರೆಡ್ಡಿಯಂಥ ಸಭ್ಯ ರಾಜಕಾರಣಿಗಳಿಗೂ ಅಷ್ಟಿಷ್ಟು ಆಕ್ಸಿಜನ್ ಸಿಕ್ಕಂತಾಗುತ್ತದೆ. ಈ ಮಧ್ಯೆ ಹಿರಿಯ ಐಪಿಎಸ್ ಅಧಿಕಾರಿ ಕೆ.ಸಿ. ರಾಮಮೂರ್ತಿ ವಿಶೇಷವಾಗಿ ರೆಡ್ಡಿಗಳ ಸಂಘಟನೆಗಿಳಿದಿರುವುದು ರ‍್ಯಾಲಿಗೆ ಬಲತಂದುಕೊಟ್ಟಿದೆ ನಿಜ. ರಾಮಮೂರ್ತಿ ಸರ್ ಸಿ.ವಿ. ರಾಮನ್ ನಗರಕ್ಕೆ ಜೆಡಿಎಸ್ ಅಭ್ಯರ್ಥಿಯಾಗುತ್ತಾರೆಂದೇ ಜನ ಭಾವಿಸಿದ್ದರು. ಆದರೆ ಗಣಿಕಳ್ಳ ಜನಾರ್ದನ ರೆಡ್ಡಿ ಅವರನ್ನು ತನ್ನ ಜೊತೆ ಹಾಕಿಕೊಳ್ಳಲು ಬಲೆ ಬೀಸಿದ್ದಾನೆ. ಈ ಪೈಕಿ ಆ ಕಾಲದಿಂದಲೂ ರೆಡ್ಡಿಗಳ ಸಂಘಟನೆಯಲ್ಲಿರುವವನು ಮೋ.ಮು. ಆಂಜನಪ್ಪರೆಡ್ಡಿ. ಈತ ಸಿದ್ಧರಾಮಯ್ಯನವರ ಶಿಷ್ಯ. ಪುಲಿಕೇಶಿ ನಗರಕ್ಕೋ ಸಿ.ವಿ. ರಾಮನ್‌ನಗರಕ್ಕೋ ಯಾವ ಪಾರ್ಟಿ ಟಿಕೆಟ್ ಕೊಟ್ಟರೂ ನಿಲ್ಲುತ್ತಾನೆ. ಖದೀಮ ಕಂಟ್ರಾಕ್ಟರ್ ಜಯರಾಮ್‌ರೆಡ್ಡಿ ಕೂಡ ಎಮ್ಮೆಲ್ಲೇ ಟಿಕೆಟ್ ಆಕಾಂಕ್ಷಿಯೆ. ಇಂಥ ರಾಜಕೀಯ ಮಹತ್ವಾಕಾಂಕ್ಷೆಯ ರೆಡ್ಡಿ ನಾಯಕರನ್ನು ತನ್ನ ಬುಟ್ಟಿಗೆ ಹಾಕಿಕೊಂಡು ತಾನೇ ಕರ್ನಾಟಕದ ರೆಡ್ಡಿಗಳ ನಾಯಕನೆಂದು ಹೊರಹೊಮ್ಮುವ ದುರಾಲೋಚನೆ ಬಳ್ಳಾರಿಯ ಜನಾರ್ದನ್ ರೆಡ್ಡಿಯ ತಲೆ ಹೊಕ್ಕಿದೆ.

ರೆಡ್ಡಿಗಳು ಒಗ್ಗಟ್ಟಾಗಿ ತಮ್ಮ ಏಳಿಗೆ ಸಾಧಿಸುವುದು, ಈ ನಿಟ್ಟಿನಲ್ಲಿ ತಡವಾಗಿಯಾದರೂ ಎಚ್ಚೆತ್ತುಕೊಂಡಿರುವುದು ಸಂತೋಷದ ಸಂಗತಿಯೆ. ಆಂಧ್ರದ ರೆಡ್ಡಿಗಳಂತೆ ಕರ್ನಾಟಕದ ರೆಡ್ಡಿಗಳು ಆಕ್ರಮಣಕಾರಿಗಳಲ್ಲ, ತೀರ ಜಾತಿವಾದಿಗಳೂ ಅಲ್ಲ. ಕೆಲವೇ ರೆಡ್ಡಿಗಳು ಭೂಕಬಳಿಕೆಗಿಳಿದ ಮಾತ್ರಕ್ಕೇ ಎಲ್ಲಾ ರೆಡ್ಡಿಗಳೂ ಸೊಕ್ಕಿನವರಲ್ಲ. ಅವರಲ್ಲೂ ದಾರಿದ್ರ್ಯವಿದೆ. ಮೌಢ್ಯವಿದೆ. ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಅವರು ಏಳಿಗೆಯಾದರೆ ಕರ್ನಾಟಕಕ್ಕದು ಹೆಗ್ಗಳಿಕೆಯಲ್ಲದೇ ಮತ್ತೇನಲ್ಲ. ಆದರೆ ರೆಡ್ಡಿಗಳ ಒಗ್ಗಟ್ಟು ಜನಾರ್ದನ್ ರೆಡ್ಡಿಯಂಥವರ ಕೊಬ್ಬು ಹೆಚ್ಚಿಸಬಾರದಲ್ಲವೆ?

ಈ ನಿಟ್ಟಿನಲ್ಲಿ ರೆಡ್ಡಿಗಳು ಮತ್ತೊಮ್ಮೆ ಯೋಚಿಸಬೇಕಿದೆ. ಯಾವುದೇ ಕಾರಣಕ್ಕೂ ಗಣಿ ರೆಡ್ಡಿಗಳಿಗಿದು ವೇದಿಕೆಯಾಗದ ಹಾಗೆ, ಕುಪೇಂದ್ರರೆಡ್ಡಿ, ರೆಡ್ಡಿ ವೀರಣ್ಣ, ಜೈರಾಮ್‌ರೆಡ್ಡಿಯಂಥ ಭೂಕಂಟಕರಿಗೆ ಬಳಕೆಯಾಗದ ಹಾಗೆ ಎಚ್ಚರ ವಹಿಸಬೇಕಿದೆ. ವಿಶೇಷವಾಗಿ ರಾ.ಲಿಂ.ರೆಡ್ಡಿ, ಮುನಿವೆಂಕಟರೆಡ್ಡಿ, ಕೃಷ್ಣಾರೆಡ್ಡಿಯಂಥವರು ನಾಯಕತ್ವ ತಮ್ಮ ಕೈತಪ್ಪದ ಹಾಗೇ ನೋಡಿಕೊಳ್ಳಬೇಕಿದೆ.

■ ರಾ. ಸೋಮನಾಥ್



ಭೂಮಿಗಾಗಿ ಬೀದಿಗಿಳಿದ ರೆಡ್ಡಿಗಳು

ಉಲ್ಟಾ ಹೊಡೆದ ಒಳಮೀಸಲಾತಿ

ಬೆಂಗಳೂರಿನ ಒಕ್ಕಲಿಗರಿಗೆ ಹೋಲಿಸಿದರೆ ಕಾಂಟ್ರಾಕ್ಟ್, ರಿಯಲ್ ಎಸ್ಟೇಟ್ ಮತ್ತು ಟ್ರಾನ್ಸ್‌ಪೋರ್ಟ್ ದಂಧೆಗಳಲ್ಲಿ ಇವತ್ತಿಗೂ ರೆಡ್ಡಿಗಳೇ ಮುಂದಿದ್ದಾರೆ. ಬೆಂಗಳೂರು ಸುತ್ತಮುತ್ತಲ ಭೂಮಿ ಒಕ್ಕಲಿಗರ ಕೈತಪ್ಪಿದ್ದರೂ ರೆಡ್ಡಿಗಳು ಮಾತ್ರ ರಿಯಲ್ ಎಸ್ಟೇಟ್ ದಂಧೆಯನ್ನೇ ಮುಖ್ಯ ಕಸುಬನ್ನಾಗಿ ಮಾಡಿಕೊಂಡರು. ಕಾಂಟ್ರಾಕ್ಟ್ ಮತ್ತು ರಿಯಲ್ ಎಸ್ಟೇಟ್‌ನಿಂದಾಗಿ ಆರ್ಥಿಕವಾಗಿ ಬಲಾಢ್ಯರಾದ ರೆಡ್ಡಿಗಳು ಶೈಕ್ಷಣಿಕವಾಗಿ ಒಕ್ಕಲಿಗರಂತೆ ಬೃಹತ್ ಶಿಕ್ಷಣ ಸಂಸ್ಥೆಗಳನ್ನು ಕಟ್ಟಲಿಲ್ಲ.

ಒಕ್ಕಲಿಗರ ಏಕತೆಗೆಂದು ಆದಿಚುಂಚನಗಿರಿ ಸ್ವಾಮಿಗಳು ಗೌಡ, ರೆಡ್ಡಿ, ಬಂಟರೆಲ್ಲ ಒಂದೇ ಎಂದರೂ ತಮ್ಮ ಮೆಡಿಕಲ್, ಇಂಜನಿಯರಿಂಗ್ ಕಾಲೇಜುಗಳಲ್ಲಿ ರೆಡ್ಡಿಗಳಿಗೆಂದೇ ಪ್ರತ್ಯೇಕ ಸೀಟು ಕೊಡುವುದಿಲ್ಲ. ಹಾಗೆ ಒಕ್ಕಲಿಗರ ಸಂಘದ ಕಾಲೇಜುಗಳಲ್ಲೂ ರೆಡ್ಡಿಗಳಿಗೆಂದೇ ಪ್ರತ್ಯೇಕ ಸೀಟುಗಳಿಲ್ಲ. ತಾವೂ ಒಕ್ಕಲಿಗರೇ ಎಂದು ರೆಡ್ಡಿಗಳು ಅದೆಷ್ಟೇ ದೊಡ್ಡ ಗಂಟಲಲ್ಲಿ ವಾದಿಸಿದರೂ ಅದನ್ನು ಗೌಡರು ಒಪ್ಪುವುದಿಲ್ಲ. ಅನುಕೂಲಕ್ಕೆ ತಕ್ಕಂತೆ ತಮ್ಮನ್ನು ಬಳಸಿಕೊಂಡು ಅವಕಾಶದಲ್ಲಿ ಮಾತ್ರ ಹೊರಗಿಡುವ ಗೌಡ ರಾಜಕಾರಣಿಗಳ ವಿರುದ್ಧ ರೆಡ್ಡಿಗಳ ಅಸಹನೆಗೊಂದು ಸಂದರ್ಭ ಬೇಕಿತ್ತು. ಪ್ರವರ್ಗ 3A ಅಡಿಯ ಮೀಸಲಾತಿಯಲ್ಲೂ ಗೌಡರ ಕೈಯೇ ಮೇಲಾಗಿದ್ದು ತಮಗೆಂದೇ ಪ್ರತ್ಯೇಕ ಮೀಸಲಾತಿ ಕೇಳುವುದು ರೆಡ್ಡಿಗಳ ರ‍್ಯಾಲಿಯ ಹಿಂದಿನ ಮುಖ್ಯ ಉದ್ದೇಶ. ದೇವೇಗೌಡರು ಬತ್ತಿ ಇಟ್ಟ ಒಳಮೀಸಲಾತಿ ಹುನ್ನಾರ ಕೊನೆಗೆ ಒಕ್ಕಲಿಗರ ಬುಡಕ್ಕೇ ಬಂದುನಿಂತಿದೆ. ಬಹುಶಃ ರ‍್ಯಾಲಿಗೆ ರೆಡ್ಡಿಗಳು ಆದಿಚುಂಚನಗಿರಿ ಸ್ವಾಮಿಗಳನ್ನು ಕರೆಯದೇ ಹೋದರೆಂದರೆ ಅದು ಒಕ್ಕಲಿಗರ ವಿರುದ್ಧದ ಅಸಹನೆಯೆಂದೇ ಅರ್ಥ.

ರೆಡ್ಡಿಗಳ ಹೋರಾಟ ಕೊನೆಗೆ ಎಲ್ಲಿಗೆ ಬಂದು ನಿಲ್ಲುತ್ತೋ, ಯಾರ ಕೈಗೆ ಹೋಗುತ್ತೋ ಗೊತ್ತಿಲ್ಲ. ಹಾಗೊಮ್ಮೆ ಜನಾರ್ದನರೆಡ್ಡಿಯಂಥವರೇನಾದರೂ ಬೇಳೆ ಬೇಯಿಸಿಕೊಂಡರೆಂದರೆ ದೇವೇಗೌಡರಿಗೆ ಅದಕ್ಕಿಂತ ದೊಡ್ಡ ಪೆಟ್ಟಿಲ್ಲ.





ಹೊಗೇನಕಲ್‌ನಲ್ಲಿ ನಡೆಯುತ್ತಿರುವ ಕನ್ನಡಪರ ಸಂಘಟನೆಗಳ ಹೋರಾಟ


...ಪ್ಪಾಧಿಕಾರಿಗಳನ್ನು ಹೊಗೇನಕಲ್‌ಗೆ ಕಳುಹಿಸಿ ...ಮಿಳುನಾಡು ನಡೆಸುತ್ತಿದ್ದ ಅಭಿವೃದ್ಧಿ ...ಾರ್ಯಗಳನ್ನು ತಡೆಹಿಡಿಯಲು ಪ್ರಯತ್ನಿಸಿದರು.

ನಂತರದಲ್ಲಿ ಕರ್ನಾಟಕ ಮತ್ತು ...ಮಿಳುನಾಡುಗಳು ಜೊತೆಗೂಡಿ ಈ ಪ್ರದೇಶದ ...ಂಟಿ-ಸರ್ವೇ ಮಾಡುವ ಕಾರ್ಯಕ್ಕೆ ಚಾಲನೆ ...ದಿತು. ಸರ್ವೇ ಕಾರ್ಯವೂ ಪ್ರಾರಂಭವಾಯಿತು. ...ದರೆ, ಅದು ಮುಂದುವರೆಯಬೇಕಾದ ಗತಿಯಲ್ಲಿ ...ುಂದುವರೆಯಲಿಲ್ಲ. ವಾಸ್ತವದಲ್ಲಿ ...ಂತಹದೊಂದು ಸರ್ವೇ ಮಾಡುವುದೇ ...ಮಿಳುನಾಡಿಗೆ ಬೇಡವಾಗಿತ್ತು. ಹಾಗಾಗಿ, ...ುನಾವಣೆ, ಮಳೆಗಾಲ ಮುಂತಾದ ನೆಪಗಳನ್ನು ...ಡ್ಡುತ್ತಾ ಸರ್ವೇ ಕಾರ್ಯ ಸುಗಮವಾಗಿ ...ಡೆಯದಂತೆ ನೋಡಿಕೊಂಡಿತು. ಅಲ್ಲದೇ ...ರ್ನಾಟಕ ಸರ್ಕಾರವೂ ಕೂಡ ಜನ ಒತ್ತಡಕ್ಕೆ ...ಣಿದು ಇಂತಹ ಒಂದು ಸರ್ವೇ ಕಾರ್ಯಕ್ಕೆ ...ುಂದಾಗಿತ್ತೇ ವಿನಃ ಈ ಪ್ರದೇಶದ ಬಗ್ಗೆ ಅದಕ್ಕೂ ...ಸಕ್ತಿಪೂರ್ವಕ ಕಾಳಜಿಯಿರಲಿಲ್ಲ. ಹಾಗಾಗಿ ಈ ...ಂಟಿ ಸರ್ವೇಕ್ಷಣಾ ಕಾರ್ಯಕ್ಕೆ ಬಿಡುಗಡೆ ...ಾಡಿದ್ದು ಕೇವಲ ಎರಡು ಲಕ್ಷದ ಇಪ್ಪತ್ತು ಸಾವಿರ ...ಾತ್ರ! ಅದನ್ನೂ ಕೂಡ ಸರಿಯಾಗಿ ಒದಗಿಸಿಲ್ಲ. ...ದು ನಿರ್ಲಕ್ಷ್ಯವಲ್ಲದೇ ಮತ್ತೇನು?

ಇದೀಗ ತಮಿಳುನಾಡು ಸರ್ಕಾರ ...ಹೊಗೇನಕಲ್‌ನಲ್ಲಿ ತನ್ನ ಅಭಿವೃದ್ಧಿ ಕಾಮಗಾರಿಗಳನ್ನು ...ಮುಂದುವರಿಸಿದೆ. ಇತ್ತು, ಇತ್ತೀಚೆಗೆ ಇಲ್ಲಿ ಕಾವೇರಿ ನದಿ ನೀರನ್ನು ಬಳಸಿಕೊಳ್ಳುವ ಕುಡಿಯುವ ನೀರಿನ ಯೋಜನೆಗೆ ಅದು ಶಂಕುಸ್ಥಾಪನೆಯನ್ನೂ ಮಾಡಿದೆ. ನಿಜ ಹೇಳಬೇಕೆಂದರೆ, ಈ ರೀತಿಯ ಯೋಜನೆಯನ್ನು ಪ್ರಾರಂಭಿಸುವುದು ಕಾವೇರಿ ನ್ಯಾಯಾಧೀಕರಣ ನೀಡಿದ ಅಂತಿಮ ತೀರ್ಪಿನ ಉಲ್ಲಂಘನೆಯೂ ಆಗುತ್ತದೆ. ಏಕೆಂದರೆ, ಕಾವೇರಿ ನ್ಯಾಯಾಧೀಕರಣದ ತೀರ್ಪಿನ ಪ್ರಕಾರ ಕರ್ನಾಟಕವು ತಮಿಳುನಾಡಿಗೆ ಬಿಡಬೇಕಾದ ನೀರಿನ ಪ್ರಮಾಣವನ್ನು ತಮಿಳುನಾಡಿನ ಬಿಳಿಗುಂಡ್ಲು ಜಲಾಶಯದಲ್ಲಿ ಅಳತೆ ಮಾಡಬೇಕು. ಬಿಳಿಗುಂಡ್ಲು ಇರುವುದು ಹೊಗೇನಕಲ್ ಆದಮೇಲೆ. ಕಾವೇರಿ ನದಿಯು ಕರ್ನಾಟಕದ ಗಡಿ ದಾಟಿದ ಮೇಲೆ ಬಿಳಿಗುಂಡ್ಲು ಜಲಾಶಯ ತಲುಪುವವರೆಗೆ ತಮಿಳುನಾಡು ಸರ್ಕಾರ ಕಾವೇರಿ ನದಿ ನೀರನ್ನು ಬಳಸಿಕೊಳ್ಳುವ ಯಾವುದೇ ಯೋಜನೆಯನ್ನು ಹಮ್ಮಿಕೊಳ್ಳುವಂತಿಲ್ಲ. ಏಕೆಂದರೆ, ಬಿಳಿಗುಂಡ್ಲು ಜಲಾಶಯಕ್ಕಿಂತ ಮೊದಲೇ ತಮಿಳುನಾಡು ವಿವಿಧ ಯೋಜನೆಗಳ ಮೂಲಕ ಬಳಸಿಕೊಳ್ಳುವ ನೀರು ಲೆಕ್ಕಕ್ಕೇ ಬರುವುದಿಲ್ಲ. ಆದರೆ ಕಾವೇರಿ ನ್ಯಾಯಾಧೀಕರಣ ತೀರ್ಪನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದ ತಮಿಳುನಾಡು ಹೊಗೇನಕಲ್‌ನಲ್ಲಿ ಕುಡಿಯುವ ನೀರಿನ ಯೋಜನೆಗೆ ಶಂಕುಸ್ಥಾಪನೆ ಮಾಡಿದೆ. ಅಂದರೆ, ಕಾವೇರಿ ನೀರು ಬಿಳಿಗುಂಡ್ಲು ಜಲಾಶಯಕ್ಕೆ ತಲುಪುವ ಮೊದಲೇ ಬೇಕಾದಷ್ಟು ನೀರನ್ನು ಹೊಗೇನಕಲ್‌ನಲ್ಲಿಯೇ ಬಳಸಿಕೊಂಡು, ಮತ್ತೆ ಬಿಳಿಗುಂಡ್ಲು ಜಲಾಶಯದಲ್ಲಿ ತನಗೆ ಬರಬೇಕಾದಷ್ಟು ನೀರನ್ನು ಕರ್ನಾಟಕ ಬಿಟ್ಟಿಲ್ಲ ಎಂದು ತಗಾದೆ ತೆಗೆಯುವುದು ಅದರ ಉದ್ದೇಶ.

ಬೀದಿಗಿಳಿದ ಕನ್ನಡಿಗರು!

ತಮಿಳುನಾಡಿನ ಈ ಕುತ್ಸಿತ ಬುದ್ಧಿ ಕರ್ನಾಟಕದ ಜನಪರ ಮತ್ತು ಕನ್ನಡಪರ ಸಂಘಟನೆಗಳನ್ನು, ರೈತರನ್ನು ಈಗ ರೊಚ್ಚಿಗೆಬ್ಬಿಸಿದೆ. ತಮ್ಮ ನೆಲವನ್ನು ಕಬಳಿಸಿದ್ದೂ ಅಲ್ಲದೇ ಕಾವೇರಿ ನದಿನೀರಿನ ಹಂಚಿಕೆಯಲ್ಲೂ ಅಗಾಧ ಪ್ರಮಾಣದ ಮೋಸ ಮಾಡುತ್ತಿರುವ ತಮಿಳುನಾಡಿನ ವಿರುದ್ಧ ಈಗ ಬೀದಿಗಿಳಿದಿದ್ದಾರೆ. ಮೊನ್ನೆ ಫೆಬ್ರವರಿ 26ರಂದು ಹೊಗೆನೇಕಲ್‌ಗೆ ಪ್ರತಿಭಟನೆಗಾಗಿ ತೆರಳಿದ್ದ ಜನರನ್ನು ಕರ್ನಾಟಕದ ಅರಣ್ಯ ಇಲಾಖೆಯ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ತಡೆದು ಪ್ರತಿಭಟನೆಗೆ ಅಡ್ಡಿಪಡಿಸಿದರು. ಸಿಟ್ಟಿಗೆದ್ದ ಪ್ರತಿಭಟನಾಕಾರರು ಪೊಲೀಸರ ಮೇಲೆಯೇ ತಿರುಗಿಬಿದ್ದ ಪರಿಣಾಮವಾಗಿ ಉದ್ವಿಗ್ನ ಪರಿಸ್ಥಿತಿಯೂ ನಿರ್ಮಾಣವಾಯಿತು. ವಾಸ್ತವದಲ್ಲಿ ಎರಡು ದಿನಗಳ ಹಿಂದೆ ನಡೆದ ಸಭೆಯಲ್ಲಿ ಅರಣ್ಯ ಸಂರಕ್ಷಣಾಧಿಕಾರಿ ನಾಗರಾಜು ಅವರೇ ಖುದ್ದಾಗಿ ಪ್ರತಿಭಟನಾಕಾರರನ್ನು ಹೊಗೇನಕಲ್ ನಡುಗಡ್ಡೆಗೆ ಕರೆದುಕೊಂಡು ಹೋಗುವುದಾಗಿ ಹೇಳಿದ್ದರು. ಆದರೆ, ಯಾವಾಗ ಜನರೆಲ್ಲ ಪ್ರತಿಭಟನೆಗೆ ಸಿದ್ಧರಾದರೋ ಇದೇ ನಾಗರಾಜ್ ಮತ್ತು ಕಾವೇರಿ ವನ್ಯಜೀವಿ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಗೀತಾಂಜಲಿಯವರು ಪ್ರತಿಭಟನೆಗೆ ಅಡ್ಡಿಪಡಿಸಲಾರಂಭಿಸಿದರು. ನಡುಗಡ್ಡೆಗೆ ಹೋಗುವುದಕ್ಕೆ ಪ್ರತಿಭಟನಾಕಾರರಿಗೆ ಅವಕಾಶ ಕೊಡದೇ ಕೇವಲ ಪೊಲೀಸರಿಗೆ ಮಾತ್ರವೇ ಅವಕಾಶ ಕೊಡುವ ಮೂಲಕ ರಾಗ ಬದಲಿಸಿಬಿಟ್ಟರು. ನಂತರ ಪೊಲೀಸರು ಮತ್ತು ಪ್ರತಿಭಟನಾಕಾರರಿಗೆ ತೀವ್ರ ವಾಗ್ವಾದ, ನೂಕಾಟವಾಗಿ ಪ್ರತಿಭಟನಾಕಾರರನ್ನು ಬಂಧಿಸಲಾಯಿತು.



ಅರಣ್ಯ ಸಕ್ಕೆ ಮಾಹಿತಿ ನೀಡುತ್ತಿರುವ ಅರಣ್ಯಾಧಿಕಾರಿ ಗೀತಾಂಜಲಿ

ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಮೊನ್ನೆ ಏನೇ ನಡೆದಿದ್ದರೂ ಅದು ಮುಂಬರುವ ಬೃಹತ್ ಹೋರಾಟದ ಮುನ್ಸೂಚನೆಯಷ್ಟೇ. ಕಾವೇರಿ ನದಿ ನೀರಿನ ಹಂಚಿಕೆಯಲ್ಲೂ ಕರ್ನಾಟಕಕ್ಕೆ ಚಾರಿತ್ರಿಕವಾಗಿ ಅನ್ಯಾಯವಾಗಿದೆ. ಕರ್ನಾಟಕದ ಕನಕಪುರ ಭಾಗದ ಮೇಕೆದಾಟು ಪ್ರದೇಶದಲ್ಲಿ ಸಣ್ಣದೊಂದು ಸೇತುವೆ ನಿರ್ಮಾಣ ಮಾಡುವುದಕ್ಕೆ ಕರ್ನಾಟಕ ಸರ್ಕಾರ ಮುಂದಾದಾಗ 'ಇದು ನ್ಯಾಯಾಧೀಕರಣ ತೀರ್ಪಿನ ಉಲ್ಲಂಘನೆ' ಎಂದು ತಮಿಳುನಾಡು ಕೂಗಾಡಿತ್ತು. ಜಲಾನಯನ ಪ್ರದೇಶದಲ್ಲಿ ಕರ್ನಾಟಕ ಸಣ್ಣ ಅಭಿವೃದ್ಧಿಕಾರ್ಯ ಕೈಗೊಳ್ಳುವುದಕ್ಕೂ ಅದು ಅಡ್ಡಿಪಡಿಸುತ್ತಲೇ ಬಂದಿದೆ. ಈಗ ಇವೆಲ್ಲಾ ಗಾಯದ ಮೇಲೆ ಬರೆ ಎಳೆದಂತೆ ಅದು ಹೊಗೇನಕಲ್ಲಿನಲ್ಲೂ ಕಿತಾಪತಿ ನಡೆಸುತ್ತಿದೆ. ಇದನ್ನು ಯಾವುದೇ ಪ್ರಜ್ಞಾವಂತರು ಸಹಿಸಲಾರರು. ತಮಿಳುನಾಡು ಕೂಡಲೆ ತನ್ನ ಕಿತಾಪತಿಗಳನ್ನು ನಿಲ್ಲಿಸದಿದ್ದರೆ, ಕರ್ನಾಟಕ ಸರ್ಕಾರ ಕನ್ನಡಿಗರ ಪರ ದೃಢವಾಗಿ ನಿಲ್ಲದಿದ್ದರೆ ಮುಂದೆ ಆಗಬಹುದಾದ ಅನಾಹುತಗಳಿಗೆ ಈ ಎರಡೂ ಸರ್ಕಾರಗಳೇ ನೇರ ಹೊಣೆಗಾರರಾಗಬೇಕಾಗುತ್ತದೆ.

■ ಕೊಳ್ಳೇಗಾಲ ಚಿಕ್ಕಮಾಳಿಗೆ


ಭದ್ರಾವತಿ

ಪೊಲೀಸ್-ಭೂಮಾಲೀಕರ ಸಂಚಿಗೆ

ದಸಂಸ ನಾಯಕ ಬಲಿ

ಸುಮಾರು ಎರಡೂವರೆ ದಶಕಗಳಿಂದ ದಲಿತ ಸಂಘರ್ಷ ಸಮಿತಿಯ ಹೋರಾಟದ ಭಾಗವಾಗಿ ನೂರಾರು ಜನರಿಗೆ ಭೂಮಿ ಕೊಡಿಸಿ, ಸಹಸ್ರಾರು ದಲಿತರ ಬದುಕಿಗೆ ಬೆಳಕಾಗಿದ್ದ ಭದ್ರಾವತಿ ತಾಲ್ಲೂಕಿನ ಕೂಡ್ಲಿಗೆರೆಯ ಹಾಲೇಶಪ್ಪ ಮಾಸ್ತರು ಬರ್ಬರವಾಗಿ ಕೊಲೆಯಾಗಿದ್ದಾರೆ. ಇದುವರೆಗೆ ನಡೆದ ದಲಿತ ನಾಯಕರ ಹಾಗೂ ಕಾರ್ಯಕರ್ತರ ಕೊಲೆಗಳಲ್ಲಿ ಮೇಲ್ಜಾತಿಯವರು ನೇರವಾಗಿ ಭಾಗ ವಹಿಸಿದ್ದರಲ್ಲದೆ, ಪೊಲೀಸರ ಸಹಕಾರದಿಂದ ವ್ಯವಸ್ಥಿತವಾಗಿ ಆ ಕೊಲೆಗಳನ್ನು ಮುಚ್ಚಿಹಾಕಿದ್ದರು. ಆದರೆ ಹಾಲೇಶಪ್ಪ ಮಾಸ್ತರ ಹತ್ಯೆಯಲ್ಲಿ ಅದೇ ಭೂಮಾಲೀಕರು ಭಾಗಿಯಾಗಿದ್ದಾರಲ್ಲದೆ, ಅವರೊಂದಿಗೆ ಗಣಿ ಮಾಫಿಯಾ ಮತ್ತು ಪೊಲೀಸರೂ ಸೇರಿದ್ದಾರೆ ಎನ್ನದೆ ವಿಧಿ ಇಲ್ಲದಂತಾಗಿದೆ.

"ನನ್ನ ಹತ್ಯೆಗೆ ಸಂಚು ರೂಪಿಸಲಾಗಿದೆ, ಕೊಲೆಗಡುಕರಿಗೆ ಈಗಾಗಲೇ ಹಣ ಕೂಡಾ ಸಂದಾಯವಾಗಿದೆ" ಎಂದು ಹಾಲೇಶಪ್ಪ ಪೊಲೀಸ್ ಇಲಾಖೆಗೆ ಪದೇಪದೇ ದೂರು ನೀಡಿದ್ದರು. ಆದರೆ ಅವರ ದೂರನ್ನು ಕೇಳಿಸಿಕೊಳ್ಳದ, ಅವರಿಗೆ ಜೀವ ಬೆದರಿಕೆಯೊಡ್ಡಿದ್ದ ಜನರನ್ನು ವಿಚಾರಿಸದ ಪೊಲೀಸರು ಅವರನ್ನೇ ದಬಾಯಿಸಿ ಕಳುಹಿಸಿದ್ದರು. ಪೊಲೀಸರ ಈ ನಿಷ್ಕ್ರಿಯತೆಯಿಂದಾಗಿಯೇ ಇವತ್ತು ಹಾಲೇಶಪ್ಪನವರ ಕೊಲೆ ನಡೆದಿದೆ.



ಕೊಲೆಯಾದ ಹಾಲೇಶಪ್ಪ ಮಾಸ್ತರ

ಗಣಿ ಮಾಫಿಯಾ

ಕೂಡ್ಲಿಗೆರೆ ಗ್ರಾಮದ ಸರ್ವೆ ನಂ. 157, 159, 176, 46 ರಲ್ಲಿ ಕಳೆದ ಎರಡು ದಶಕಗಳಿಂದಲೂ ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ಮಾಡಲಾಗುತ್ತಿದೆ. **ಕಲ್ಲುಗಳನ್ನು ಸ್ಫೋಟಿಸುವ ಪರವಾನಗಿ ಯಾರಿಗೂ ಕೊಟ್ಟಿಲ್ಲವಾದರೂ ಕಲ್ಲು ಗಣಿಗಾರಿಕೆ ನಡೆಸುವವರೆಲ್ಲರೂ ಮನಬಂದಂತೆ** ಸ್ಫೋಟಕಗಳನ್ನು ಬಳಸುತ್ತಿದ್ದಾರೆ. ಇಲ್ಲಿನ ಶ್ರೀಮಂತರು ಒಂದು ಕಡೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಅಕ್ರಮ ಗಣಿಗಾರಿಕೆ ನಡೆಸುತ್ತಾರಲ್ಲದೆ, ಇನ್ನೊಂದು ಕಡೆ ಪರವಾನಗಿ ಪಡೆದಿರುವ ಅಶಕ್ತರ ಗಣಿಗಳಿಗೂ ನುಗ್ಗಿ ಅವರ ಮೇಲೆ ಹಲ್ಲೆ ನಡೆಸಿ ಅಕ್ರಮವಾಗಿ ಕಲ್ಲುಗಳನ್ನು ದೋಚ ಮಾರಿಕೊಳ್ಳುತ್ತಿದ್ದಾರೆ.

ಕಾಡು, ಗದ್ದೆ-ತೋಟಗಳಿರುವ ಈ ಸುಂದರ ಪರಿಸರದಲ್ಲಿ ವ್ಯಾಪಕವಾಗಿ ಸ್ಫೋಟಕಗಳನ್ನು ಬಳಸುವುದರ ಮೂಲಕ ದೊಡ್ಡ ಮಟ್ಟದಲ್ಲಿ ಇಲ್ಲಿನ ವಾತಾವರಣವನ್ನು ಹಾಳುಗೆಡವುತ್ತಿದ್ದಾರೆ; ಇವರೆಲ್ಲ ಅಕ್ರಮವಾಗಿ ಕಲ್ಲು ಸಾಗಾಟ ಮಾಡುತ್ತಿರುವುದರಿಂದ ರಾಜಧನ (Royalty) ವನ್ನೂ ಸಲ್ಲಿಸದೇ ಸರ್ಕಾರಕ್ಕೆ ಕೋಟಿಗಟ್ಟಲೆ ವಂಚನೆ ಮಾಡುತ್ತಿದ್ದಾರೆ. ಲಾಭಗಳಿಸುವ ಕಳ್ಳದಂಧೆಯ ಪೋಷಣೆಗಾಗಿ ಇವರು ಖಾಸಗೀ ಗೂಂಡಾಗಳ ಪಡೆಗಳನ್ನೂ ಸಾಕಿಕೊಂಡಿದ್ದಾರೆ. ಜೊತೆಗೆ ಪೊಲೀಸರಿಗೆ ಮಾಮೂಲಿ ಕೊಡುವುದರ ಮೂಲಕ ಖಾಕಿಗಳ ಕವಚದ ರಕ್ಷಣೆಯಲ್ಲಿ ಅಕ್ರಮ ಕಲ್ಲು ಸಾಗಾಣಿಕೆದಾರರು ಅವ್ಯಾಹತವಾಗಿ ಪ್ರಕೃತಿಯ ಲೂಟಿಯನ್ನು ಮುಂದುವರೆಸಿದ್ದಾರೆ. ಪರಿಸರವನ್ನು ನಾಶ ಮಾಡುವವರ ವಿರುದ್ಧ ಕೂಡ್ಲಿಗೆರೆಯ ಜನಸಾಮಾನ್ಯರು ಈ ಹಿಂದೆಯೇ ಸಣ್ಣ ದನಿಯಲ್ಲಿ ಪ್ರತಿಭಟಿಸಿದ್ದರು. ಆದರೆ ಕಲ್ಲು ಸಾಗಾಣಿಕೆದಾರರ ಬಾಡಿಗೆ ಗೂಂಡಾಗಳು ಜನರ ಮೇಲೆ ಹಲ್ಲೆಗಳನ್ನು ನಡೆಸಿ ಆರಂಭದಲ್ಲೇ ಇವರ ದನಿಯನ್ನಡಗಿಸಿದ್ದರು.

ಮಾಸ್ತರರ ಹೋರಾಟ

ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಲು ಹಾಲೇಶಪ್ಪ ಮಾಸ್ತರು ಖನಿಜ ಇಲಾಖೆ, ಕಂದಾಯ ಇಲಾಖೆಗಳಿಗೆ ಹತ್ತಾರು ಬಾರಿ ದೂರು ನೀಡಿದ್ದರು. ಆದರೆ ಆ ದೂರುಗಳನ್ನೇ ಆಧಾರ ಮಾಡಿಕೊಂಡ ಇಲಾಖೆಯ ಅಧಿಕಾರಿಗಳು ಗಣಿ ಮಾಲೀಕರ ಹತ್ತಿರ ವಸೂಲಿಗಿಳಿದರೇ ಹೊರತು ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ.

ಈ ಅಕ್ರಮಗಳ ಬಗ್ಗೆ ಕೊನೆಯ ಪ್ರಯತ್ನವೆಂಬಂತೆ ಮಾಸ್ತರು ಪೊಲೀಸರಿಗೆ ಎಲ್ಲ ವಿವರಗಳೊಂದಿಗೆ ದೂರು ನೀಡಿದರು. ಆದರೆ ಮಾಸ್ತರರ ದೂರು ಪೊಲೀಸರಿಗೆ ಲಂಚವನ್ನು ಗುಂಜಿಕೊಳ್ಳುವ ಅಸ್ತ್ರವಾದರೆ ಹಾಲೇಶಪ್ಪ ಮಾಸ್ತರಿಗೆ ಮಾತ್ರ ದಿನದಿಂದ ದಿನಕ್ಕೆ ಬಿಗಿದುಕೊಳ್ಳುವ ನೇಣಿನ ಕುಣಿಕೆಯಾಗಿ ಪರಿಣಮಿಸಿತು.

ಯಾಕೆಂದರೆ, ಭದ್ರಾವತಿಯ ಗ್ರಾಮಾಂತರ ಪೊಲೀಸ್ ಠಾಣೆಯ ಸಿಪಿಐ ನಿತ್ಯಾನಂದ ಮತ್ತು ಪಿಎಸ್‌ಐ ಶ್ರೀಧರಶಾಸ್ತ್ರಿ ನೇರವಾಗಿ ಕ್ವಾರಿ ಉದ್ಯಮಿಗಳೊಂದಿಗೆ ಶಾಮೀಲಾಗಿ ಎಎಸ್‌ಐ ಕೃಷ್ಣಮೂರ್ತಿ, ಪೇದೆಗಳಾದ ಯಲ್ಲಪ್ಪ ಚಂದ್ರಪ್ಪ ಮತ್ತಿತರೆ ಪೊಲೀಸರ ಮೂಲಕ ಕಲ್ಲು ಕಳ್ಳಸಾಗಾಣಿಕೆದಾರರಿಂದ ಪ್ರತೀವಾರ ಹಣ ವಸೂಲಿಯನ್ನು ಶುರುವಿಟ್ಟುಕೊಂಡರು. ಅದರಲ್ಲೂ ಪಿಎಸ್‌ಐ ಶ್ರೀಧರಶಾಸ್ತ್ರಿ ಅಕ್ರಮ ಗಣಿಗಾರಿಕೆ ನಡೆಸುವವರನ್ನು ಹಾಲೇಶಪ್ಪ ಮಾಸ್ತರ ವಿರುದ್ಧವೇ ಎತ್ತಿಕಟ್ಟಿ ಅಕ್ರಮ ಕಲ್ಲು ಸಾಗಾಣಿಕೆದಾರರ ಮನೆಗಳನ್ನೇ ತನ್ನ ಅಡ್ಡೆಗಳನ್ನಾಗಿಸಿಕೊಂಡ. ಅಷ್ಟೇ ಅಲ್ಲದೇ ಹಾಲೇಶಪ್ಪರ ವಿರುದ್ಧವೇ ದಿನಕ್ಕೊಂದು ದೂರು ಕೊಡಲು ಗಣಿ ಮಾಫಿಯಾದವರಿಗೆ ಸಲಹೆ ನೀಡಿದ. ಇದೆಲ್ಲದರಿಂದ ಕಲ್ಲುಗಳ್ಳರ ಹಣದ ಬಲ ಮತ್ತು ಶ್ರೀಧರಶಾಸ್ತ್ರಿಯ ಕುತಂತ್ರಗಳು ಹಾಲೇಶಪ್ಪ ಮಾಸ್ತರಿಗೆ ಸ್ಪಷ್ಟವಾಗಿ ಅರ್ಥವಾಗಿ ಅವರು ಮೇಲಧಿಕಾರಿಗಳ ಮೊರೆ ಹೋದರು.



ಗ್ರಾಮಾಂತರ ಪೊಲೀಸ್ ಠಾಣೆಯ ಎದುರು ಪ್ರತಿಭಟಿಸುತ್ತಿರುವುದು

ಹತ್ಯೆ ಸಂಚು

ಯಾವಾಗ ಹಾಲೇಶಪ್ಪ ಮಾಸ್ತರು ಮೇಲಧಿಕಾರಿಗಳ ಮೊರೆ ಹೋದರೋ ಅಕ್ರಮ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದವರೆಲ್ಲ ಒಗ್ಗಟ್ಟಾಗಿ ತಮ್ಮ ವ್ಯವಹಾರಕ್ಕೆ ಕುತ್ತು ತರುತ್ತಿರುವ ಹಾಲೇಶಪ್ಪ ಮಾಸ್ತರನ್ನು ಕೊಲೆಗೈಯುವ ತೀರ್ಮಾನಕ್ಕೆ ಬಂದರು. ಹಿಂದೆಲ್ಲ ಬಡವರಿಗೆ ಜಮೀನುಗಳನ್ನು ದಕ್ಕಿಸಿಕೊಟ್ಟ ವಿಷಯದಲ್ಲಿ ಮಾಸ್ತರರ ವಿರುದ್ಧ ದ್ವೇಷವನ್ನು ಬೆಳೆಸಿಕೊಂಡಿದ್ದ ಕೂಡ್ಲಿಗೆರೆ ಗ್ರಾಮದ ಬಡ್ಡಿ ವ್ಯಾಪಾರಿಗಳು ಹಾಗೂ ಅಕ್ರಮ ದಂಧೆಯವರು ಮಾಸ್ತರರನ್ನು ಮುಗಿಸಲು ಲೋಕೇಶ, ರವಿ ಮತ್ತು ರಾಮಸ್ವಾಮಿಗೆ ಸುಪಾರಿ ನೀಡಿದರು – ಹೀಗೆಂದು ಕೂಡ್ಲಿಗೆರೆಯ ಜನರೂ ಗುಟ್ಟಾಗಿ ಮಾತನಾಡಿಕೊಳ್ಳಲು ಪ್ರಾರಂಭಿಸಿದ್ದಾರೆ.

ಮೊದಲ ಯತ್ನ

ಇದಕ್ಕೆ ಪೂರಕವಾಗಿ ಜನವರಿ 19ರ ಬೆಳಗ್ಗೆ 8:30ರ ಹೊತ್ತಿಗೆ ಕ್ವಾರಿಯ ಹತ್ತಿರ ಹಾಲೇಶಪ್ಪ ಮಾಸ್ತರು ವಾಕಿಂಗ್ ಹೋಗುತ್ತಿದ್ದಾಗ ಲೋಕೇಶ, ರವಿ, ರಾಮಸ್ವಾಮಿ, ಮುಂತಾದವರು ಅವರ ಹತ್ಯೆ ನಡೆಸಲು ಮಾರಕಾಸ್ತ್ರಗಳೊಂದಿಗೆ ತಯಾರಾಗಿ ನಿಂತಿದ್ದಾರೆ. ಆದರೆ ಮಾಸ್ತರನ್ನು ಕಂಡಕೂಡಲೇ ಅವರೆಲ್ಲ ಬಂಡೆಯ ಹಿಂದೆ ಅವಿತುಕೊಂಡಿದ್ದಾರೆ. ಆದರೆ ಅವರೆಲ್ಲ ಅವಿತುಕೊಳ್ಳುವುದನ್ನು ಗಮನಿಸಿದ ಮಾಸ್ತರು ಸ್ವಲ್ಪ ಹುಶಾರಾಗಿದ್ದಾರೆ. ಅಲ್ಲಿಯೇ ಕೆಲಸ ಮಾಡುತ್ತಿದ್ದ ಮಂಜಪ್ಪ, ವೀರಾರಾವ್, ಚಂದ್ರಪ್ಪ ಮತ್ತು ಮಹೇಶ ಎಂಬುವವರನ್ನು ಹಾಲೇಶಪ್ಪನವರ ಜೊತೆ ಸೇರಿಸಿಕೊಂಡಾಗ ಹಂತಕರು ಅಲ್ಲಿಂದ ಕಾಲು ಕಿತ್ತಿದ್ದಾರೆ.

ಕೈ ಎತ್ತಿದ ಪೊಲೀಸರು

ಈ ಹತ್ಯೆಯ ಪ್ರಯತ್ನದ ಬಗ್ಗೆ ಹಾಲೇಶಪ್ಪ ಮಾಸ್ತರು ಜನವರಿ 21ರಂದು ಶಿವಮೊಗ್ಗ ಜಿಲ್ಲಾ ರಕ್ಷಣಾಧಿಕಾರಿಗಳಿಗೆ ಅಕ್ರಮ ಗಣಿಗಾರಿಕೆಯ ಬಗ್ಗೆ, ಗಣಿ ಮಾಲೀಕರಿಂದ ಪೊಲೀಸರು ಹಣ ವಸೂಲಿ ಮಾಡುತ್ತಿರುವ ಬಗ್ಗೆ, ಶ್ರೀಧರಶಾಸ್ತ್ರಿಯ ಕುತಂತ್ರಗಳ ಬಗ್ಗೆ ಹಾಗೂ ಜನವರಿ 19 ರಂದು ತಮ್ಮ ಹತ್ಯೆಗಾಗಿ ನಡೆದ ಪ್ರಯತ್ನದ ಬಗ್ಗೆ ದೂರು ನೀಡಿದರಲ್ಲದೆ "ಕೊಲೆಗಡುಕರಿಗೆ ಪೊಲೀಸ್ ಸಿಬ್ಬಂದಿಯ ಕುಮ್ಮಕ್ಕು" ಎಂದೂ ನೇರವಾಗಿ ಆರೋಪಿಸಿದ್ದರು. ಅಷ್ಟೇ ಅಲ್ಲದೆ, "ಜಿ.ಎನ್.ಹಾಲೇಶ್, ವೆಂಕಟೇಶ್ವರ ಬಸ್ ಮಾಲೀಕ ಎಂ.ನಾಗರಾಜ್ ಮತ್ತು ಎಸ್.ಎಚ್. ಮಹೇಶ" ಎಂಬ ಸ್ಥಳೀಯರೂ ತಮ್ಮ ಕೊಲೆ ಸಂಚಿಗೆ ಸುಪಾರಿ ನೀಡಿದ್ದಾರೆಂದೂ ಹೇಳಿದ್ದರು.

ಆದರೆ ಸ್ಥಳೀಯ ಪೊಲೀಸರಾಗಲೀ, ಜಿಲ್ಲಾ ರಕ್ಷಣಾಧಿಕಾರಿಯಾಗಲೀ ಹಾಲೇಶಪ್ಪ ಮಾಸ್ತರರ ಹತ್ಯೆಯ ಸಂಚಿನಲ್ಲಿ ಭಾಗಿಯಾಗಿರುವವರನ್ನು ಕರೆಸಿ ಕನಿಷ್ಠ ವಿಚಾರಣೆಯನ್ನೂ ನಡೆಸಲಿಲ್ಲ. ಇದೆಲ್ಲದರಿಂದ ಕಂಗಾಲಾದ ಹಾಲೇಶಪ್ಪನವರು ಜನವರಿ 23ರಂದು (ಕೊಲೆಯಾಗುವುದಕ್ಕೆ ಮೂರು ದಿನಗಳ ಮುಂಚೆ) ಕಟ್ಟಕಡೆ ಪ್ರಯತ್ನವೆಂಬಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೂ ಲಿಖಿತ ದೂರನ್ನು ನೀಡಿದರು.

ಈಗಾಗಲೇ ತಿಳಿಸಿರುವ ಹೆಸರುಗಳೊಂದಿಗೆ ವಿಶೇಷವಾಗಿ "ಪಿ.ಎಸ್.ಐ. ಶ್ರೀಧರಶಾಸ್ತ್ರಿ ಸವರ್ಣೀಯ ಭೂಮಾಲೀಕರೊಂದಿಗೆ ಸೇರಿ ನನ್ನ ಹತ್ಯೆಯ ಸಂಚು ನಡೆಸಿರುವುದು ಮನವರಿಕೆಯಾಗಿದೆ" ಎಂದು ಆ ದೂರಿನಲ್ಲಿ ದಾಖಲಿಸಿದ್ದರು. ಪೊಲೀಸ್ ಇಲಾಖೆಯ ಸ್ಥಳೀಯ ಮಟ್ಟದಿಂದ ಮೊದಲಾಗಿ ರಾಜ್ಯ ಮಟ್ಟದವರೆಗೂ ಅಲವತ್ತುಕೊಂಡರೂ ಹಾಲೇಶಪ್ಪ ಮಾಸ್ತರಿಗೆ ರಕ್ಷಣೆ ನೀಡುವುದಿರಲಿ, ಅವರ ದೂರಿನ ಕುರಿತು ಇಲಾಖೆಯಿಂದ ಯಾವುದೇ ಪ್ರತಿಕ್ರಿಯೆಯೂ ದೊರೆಯಲಿಲ್ಲ.

ಇದು ಹಾಲೇಶಪ್ಪ ಮಾಸ್ತರ್‌ರಂತಹವರ ದೂರನ್ನು ಕುರಿತು ಪೊಲೀಸ್ ಇಲಾಖೆಯ ನಿರ್ಲಕ್ಷ್ಯವೋ? ಅಥವಾ ಶ್ರೀಮಂತ ಕುಳಗಳೊಂದಿಗಿನ ಶಾಮೀಲುಗಾರಿಕೆಯೋ? ಪೊಲೀಸ್ ಇಲಾಖೆಯೇ ಸ್ಪಷ್ಟಪಡಿಸಬೇಕು.

ಬರ್ಬರ ಹತ್ಯೆ

ಜನವರಿ 27ರ ಬೆಳಗ್ಗೆ 9:30ರ ಸಮಯಕ್ಕೆ ತಾನು ಕೊಲೆಯಾಗುತ್ತೇನೆಂದು ಹಾಲೇಶಪ್ಪ ಮಾಸ್ತರಿಗೆ ಗೊತ್ತಿರಲಿಲ್ಲ, ಆದರೆ ಪರಿಸ್ಥಿತಿ ಸರಿಯಿಲ್ಲವೆಂಬ ಜಾಗರೂಕತೆಯನ್ನೂ ಅಂದು ಪಾಲಿಸದ ಮಾಸ್ತರು ಎಡವಟ್ಟು ಮಾಡಿಕೊಂಡಿದ್ದಾರೆ. ಕೂಡ್ಲಿಗೆರೆಯ ಹಳೆ ಊರಿಗೆ ಹೊಂದಿಕೊಂಡಂತೇ ಇವರು ಹೋಗಬೇಕಾಗಿದ್ದ ಕಲ್ಲಿನ ಕ್ವಾರಿ ಇತ್ತು, ಅಲ್ಲಿಂದ ಹೋಗಿದ್ದರೆ ಈ ಹತ್ಯೆಯನ್ನು ನಡೆಸಲು ಹಂತಕರಿಗೆ ಬಹುತೇಕ ಸಾಧ್ಯವಾಗುತ್ತಿರಲಿಲ್ಲ. ಆದರೆ ಮಾಸ್ತರು ನಾಗತಿಬೆಳಗಲುಗೆ ಹೋಗುವ ನಿರ್ಜನ ರಸ್ತೆಯಲ್ಲಿ ಹೋಗಿಬಿಟ್ಟಿದ್ದಾರೆ. ಅವರ ಸೋದರ ಸಂಬಂಧಿಯ ಕ್ವಾರಿಯ ಪಕ್ಕದಲ್ಲಿ ನಡೆದುಹೋಗುತ್ತಿದ್ದ ಸಂದರ್ಭದಲ್ಲಿಯೇ ನಾಲ್ಕೈದು ಮಂದಿ ಹಂತಕರು ಬಿಳಿಯ ಮಾರುತಿ ಓಮ್ನಿಯಲ್ಲಿ (ನಂಬರ್ ಪ್ಲೇಟಿನ ಮೇಲೆ ಕೆಎ 30 ಎಮ್ 189 ಎಂಬ ಸ್ಟಿಕ್ಕರನ್ನು ಅಂಟಿಸಲಾಗಿದ್ದು, ಈ ವ್ಯಾನಿನ ನಿಜವಾದ ನಂಬರ್ ಎಂಇಎಸ್ 3521 ಆಗಿದೆ) ಬಂದು ಹಾಲೇಶಪ್ಪ ಮಾಸ್ತರರ ಮೇಲೆರಗಿದ್ದಾರೆ.

ಹತ್ಯೆಯು ಹೀಗೇ ನಡೆದಿದೆ ಎಂದು ಹೇಳಲಾಗದಿದ್ದರೂ ಹತ್ಯೆ ನಡೆದ ಸ್ಥಳವನ್ನು ಪರಿಶೀಲಿಸಿದಾಗ ಹಾಲೇಶಪ್ಪ ಮಾಸ್ತರು ಅಷ್ಟು ಸುಲಭವಾಗಿ ಹಂತಕರ ಹತ್ಯೆಗೆ ಗುರಿಯಾಗಿಲ್ಲದಿರುವುದು ಸ್ಪಷ್ಟವಾಗುತ್ತದೆ. ಮಾರುತಿ ಓಮ್ನಿಯ ಮುಂಭಾಗದ ಗಾಜು ಒಡೆದು ಚೂರುಚೂರಾಗಿದೆ. ಈ ಚೂರುಗಳು ಸುಮಾರು 40-50 ಅಡಿಗಳಷ್ಟು ಉದ್ದಕ್ಕೆ ಚೆಲ್ಲಿಕೊಂಡಿವೆ. ಪಕ್ಕದಲ್ಲಿರುವ ಚಿಕ್ಕ ಕಾಲುವೆಯ ಗೋಡೆಗೆ ಯಾರೋ ಬಿದ್ದು ಒದ್ದಾಡಿದ್ದಾರೆ. ತೀವ್ರವಾಗಿ ಪ್ರತಿರೋಧವೊಡ್ಡಿದ ಮಾಸ್ತರನ್ನು ಬಹುಶಃ ಕಾರಿನೊಳಗೆ ಎಳೆದುಕೊಂಡಾಗ ಅವರು ಗಾಜನ್ನು ಒಡೆದು ಹೊರಬಿದ್ದಿರುವ ಸಾಧ್ಯತೆಯಿದೆ. ಹಂತಕರು ಮೊದಲು ಅವರ ತೊಡೆಯ ಭಾಗಕ್ಕೆ ಹರಿತವಾದ ಆಯುಧದಿಂದ ಹೊಡೆದು, ಪ್ರತಿರೋಧ ಕಡಿಮೆಯಾದಾಗ ಅವರ ಕುತ್ತಿಗೆಯನ್ನು ಸಂಪೂರ್ಣ ಕಡಿದಿರುವ ಅಥವಾ ಕೊಯ್ದಿರುವ ಸಾಧ್ಯತೆಯಿದೆ. ರಸ್ತೆಯ ಪಕ್ಕದಲ್ಲಿಯೇ ಹಾಲೇಶಪ್ಪ ಪ್ರಾಣ ಬಿಟ್ಟಿದ್ದಾರೆ. ಮಾಸ್ತರನ್ನು ಕೊಲೆಗೈದ ಹಂತಕರು ಪರಾರಿಯಾಗಿ ಆಗರದಹಳ್ಳಿಯ ಹತ್ತಿರ ಮಾರುತಿ ಓಮ್ನಿಯನ್ನು ಬಿಟ್ಟು ಹೋಗಿದ್ದಾರೆ. ವ್ಯಾನಿನಲ್ಲಿ ಮಾಸ್ತರ ಮೊಬೈಲು, ಕನ್ನಡಕ ಸಿಕ್ಕಿವೆ. ವ್ಯಾನಿನಲ್ಲಿನ ಒಂದು ಕಬ್ಬಿಣದ ರಾಡು ಹಾಗೂ ಇನ್ನಿತರ ವಸ್ತುಗಳನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ.

ಪ್ರತಿಭಟನೆ


ಹಾಲೇಶಪ್ಪ ಮಾಸ್ತರು ಕೊಲೆಯಾದ ಸುದ್ದಿ ಎಲ್ಲೆಡೆಯೂ ಹಬ್ಬಿ ಮಧ್ಯಾಹ್ನ 1 ಗಂಟೆಯ ಹೊತ್ತಿಗೆ ಶವಾಗಾರದ ಹತ್ತಿರ ದಲಿತ ಸಂಘರ್ಷ ಸಮಿತಿ ಹಾಗೂ ಪ್ರಗತಿಪರ ಸಂಘಟನೆಗಳ ನೂರಾರು ಕಾರ್ಯಕರ್ತರು ಜಮಾವಣೆಗೊಂಡರು. ಶವಪರೀಕ್ಷೆಯಾದ ನಂತರ ಹಾಲೇಶಪ್ಪ ಮಾಸ್ತರ ಶವವನ್ನು ಗ್ರಾಮಾಂತರ ಪೊಲೀಸ್ ಠಾಣೆಯ ಮುಂದಿಟ್ಟು ಪ್ರತಿಭಟನೆಯನ್ನು ಪ್ರಾರಂಭಿಸಿದರು. ಸಂಜೆಯ ಹೊತ್ತಿಗೆ ತೀವ್ರಗೊಂಡ ಪ್ರತಿಭಟನೆ ವಿ.ನಾಗರಾಜ್, ಎಚ್.ರಾಚಪ್ಪ, ಈಸೂರು ಲೋಕೇಶ್, ಪ್ರಜಾಪ್ರತಿನಿಧಿ ವಾರಪತ್ರಿಕೆಯ ಸಂಪಾದಕ ಸುರೇಶ್, ಅತ್ತಿಗುಂದ ಕರಿಯಪ್ಪ, ಕಾಳಿಂಗನಹಳ್ಳಿ ಶಂಕರ್, ಬಿಎಸ್‌ಪಿ ಪಕ್ಷದ ಸುಧೀಂದ್ರ ಮುಂತಾದವರ ನೇತೃತ್ವದಲ್ಲಿ ಬೆಳಗಿನ ಜಾವ ನಾಲ್ಕು ಗಂಟೆಯವರೆಗೆ ಪೊಲೀಸರ ಎಲ್ಲ ಕುತಂತ್ರಗಳನ್ನೂ ಮೀರಿ ಮುಂದುವರೆಯಿತು. "ಸಿಪಿಐ ನಿತ್ಯಾನಂದರನ್ನು ಅಮಾನತುಗೊಳಿಸಿದ್ದೇವೆ, ಇಬ್ಬರು ಆರೋಪಿಗಳನ್ನು ಬಂಧಿಸಿದ್ದೇವೆ" ಎಂದು ಪೊಲೀಸರು ಹೇಳಿಕೆ ನೀಡಿದ ಮೇಲೆಯೇ ಶವವನ್ನು ಕೂಡ್ಲಿಗೆರೆ ಗ್ರಾಮಕ್ಕೆ ತೆಗೆದುಕೊಂಡು ಹೋಗಲಾಯಿತು. ಅದೇರೀತಿ ಹಾಲೇಶಪ್ಪ ಮಾಸ್ತರ ಕೊಲೆಯ ವಿರುದ್ಧ ಕರೆದಿದ್ದ ಬಂದ್‌ನಲ್ಲೂ ಅನೇಕ ಸಂಘಟನೆಗಳು ಭಾಗವಹಿಸಿದ್ದವು.

ಏಳೆಂಟು ವರ್ಷಗಳ ಕೆಳಗೆ ಜಮೀನು ವಿವಾದವೊಂದರ ಸಂಬಂಧ ಧಡಿಯ ರಾಜಣ್ಣ ಎನ್ನುವವನಿಂದ ಮಾರಣಾಂತಿಕ ಹಲ್ಲೆಗೆ ಗುರಿಯಾಗಿದ್ದ ಹಾಲೇಶಪ್ಪ ಮಾಸ್ತರು ತಮ್ಮ ಬಲಗಣ್ಣನ್ನು ಕಳೆದುಕೊಂಡಿದ್ದರು. ಏನೆಲ್ಲಾ ಬೆದರಿಕೆ, ಹತ್ಯೆಯ ಪ್ರಯತ್ನಗಳು ನಡೆದರೂ ನ್ಯಾಯದ ಹಾದಿಯನ್ನು ಬಿಡಲು ಹಾಲೇಶಪ್ಪ ಮಾಸ್ತರು ಎಂದೂ ಹೆದರಿರಲಿಲ್ಲ. ಅಂತಹ ಮನುಷ್ಯನನ್ನು ಇವತ್ತು ಕೊಂದು ಹಾಕುವಲ್ಲಿ, ಅವರ ಹೋರಾಟದ ಛಲವನ್ನು ನಿಂದಿಸುವಲ್ಲಿ ಭೂಮಾಲೀಕರು, ಗಣಿ ಮಾಫಿಯಾದವರು ಮತ್ತು ಪೊಲೀಸರು ಯಶಸ್ವಿಯಾಗಿದ್ದಾರೆ. ಇದು ನಮ್ಮ ಪ್ರಜಾಪ್ರಭುತ್ವ ಯಾವ ದಿಕ್ಕಿನಲ್ಲಿ ಸಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ....

–ಚಂದ್ರಶೇಖರ ತೋರಣಘಟ್ಟ

ನಿಸಾರ್ ಅಹಮದ್ ವಿವಾದ

ಕನ್ನಡ ಕವಿಗೆ ಚೆಡ್ಡಿ ಗಾಯಕರ ವಿರೋಧ



ನಿಸಾರ್ ಅಹಮದ್ ಶಿವಮೊಗ್ಗ ಸುಬ್ಬಣ್ಣ ಫಲ್ಗುಣ

ವೇಲ್ಯಾತಿ ಗುಂಪುಗಾರಿಕೆ, ಕೋಮು ದ್ವೇಷದ ...ಗೆ ಸುಗುಮ ಸಂಗೀತ ಕ್ಷೇತ್ರಕ್ಕೂ ತಲುಪಿದೆ.

...ತ ಕವಿ, ಜನರ ಕವಿ ನಮ್ಮ ನಿತ್ಯೋತ್ಸವ ...ಿ ನಿಸಾರ್ ಅಹಮದ್‌ರ ಗೀತೆಗಳನ್ನು ಇನ್ನು ... ಹಾಡ್ಯಾರೂ ಹಾಡುವುದಿಲ್ಲವೆಂದು ಕೆಲ ಭಂಡರು ...ಿಬಿಟ್ಟಿದ್ದಾರೆ. ಸುಮಾರು 22 ಗಾಯನ ಗುಂಪು ...ದ ಸುಗಮ ಸಂಗೀತ ಒಕ್ಕೂಟವೆಂಬ ಸಂಘಟನೆ ... ಮಾರ್ಚ್ 1 ರಂದು ಈ ಚಿಲ್ಲರೆ ತೀರ್ಮಾನ ...ದೆ. ಫಲ್ಗುಣನೆಂಬ ಅವಗುಣಗಳ ಗಾಯಕನೇ ... ನಾಯಕ: ಸನ್ಮಾನ ಕಾರ್ಯಕ್ರಮದ ಬಗ್ಗೆ ...ದ ಗೊಂದಲ ಇದಕ್ಕೆ ಕಾರಣ.

...ನ್ನೆ ಜನವರಿಯಲ್ಲಿ ನಿಸಾರ್ ಅಹಮದ್‌ರಿಗೆ ... ಅವಾರ್ಡ್ ಘೋಷಣೆಯಾದ ಮೇಲೆ ಅವರಿ...ು ಸನ್ಮಾನ ಮಾಡಲು ಹೊರಟ ಇವರು ...ು ಫೆಬ್ರವರಿ 24 ರಂದು ಕಾರ್ಯಕ್ರಮ ನಿಗದಿ...ೊಂಡು ಆಮೇಲೆ ಎಲ್ಲರ ಬಿಡುವು ನೋಡಿ ... ಕೊನೆಗೆ ಮಾರ್ಚ್ 1 ಎಂದು ನಿಗದಿಪಡಿಸಿದ್ದಾರೆ. ...ು ನಿಸಾರ್ ಒಬ್ಬರಿಗೇ ಸನ್ಮಾನ ಎಂದು ...ಗಿತ್ತಾದರೂ ಅದೇ ಸಮಯಕ್ಕೆ ಪ್ರಸಿದ್ಧ ಗಾಯಕ ...ಗ್ಗ ಸುಬ್ಬಣ್ಣನವರಿಗೂ ಕುವೆಂಪು ವಿವಿಯಿಂದ ...ಟ್ ಸಿಕ್ಕಾಗ ಮಾರ್ಚ್ ಒಂದರಂದೇ ನಿಸಾರ್- ... ಇಬ್ಬರಿಗೂ ಸನ್ಮಾನ ಮಾಡುವುದು ಎಂದು ...ರ ಟೀಂ ತೀರ್ಮಾನಿಸಿಕೊಂಡಿದೆ.

...ದರೆ ಈ ಬದಲಾದ ಕಾರ್ಯಕ್ರಮದ ಬಗ್ಗೆ ...ಗೆ ಸೌಜನ್ಯಕ್ಕೂ ತಿಳಿಸಿಲ್ಲ. ಹಾಗೆ ಮೊದಲೇ ...ದ್ದರೂ ಅದಕ್ಕೆ ನಿಸಾರ್ ಆಕ್ಷೇಪಿಸುತ್ತಿರಲಿಲ್ಲ ...ಮ ಸತ್ಯ. ತಮ್ಮ ಜೀವನದಲ್ಲಿ ಹಲವಾರು ...ಸನ್ಮಾನ, ಜನರ ಪ್ರೀತಿ ಪಡೆದಿರುವ ನಿಸಾರ್‌ರಿಗೆ ...ಣ್ಣನವರೊಂದಿಗೆ ವೇದಿಕೆ ಹಂಚಿಕೊಳ್ಳುವುದು, ...ಯೂ ಆಗಿರಲಿಲ್ಲ. ಆದರೆ ಇಂಥ ಕಾರ್ಯಕ್ರಮ ...ನವರಿಗೆ ಇದನ್ನೆಲ್ಲಾ ಸರಿಯಾಗಿ ನಿರ್ವಹಿಸುವಷ್ಟು ...ಪ್ರಜ್ಞೆ, ಸಮಯಸ್ಫೂರ್ತಿ ಇರಲೇಬೇಕಾಗುತ್ತದೆ. ಈ ...ದ ಕಾರ್ಯಕ್ರಮದ ಬಗ್ಗೆ ಕೊನೆ ಗಳಿಗೆಯಲ್ಲಿ ತಿಳಿದ ನಿಸಾರ್‌ರಿಗೆ ವಿಚಾರ ಏನೆಂದು ತಿಳಿಸುವ ಬದಲಾಗಿ ಅವರು 'ಸುಬ್ಬಣ್ಣನಿಗೆ ಸನ್ಮಾನ ಮಾಡುವುದನ್ನೇ ವಿರೋಧಿಸಿದರೆಂದು' ಫಲ್ಗುಣ ಅಂಡ್ ಗ್ಯಾಂಗ್ ಅಪಪ್ರಚಾರ ಮಾಡುತ್ತಿದೆ. ಇವರ ಕಿರಿಕಿರಿ, ರೇಜಿಗೆಗಳಿಂದ ಬೇಸತ್ತ ನಿಸಾರ್ ತಾವೀ ಕಾರ್ಯಕ್ರಮಕ್ಕೆ ಬರೊಲ್ಲ ಎನ್ನುವ ಮಟ್ಟಕ್ಕೂ ಹೋದರು. ಅಲ್ಲೂ ಕಿತಾಪತಿ ಬುದ್ಧಿ ತೋರಿಸಿದ ಫಲ್ಗುಣ 'ನಾವೊಂದಿಷ್ಟು ಜನ ನಿಸಾರ್ ಮನೆಗೆ ಹೋದಾಗ ಪೊಲೀಸರನ್ನು ಕರೆಸಿ ಆಚೆ ದಬ್ಬಿಸುವುದಾಗಿ ನಿಸಾರ್ ಬೆದರಿಸಿದರೆಂದು' ಸುಳ್ಳು ಸುಳ್ಳೇ ಹೇಳಿಕೊಂಡು ತಿರುಗುತ್ತಿದ್ದಾರೆ.

ಈ ಭಂಡತನಕ್ಕೆ ಏನು ಹೇಳುವುದು?

ಕೊನೆಗೆ ನಿಸಾರ್ ಮಾರ್ಚ್ ಒಂದರ ಕಾರ್ಯಕ್ರಮಕ್ಕೆ ಬರಲಿಲ್ಲ, ಕೇವಲ ಸುಬ್ಬಣ್ಣನವರಿಗೆ ಸನ್ಮಾನವಾಗಿದೆ. ಆದರೆ ಅದೇ ಸಭೆಯಲ್ಲಿ ಮಾತಾಡಿದ ಫಲ್ಗುಣ 'ಇನ್ನು ಮೇಲೆ ನಿಸಾರ್‌ರ ಗೀತೆಗಳನ್ನು ಯಾರೂ ಹಾಡದಂತೆ ನಿಷೇಧ ವಿಧಿಸಲು ನಾವು ತೀರ್ಮಾನಿಸಿದ್ದೇವೆ. ನಮ್ಮ ಗಾಯನ ಸಂಸ್ಥೆಗಳಲ್ಲೂ ವಿದ್ಯಾರ್ಥಿಗಳಿಗೆ ನಿಸಾರರ ಹಾಡುಗಳನ್ನು ಕಲಿಸುವುದಿಲ್ಲ' ಎಂದು ಬೊಗಳಿದ್ದಾನೆ.

ಇದೊಂತರ ಸಾಂಸ್ಕೃತಿಕ ಗೂಂಡಾಗಿರಿ. ಅನನ್ಯ, ಉಪಸಾನ, ಪಂಚಾಮೃತ, ಗಾಯನಗಂಗಾ, ಸಾಧನಾ, ಸಪ್ತಸ್ವರ, ಸೃಜನ-ಇದೇ ಮುಂತಾದ ಸುಗಮ ಸಂಗೀತ ಸಂಸ್ಥೆಗಳೂ ಫಲ್ಗುಣನ ತೀರ್ಮಾನ ಬೆಂಬಲಿಸಿವೆ.

ಕುಳಿತು ಮಾತನಾಡಿದ್ದರೆ ಹತ್ತೇ ನಿಮಿಷದಲ್ಲಿ ಬಗೆಹರಿಸಬಹುದಾಗಿದ್ದ ಈ ವಿಚಾರವನ್ನು ನಿಷೇಧ ವಿಧಿಸುವ ಹಂತಕ್ಕೊಯ್ಯುತ್ತಾರೆಂದರೆ ಈ ಫಲ್ಗುಣ ಮತ್ತು ಗ್ಯಾಂಗ್‌ನ ರೋಗಗ್ರಸ್ತ ಮನಸ್ಥಿತಿ ಎಂಥದ್ದಿರಬೇಕು ಯೋಚಿಸಿ ನೋಡಿ.

ಅಂದಹಾಗೆ ಚೆಕ್ ಮಾಡಿ ನೋಡಿದರೆ ನಮ್ಮ ಕನ್ನಡ ಕವಿ ನಿಸಾರ್‌ಗೆ ನಿಷೇಧ ವಿಧಿಸಿಬಿಡುತ್ತೇವೆಂದು ಹೇಳಿರುವ ಬಹುತೇಕರು ಒಂದು ನಿರ್ದಿಷ್ಟ ಮೇಲ್ಜಾತಿಗೆ ಸೇರಿರುವ ಜನ. ಇವರೆಲ್ಲಾ ಅರೇಬರೇ ಬಿಜೆಪಿಗಳು.

ಕನ್ನಡ ಕಾವ್ಯ, ಗಾಯನ, ಸಂಗೀತ ಕ್ಷೇತ್ರಗಳಲ್ಲಿ ಇಂಥವರ ಪುಂಡಾಟವನ್ನು ಸೋಲಿಸದೆ ಹೋದರೆ ಇಲ್ಲಿ ಯಾವ ಸೂಕ್ಷ್ಮಜ್ಞನೂ ಬದುಕಿರಲಾಗದ ಸ್ಥಿತಿ ಬರುತ್ತದೆ. ಮುದ್ದುಕೃಷ್ಣ ತರಹದ ಮುಕ್ತ ಮನಸ್ಸಿನ ಜನ ಫಲ್ಗುಣರಂಥ ಅಪ್ರಬುದ್ಧರ ಈ ಕುಚೇಷ್ಟೆಗಳಿಗೆ ಸರಿಯಾದ ಪಾಠ ಹೇಳಲಿ.

ಅದೇರೀತಿ ಶಿವಮೊಗ್ಗ ಸುಬ್ಬಣ್ಣ ತರಹದ ಸಂಪನ್ನರು ಇಂಥ ಸಂದರ್ಭದಲ್ಲಿ ತಮಗೆ ಸಂಬಂಧಪಡದ ವಿಚಾರವೆಂಬಂತೆ ಮೌನವಾಗಿರುವುದೂ ತಪ್ಪು.

Infact, ಸುಬ್ಬಣ್ಣನವರು ತಮಗೆ ಸನ್ಮಾನ ನೀಡಿದ ದಿನವೇ ಅದೇ ವೇದಿಕೆಯಲ್ಲಿ ಈ ಬಾಲ ಗಾಯಕ ಫಲ್ಗುಣನ 'ನಿಷೇಧ' ತೀರ್ಮಾನವನ್ನು ವಿರೋಧಿಸಬೇಕಿತ್ತು.

ಕನ್ನಡ ಸಾಂಸ್ಕೃತಿಕ ಜಗತ್ತಿನೊಳಕ್ಕೂ ಈ ಜಾತಿ, ಧಾರ್ಮಿಕ, ಪೂರ್ವಗ್ರಹ, ನಿಷೇಧಗಳೆಂಬ ಅನಿಷ್ಟಗಳು ತಲೆ ಹಾಕದಂತೆ ನೋಡಿಕೊಳ್ಳುವ ಜವಾಬ್ದಾರಿ ಇಂಥ ಹಿರಿಯರ ಮೇಲೆ ಇರುತ್ತದಲ್ಲವೆ.

–ಈಶ

ಬಾಗಲಕೋಟೆ:

ಶಿಕ್ಷಕ ಸೌದಾಗರನ ದರ್ಬಾರ್

...ಂಬದ್ರೆ, ನಂಬಿ, ಬಿಟ್ರೆ ಬಿಡಿ.

...ದಗಲ್ಬಾಜಿ ಶಿಕ್ಷಕನಿಗೆ ಕಾನೂನು ಬಾಹಿರವಾಗಿ ...ಖ್ಯೋಪಾಧ್ಯಾಯರ ಹುದ್ದೆ ನೀಡಿದರೆ ಆತ ... ಹೇಗೆ ದಕ್ಕಿಸಿಕೊಳ್ಳುತ್ತಾನೆಂಬುದಕ್ಕೆ ...ದು ಉದಾಹರಣೆ ಮಾತ್ರ. ಎಲ್ಲಾ ...ರಣಿಗಳ, ಶಿಕ್ಷಕರ ವಿರೋಧದ ...ಯೂ ಒಬ್ಬ ಯಕಶ್ಚಿತ ಮಾಜಿ ಜಿಲ್ಲಾ ...ಯತಿ ಅಧ್ಯಕ್ಷ ತನ್ನ ಬೆರಳಲ್ಲಿಯೇ ಇಡೀ ...ಳಿತವನ್ನೇ ಹೇಗೆ ಕುಣಿಸುತ್ತಾನೆ ಎಂಬುದಕ್ಕೂ ...ದು ನಿದರ್ಶನ.

...ಾಗಲಕೋಟೆ ಜಿಲ್ಲೆಯಲ್ಲಿ ...ತವಾಗಿ 261 ಪ್ರಾಥಮಿಕ ಶಾಲಾ ...ಖ್ಯೋಪಾಧ್ಯಾಯರಿದ್ದಾರೆ. ಆದರೆ, ಜಿಲ್ಲಾ ಶಿಕ್ಷಣ ...ಯ ದಗಲ್ಬಾಜಿ ಹರಾಮಕೋರನ ...ಾಕ್ಷದಿಂದ 262ನೇ ಹುದ್ದೆಯೂ ...ಕೃತವಾಗಿ ಸೃಷ್ಟಿಯಾಗಿದ್ದು ಮಾತ್ರವಲ್ಲ ಅದಕ್ಕೆ ...ಕಗೊಂಡವನು ಯಾವ ಅಡೆತಡೆಯೂ ... ಕಳೆದ ಒಂದು ವರ್ಷದಿಂದ ...ಖ್ಯೋಪಾಧ್ಯಾಯರಿಗೆ ಸಲ್ಲಬೇಕಾದ ...ವನ್ನೂ ತಗೆದುಕೊಳ್ಳುತ್ತಿದ್ದಾನೆ. ಅಸ್ತಿತ್ವದಲ್ಲೇ ... ಹುದ್ದೆಯಿಂದ ಸಂಬಳ ಪಡೆಯುತ್ತಾ ...ರೋಷವಾಗಿ ತಿರುಗುತ್ತಿರುವ ಮಹಾತ್ಮನ ... ಎಂ.ಎ. ಸೌದಾಗರ್!

...ಾದು. 2007ರ ಮೇ 17ರಂದು ಫ್ರಾಕ್ಸಿ...ಂಗ್ ಒಂದನ್ನು ಏರ್ಪಡಿಸಿ ...ಕೋಟೆಯ ಸಿ.ಆರ್.ಸಿ ಕೇಂದ್ರದಿಂದ ...ಮಿ ತಾಲ್ಲೂಕಿನ ಜಾಲಿಹಾಳ ಗ್ರಾಮಕ್ಕೆ ...ರಿ ಉರ್ದು ಪ್ರಾಥಮಿಕ ಶಾಲೆಯ ...ಖ್ಯೋಪಾಧ್ಯಾಯನಾಗಿ ಸ್ವತಃ ಸೌದಾಗರ್ ...ಕ್ತನಾಗಿ ಬರುತ್ತಾನೆ. ಮರುದಿನವೇ ಆತ ...ಾಗುವ ಸ್ಥಳವೂ ಬದಲಾಗಿ ಹೋಗುತ್ತೆ, ...ಮಿ ತಾಲ್ಲೂಕಿನ ಜಾಲಿಹಾಳ ಗ್ರಾಮಕ್ಕೆ ...ೊಬ್ಬನ ಹೆಸರು ಸೇರಿಸಿ ಸೌದಾಗರ್‌ನನ್ನು ...ರ ಸರ್ಕಾರಿ ಉರ್ದು ಶಾಲೆಗೆ ...ಖ್ಯೋಪಾಧ್ಯಾಯ ಅಂತ ನೇಮಿಸಲಾಗುತ್ತೆ, ... ನಿಯಮಗಳನ್ನು ಗಾಳಿಗೆ ತೂರಿ ಈ ಆದೇಶ ...ನ್ನು ಅಂದಿನ ಡಿಡಿಪಿಐ ಪೊಲೀಸ್ ...ಟೀಲ್ ಸೌದಾಗರ್‌ಸಿಗೆ ನೀಡುತ್ತಾನೆ. ...ನಷ್ಟೊಂದು ಕೆಲಸ ಮಾಡುವುದಕ್ಕೆ, ಪೊಲೀಸ್ ...ಲ್ ಬೇಕುಬೇಕಾದ ಕಡೆ ದಾಖಲೆಗಳನ್ನು ...ನಕಲಿ ದಾಖಲೆಗಳನ್ನು ಸೃಷ್ಟಿಸಿ, ಮಾಡಬಾರದ ...ನ್ನ ಮಾಡುತ್ತಾನೆ. ಏಕೆಂದರೆ, ಆತನಿಗೆ ಪುಷ್ಕಳ ಲಂಚ ತಿನ್ನಿಸುವ ಗಿರಾಕಿಗಳನ್ನು ಹುಡುಕಿಕೊಂಡು ತರುವ ಘನಂದಾರಿ ಕೆಲಸಕ್ಕೆ ಸೌದಾಗರ್ ಹೇಳಿ ಮಾಡಿಸಿದ ವ್ಯಕ್ತಿ.

ವಾಸ್ತವದಲ್ಲಿ ಜೂನ್ 2007ರಂದು ನವನಗರ ಶಾಲೆಯಲ್ಲಿ ಸೌದಾಗರ್‌ನನ್ನು ಮುಖ್ಯೋಪಾಧ್ಯಾಯನನ್ನಾಗಿ ನೇಮಿಸಿದಾಗ ಆ ಸ್ಥಾನವೇನೂ ಖಾಲಿ ಇರಲಿಲ್ಲ, ಅಲ್ಲಿ ಶ್ರೀಮತಿ ಮುಲ್ಲಾ ಎಂಬುವವರು ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸುತ್ತಿದ್ದರು. ಒಂದೇ ಶಾಲೆಯಲ್ಲಿ ಇಬ್ಬರು ಮುಖ್ಯೋಪಾಧ್ಯಯರೇಕೆ ಎಂಬ ಪ್ರಶ್ನೆ ಸಹಜವಾಗಿಯೇ ಎದ್ದಿತು. ಆಗ ಪೊಲೀಸ್ ಪಾಟೀಲ್ ನಕಲಿ ದಾಖಲೆಯನ್ನು ಸೃಷ್ಟಿಸಿದ. ಸೆಕ್ಟರ್ ನಂಬರ್ 38ರಲ್ಲಿರುವ ಸರ್ಕಾರಿ ಉರ್ದು ಶಾಲೆಯನ್ನು ನಾಲ್ಕನೇ ತರಗತಿಯಿಂದ ಆರನೇ ತರಗತಿಗೆ ಏರಿಸಿ ಹಿರಿಯ ಪ್ರಾಥಮಿಕ ಶಾಲೆ ಮಾಡಲಾಗಿದೆಯೆಂಬ ದಾಖಲೆ ಅದು. ಆ ಶಾಲೆಯಲ್ಲಿ ಇನ್ನೂ ಐದನೇ ತರಗತಿಗೇನೇ ಅನುಮತಿ ಸಿಕ್ಕಿಲ್ಲ, ಆದರೆ ಅದು ಹೇಗೆ ದಿಢೀರ್ ಎಂದು ಆರನೇ ತರಗತಿ ಪ್ರಾರಂಭಿಸಿಬಿಟ್ಟಿರಿ ಎಂದು ಪ್ರಶ್ನಿಸಿದವರಿಗೆ ಮತ್ತೊಂದು ಆಶ್ಚರ್ಯ ಕಾದಿತ್ತು, ಅದೇನೆಂದರೆ, ಜೂನ್ 2007ರಲ್ಲಿ ಐದನೇ ತರಗತಿಯನ್ನು ಪ್ರಾರಂಭಿಸಲಾಗಿದೆಯಂತೆ, ಜುಲೈ 2007ರಲ್ಲಿ ಅಂದರೆ ಮರುತಿಂಗಳೇ ಆರನೇ ತರಗತಿಯನ್ನೂ ಪ್ರಾರಂಭಿಸಲಾಗಿದೆಯಂತೆ! ಒಂದೇ ತಿಂಗಳ ಅಂತರದಲ್ಲಿ ಈ ಕೆಲಸ ಮಾಡುವುದು ತಾಂತ್ರಿಕವಾಗಿ ಅಸಾಧ್ಯ ಮಾತ್ರವಲ್ಲ ಕಾನೂನುಬಾಹಿರ ಕೂಡ ಎಂಬುದು ಯಾರಿಗಾದರೂ ಅರ್ಥವಾಗುವ ವಿಚಾರ.

ಇದನ್ನು ಮತ್ತೊಂದಿಷ್ಟು ಕೆದಕಿದಾಗ ಮತ್ತಷ್ಟು ಕುತೂಹಲಕಾರಿ ವಿಷಯಗಳು ಹೊರಬಿದ್ದವು. ವಾಸ್ತವದಲ್ಲಿ, ಬಾಗಲಕೋಟೆಯಲ್ಲಿರುವ ಮರಾಠಿ ಶಾಲೆಯ ಪರವಾನಿಗೆಯನ್ನೇ ಈ ಉರ್ದು ಶಾಲೆಗೆ ಶಿಫ್ಟ್ ಮಾಡಲಾಗಿದೆ! ಅದಕ್ಕೆ ಕೊಟ್ಟಿರುವ ಕಾರಣ, ಮರಾಠಿ ಶಾಲೆಯಲ್ಲಿ ಹಾಜರಾತಿ ಇಲ್ಲ, ಸೆಕ್ಟರ್ ನಂಬರ್ 38ರಲ್ಲಿರುವ ನವನಗರ ಶಾಲೆಯ ಸಮೀಪದಲ್ಲಿ ಯಾವ ಶಾಲೆಗಳೂ ಇಲ್ಲ ಎಂಬಂತಹ ಹಸಿ ಹಸಿ ಸುಳ್ಳುಗಳನ್ನು. ನಿಜ ಹೇಳಬೇಕೆಂದರೆ, ನವನಗರ ಶಾಲೆಯ ಅಣತಿ ದೂರದಲ್ಲಿಯೇ ಮೂರು ಶಾಲೆಗಳಿವೆ!

ಇದನ್ನೂ ಪ್ರಶ್ನಿಸಿದಾಗ ಸೌದಾಗರ್‌ನನ್ನು ಉರ್ದು ಪ್ರಾಥಮಿಕ ಶಾಲೆ ನಂಬರ್ 1ಕ್ಕೆ ವರ್ಗಾಯಿಸಿರುವಂತೆ ಮತ್ತೊಂದು ಆದೇಶ ಪತ್ರವನ್ನು ಪೊಲೀಸ್ ಪಾಟೀಲ್ ಸಿದ್ಧಪಡಿಸಿದ! ಇದೆಲ್ಲ ಸರ್ಕಸ್ ನಡೆಯುತ್ತಿದ್ದಾಗಲೂ ಸೌದಾಗರ್ ಒಬ್ಬ ಮುಖ್ಯೋಪಾಧ್ಯಾಯನಿಗೆ ಸಿಗಬೇಕಾದಷ್ಟು ಸಂಬಳವನ್ನು ಯಾವ ಅಡೆತಡೆಯೂ ಇಲ್ಲದೇ ಪಡೆಯುತ್ತಾ ಬಂದ.

ನಂತರದಲ್ಲಿ ಬಂದ ಬಿಇಓ ಕುಂದರಗಿಗೆ ಈ ಬಗ್ಗೆ ಪ್ರಶ್ನಿಸಿದರೆ ಆತ ಸೆಪ್ಟೆಂಬರ್ 6, 2007ರಂದು ಒಂದು ಲಿಖಿತ ಸ್ಪಷ್ಟನೆ ನಿಡಿ 'ಸೌದಾಗರ್ ನವನಗರ ಶಾಲೆಯಲ್ಲಿ ಮುಖ್ಯೋಪಾದ್ಯಾಯರಾಗಿದ್ದಾರೆಂಬುದು ನಮಗೆ ಗೊತ್ತೇ ಇಲ್ಲ' ಎಂದು ಹೇಳಿದರು! ಈ ಪತ್ರಕ್ಕೆ ಪ್ರತಿಕ್ರಿಯೆ ನೀಡಿರುವ ಈಗಿನ ಡಿಡಿಪಿಐ ದೇಶಪಾಂಡೆ ಈ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸಲು ಸಿಆರ್‌ಸಿ ಕೇಂದ್ರದ ಮುದಕವಿ ಹಾಗೂ ಕುಪ್ಪರಸರನ್ನು ನೇಮಿಸಿ ಕೈತೊಳೆದುಕೊಂಡರು. ಇದು ಸಮಸ್ಯೆಯನ್ನು ಆದಷ್ಟು ಮುಂದೂಡುವ ತಂತ್ರವಲ್ಲದೇ ಮತ್ತೇನಲ್ಲ.

ಈ ಕುರಿತು ಮತ್ತೊಂದು ದೂರು ದಾಖಲಾದಾಗ ಶಿಕ್ಷಣ ಸಂಯೋಜಕ ಗುರುರಾಜ ಜುಕ್ತಿಮಠನನ್ನು ತನಿಖೆ ಮಾಡುವುದಕ್ಕಾಗಿ ನೇಮಿಸಲಾಗಿದೆ. ಸೆಪ್ಟೆಂಬರ್ 22, 2007ರಂದು ಅವರು ಸಲ್ಲಿಸಿದ ವರದಿಯಲ್ಲಿ ಸೆಕ್ಟರ್ 38ರ ನವನಗರದ ಸರ್ಕಾರಿ ಕಿರಿಯ ಬಾಲಕರ ಶಾಲೆಯನ್ನು ಆರನೇ ತರಗತಿಗೆ ಏರಿಸಿದ್ದು ಬೋಗಸ್ ಎಂದೂ, ಒಂದೇ ತಿಂಗಳ ಅಂತರದಲ್ಲಿ ಎರಡು ಹೊಸ ತರಗತಿಯನ್ನು ಪ್ರಾರಂಭಿಸಿದ್ದು ಕಾನೂನು ಬಾಹಿರವೆಂದೂ, ಸೌದಾಗರ್‌ನನ್ನು ಮುಖ್ಯೋಪಾಧ್ಯಾಯ ಎಂದು ದಾಖಲಿಸಿ ಸಂಬಳ ಪಡೆದದ್ದು ಅಪರಾಧವೆಂದೂ, ಆತನನ್ನು ಅಮಾನತ್ತು ಮಾಡಬೇಕೆಂದೂ ಸ್ಪಷ್ಟವಾಗಿ ಹೇಳಲಾಗಿದೆ. ಆದರೆ, ಅದನ್ನೆಲ್ಲಾ ಬುಡಕ್ಕೆ ಹಾಕಿಕೊಂಡು ಕುಳಿತುಕೊಳ್ಳಲಾಗಿದೆಯಷ್ಟೆ.

ಈಗ ಆಗಿರುವ ಮತ್ತೊಂದು ಬೆಳವಣಿಗೆ ಎಂದರೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜೆ.ಎಸ್. ಪಾಟೀಲ್ ಸೌದಾಗರ್‌ನನ್ನು ಸರ್ಕಾರಿ ಪ್ರಾಥಮಿಕ ಶಾಲೆ ನಂಬರ್ 1ಕ್ಕೆ ಮುಖ್ಯೋಪಾದ್ಯಾಯನನ್ನಾಗಿ ವರ್ಗಾವಣೆ ಮಾಡಿದ್ದಾರೆ. ದುರಂತ ಎಂದರೆ ಖುದ್ದು ಪಾಟೀಲ್ ಈಗ ವರ್ಗವಾಗುವ ಹಂತದಲ್ಲಿದ್ದಾನೆ. ಅದಕ್ಕೂ ಮುನ್ನ ಸಿಕ್ಕಷ್ಟು ಗೆಬರಿಕೊಂಡು ಈ ಆದೇಶ ಹೊರಡಿಸಿದ್ದಾನೆ. ಬೆಂಗಳೂರಿನ ಕರ್ನಾಟಕ ಶಾಲಾಗುಣಮಟ್ಟ ಮೌಲ್ಯಾಂಕನ (ಕೆಎಸ್‌ಕ್ಯೂ) ದವರು ನೀಡಿದ ವರದಿ ಪ್ರಕಾರ ನವನಗರದ ಉರ್ದು ಶಾಲೆಯಲ್ಲಿ 5 ಮತ್ತು 6ನೇ ತರಗತಿಗಳೇ ಇಲ್ಲ, ಜಿಲ್ಲೆಯಲ್ಲಿ ಒಟ್ಟು 261 ಮುಖ್ಯೋಪಾಧ್ಯಾಯರು ಮಾತ್ರವೇ ಇದ್ದಾರೆ. ಹಾಗಾದರೆ, ಸೌದಾಗರ್ ಎಂಬ 262ನೇ ಮುಖ್ಯೋಪಾದ್ಯಾಯ ಎಲ್ಲಿಂದ ಬಂದ? ಅವನಿಗೆ ಮುಖ್ಯೋಪಾಧ್ಯಾಯರ ಸಂಬಳ ಹೇಗೆ ಸಿಗುತ್ತಿದೆ? ಈ ವರದಿ ನೋಡಿಯೂ ಜೆ.ಎಸ್. ಪಾಟೀಲ್ ಸೌದಾಗರ್‌ಗೆ ವರ್ಗಾವಣೆ ಆದೇಶ ನೀಡುತ್ತಾನೆಂದರೆ ಏನೆನ್ನಬೇಕು?

ಈ ಕುರಿತು ಈಗಿನ ಡಿಡಿಪಿಐ ದೇಶಪಾಂಡೆ ಅವರನ್ನು ಪ್ರಶ್ನಿಸೋಣವೆಂದರೆ ಆತ ಒಂದು ತಿಂಗಳಿನಿಂದ ನಾಪತ್ತೆಯಾಗಿದ್ದಾನೆ. ಈ ಕಡೆ ರಾಜ್ಯಪಾಲರು ಒಂದಿಷ್ಟು ಗಮನ ಹರಿಸುತ್ತಾರೆಯೇ?

– ಮೇಘರಾಜ್

'ರಾತ್ರಿಯೆಲ್ಲ ರಾಮಾಯಣ ಕೇಳಿ'

ಬೆಳಗ್ಗೆ ದಾಂಧಲೆ ಮಾಡಿದ 'ರಾಮಭಕ್ತರು'!

"ಎಷ್ಟು ರಾಮಾಯಣಗಳಿವೆ? ಮುನ್ನೂರೋ? ಮೂರು ಸಾವಿರವೋ? ಅನೇಕ ರಾಮಾಯಣಗಳಲ್ಲಿ ಈ ಪ್ರಶ್ನೆಯನ್ನು ಕಥಾಪ್ರಸಂಗದ ಕೊನೆಯಲ್ಲಿ ಎತ್ತಿ ಮತ್ತೊಂದು ಕತೆಯ ಮೂಲಕ ಉತ್ತರವನ್ನೂ ಸೂಚಿಸಲಾಗುತ್ತದೆ.......... ಆದಕ್ಕೆ ಅಲ್ಲವೇ ಹದಿನಾಲ್ಕನೇ ಶತಮಾನದ ಕನ್ನಡ ಕವಿ ಕುಮಾರವ್ಯಾಸ ತನ್ನ ಕಾವ್ಯಕ್ಕೆ ಮಹಾಭಾರತ ಕಥನವನ್ನು ಆಯ್ದುಕೊಂಡದ್ದನ್ನು ಹೀಗೆ ಸಮರ್ಥಿಸಿಕೊಳ್ಳುವುದು: 'ತಿಣುಕಿದನು ಫಣಿರಾಯ/ ರಾಮಾಯಣದ ಕವಿಗಳ ಭಾರದಲಿ'...... ಪ್ರತಿಯೊಂದು ರಾಮಾಯಣಕ್ಕೂ ಮುಂಚೆ ನಿರೂಪಿತವಾದ ರಾಮಾಯಣಗಳ ಅರಿವು ಇದ್ದೇ ಇತ್ತು ಎನ್ನುವುದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ನನಗೆ ಇಷ್ಟವಾದದ್ದು ಹಾಗು ನಾನು ಪದೇ ಪದೇ ಹೇಳುವುದು 16ನೇ ಶತಮಾನದ 'ಅಧ್ಯಾತ್ಮ ರಾಮಾಯಣ'ದ ಉದಾಹರಣೆಯನ್ನು. ಆ ರಾಮಾಯಣದಲ್ಲೂ ರಾಮ ವನವಾಸಕ್ಕೆ ಹೊರಟುನಿಂತ ಮತ್ತು ಸೀತೆ ತಾನೂ ಪತಿಯನ್ನನುಸರಿಸುವೆ ಎನ್ನುವ ಪ್ರಸಂಗವಿದೆ. ತನ್ನ ಹಿಂದಿನ ರಾಮಾಯಣಗಳ ಹಾಗೆ ಇಲ್ಲಿಯೂ, ಸೀತೆ ಯಾಕೆ ಬರಕೂಡದು ಎಂದು ರಾಮ ಕೊಡುವ ಕಾರಣಗಳು ಹಾಗು ಸೀತೆಯ ಪ್ರತಿ ಸಮರ್ಥನೆಗಳು ಪರಿಚಿತ ಮಾದರಿಯಲ್ಲಿ ಬರುತ್ತವೆ. ಆದರೆ ಕೊನೆಯಲ್ಲಿ ಸೀತೆ 'ಈ ಹಿಂದೆ ಇಷ್ಟು ರಾಮಾಯಣಗಳು ಬಂದಿವೆ. ಯಾವುದರಲ್ಲಾದರೂ ಸೀತೆ ರಾಮನ ಜೊತೆ ವನವಾಸಕ್ಕೆ ಹೋಗದ ಉದಾಹರಣೆ ಇದೆಯಾ?' ಎಂದದ್ದೇ ಸಮಸ್ಯೆ ಇತ್ಯರ್ಥವಾಗಿ ಬಿಡುತ್ತದೆ"

– ಎ.ಕೆ.ರಾಮಾನುಜನ್‌ರ *'ಥ್ರೀ ಹನ್‌ಡ್ರೆಡ್ ರಾಮಾಯಣಾಸ್: ಫೈವ್ ಎಕ್ಸಾಂಪಲ್ಸ್ ಅಂಡ್ ಥ್ರೀ ಥಾಟ್ಸ್ ಆನ್ ಟ್ರಾನ್ಸ್‌ಲೇಶನ್'* ಪ್ರಬಂಧದ ಕೆಲವು ಸಾಲುಗಳು *('ದಿ ಕಲೆಕ್ಟೆಡ್ ಎಸ್ಸೇಸ್ ಆಫ್ ಎ.ಕೆ.ರಾಮಾನುಜನ್, ಸಂ.:ವಿನಯ್ ಧಾರವಾಡ್ಕರ್, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ದೆಹಲಿ, 1999)*



ದೆಹಲಿ ವಿಶ್ವವಿದ್ಯಾಲಯ, ಜವಹರಲಾಲ್ ನೆಹರು ವಿಶ್ವವಿದ್ಯಾಲಯದಷ್ಟೇ ಖ್ಯಾತಿ ಹಾಗು ವಿದ್ವತ್ತು ಘನತೆಗಳನ್ನು ಪಡೆದಿರುವ ಸಂಸ್ಥೆ. ದೇಶ-ವಿದೇಶಗಳಲ್ಲಿ ತಮ್ಮ ಪ್ರತಿಭೆ, ಪಾಂಡಿತ್ಯಗಳಿಗೆ ಹೆಸರುವಾಸಿಯಾಗಿರುವ ಅನೇಕ ಲೇಖಕರು, ಅಧಿಕಾರಿಗಳು ಹಾಗು ವಿದ್ವಾಂಸರು ಪ್ರಸ್ತುತ ವಿಶ್ವವಿದ್ಯಾಲಯದಡಿ ಬರುವ ಸೇಂಟ್ ಸ್ಟೀಫನ್ಸ್, ಲೇಡಿ ಶ್ರೀರಾಮ್, ಜಾಕೀರ್ ಹುಸೇನ್ ಕಾಲೇಜುಗಳಂತಹ ವಿದ್ಯಾಲಯಗಳಲ್ಲಿ ಕಲಿತವರು. ದೆಹಲಿ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ 'ಶೈಕ್ಷಣಿಕ ಸಮಿತಿ'ಯು, ಎರಡನೇ ವರ್ಷದ ಬಿ.ಎ. ವಿದ್ಯಾರ್ಥಿಗಳಿಗೆ 'ಪುರಾತನ ಭಾರತದ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯವನ್ನು ಕಳೆದ ವರ್ಷದಿಂದ ಕಲಿಕೆಗೆ ನಿಗದಿಪಡಿಸಿದೆ. ಪ್ರಸ್ತುತ ವಿಷಯವನ್ನು ಕಲಿಯಲು ಕಾಳಿದಾಸನ ಕಾವ್ಯ, ಜಾತಕದ ಕತೆಗಳು, ಪುರಾತನ ತಮಿಳು ಕಾವ್ಯಗಳ ಮೂಲ ಪಾಠವನ್ನೂ, ಪುರಾತನ ಪ್ರತಿಮಾಶಾಸ್ತ್ರ ಮತ್ತು ಪ್ರಾಗೈತಿಹಾಸಿಕ ಪಳಿಯುಳಿಕೆಗಳ ಅಧ್ಯಯನಗಳ ವಿದ್ವತ್ತು ಪಠ್ಯಗಳನ್ನು ಪಾಠಕ್ರಮದಲ್ಲಿ ಸೇರಿಸಿದೆ; 'ರಾಮಾಯಣ ಮತ್ತು ಮಹಾಭಾರತ- ಕಥಾನಕಗಳು, ಪಾತ್ರಗಳು ಹಾಗು ಪಠ್ಯಗಳು' ಎಂಬ ಭಾಗದ ಕಲಿಕೆಗೆ ಇರಾವತಿ ಕರ್ವೆಯವರ ಖ್ಯಾತ ಪುಸ್ತಕ 'ಯುಗಾಂತ'ದ ಭಾಗಗಳನ್ನು ಹಾಗು ಕನ್ನಡ-ಇಂಗ್ಲಿಷ್ ಭಾಷೆಗಳ ಖ್ಯಾತ ಕವಿ-ವಿದ್ವಾಂಸ ಎ.ಕೆ.ರಾಮಾನುಜನ್‌ರ ಮಹತ್ವದ ಪ್ರಬಂಧ 'ಥ್ರೀ ಹನ್‌ಡ್ರೆಡ್ ರಾಮಾಯಣಾಸ್: ಫೈವ್ ಎಕ್ಸಾಂಪಲ್ಸ್ ಅಂಡ್ ಥ್ರೀ ಥಾಟ್ಸ್ ಆನ್ ಟ್ರಾನ್ಸ್‌ಲೇಶನ್'ನನ್ನೂ ಸೂಚಿಸಲಾಗಿದೆ.

ಪ್ರಪಂಚದಾದ್ಯಂತ ಪಂಡಿತರು ಹಾಗು ಆಸಕ್ತ ಓದುಗರ ಮೆಚ್ಚುಗೆ ಗಳಿಸಿರುವ ರಾಮಾನುಜನ್‌ರ ಪ್ರಸ್ತುತ ಪ್ರಬಂಧವನ್ನು ಈಗ ಸಂಘಪರಿವಾರದವರು ತಮ್ಮ ದುಂಡಾವರ್ತಿಯ ಮತ್ತೊಂದು ಸಾರ್ವಜನಿಕ ಪ್ರದರ್ಶನಕ್ಕೆ ಕುಂಟು ನೆಪ ಮಾಡಿಕೊಂಡಿದ್ದಾರೆ. ದೇಶದ ಬಹುವಚನೀಯ ಜ್ಞಾನಪರಂಪರೆ, ಪಾಂಡಿತ್ಯ, ವಿಚಾರ ಸ್ವಾತಂತ್ರ್ಯಗಳನ್ನು ಕಂಡರೆ ದೆವ್ವ ಮೆಟ್ಟಿದ ಹಾಗೆ ಹಾರಾಡುವ ಕುಖ್ಯಾತ ಭೌತಶಾಸ್ತ್ರದ ಪ್ರೊಫೆಸರ್ ಹಾಗು ಕೇಂದ್ರದ ಮಾಜಿ ಮಾನವ ಸಂಪನ್ಮೂಲ ಸಚಿವ ಮುರಳಿ ಮನೋಹರ ಜೋಷಿ ಪ್ರಕಾರ ರಾಮಾನುಜನ್‌ರ ಪ್ರಬಂಧ 'ಹಿಂದೂಗಳ ಭಾವನೆಗೆ ಧಕ್ಕೆ ತರುವಂತಹ'ದಾಗಿದ್ದು, ದೆಹಲಿ ವಿ.ವಿ.ಯಲ್ಲಿ ಅದನ್ನು ಕಲಿಕೆ ಪಠ್ಯವನ್ನಾಗಿ ಇಟ್ಟಿರುವುದು 'ದೇಶದ ಸಮಗ್ರತೆಯನ್ನು ಒಡೆಯುವ' ಪಿತೂರಿಯಾಗಿದೆ!


ಎಪ್ಪತ್ತು ವರ್ಷಗಳ ಹಿಂದೆಯೇ, ಇಟಾಲಿಗೆ ಪ್ರಯಾಣಿಸಿ, ಆಗ ಅಲ್ಲಿ ಸರ್ವಾಧಿಕಾರಿಗಳಾಗಿದ್ದ ಫ್ಯಾಸಿಸ್ಟರಿಂದ ಚೆಡ್ಡಿ ಹಾಗು ದಂಡಗಳನ್ನು ಕರಾರುವಾಕ್ಕಾಗಿ ಅಳೆದು ತಂದು, ನಮ್ಮ ನೆಲದ ಸಂಸ್ಕೃತಿಯನ್ನು ಸಾಯುವ ಹಾಗೆ ಚಚ್ಚುವ ಮಿಲಿಟರಿ ಕಲೆಯನ್ನು ಕೊಂಚವೂ ವಿಚಲಿತರಾಗದೆ ಸತತ ಅಭ್ಯಾಸ ಮಾಡಿರುವ ವೀರರು ಬರಿ ಮಾತನಾಡಿ ಸುಮ್ಮನಾಗುವವರಲ್ಲ ತಾನೆ! ತಮ್ಮ ಕುಖ್ಯಾತಿಗೆ ತಕ್ಕುದಾಗಿ, ಫೆಬ್ರವರಿ 25ರಂದು ಬೆಳಗ್ಗೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ದೆಹಲಿಯ ಜಂಟಿ ಕಾರ್ಯದರ್ಶಿ ವಿಕಾಸ್ ದಹಿಯ ಸಂಘಪರಿವಾರದ



ಸಿಪಾಯಿಗಳನ್ನು ಕಟ್ಟಿಕೊಂಡು ದೆಹಲಿ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥರಾದ ಎಸ್.ಝೆಡ್.ಎಚ್. ಜಾಫ್ರಿಯವರ ಕಚೇರಿಗೆ ನುಗ್ಗಿ, ವಿವಾದಿತ ಪ್ರಬಂಧದ ಕುರಿತಾಗಿ ತಮ್ಮ ತಕರಾರುಗಳಿವೆ ಎಂದಿದ್ದಾನೆ. ಜಾಫ್ರಿಯವರು 'ಆಯ್ತು ಕೂತು ಮಾತನಾಡೋಣ' ಎಂದಾಗ, ಮೊದಲೇ ದೇಶದ ರಾಜಧಾನಿಯ ಮಾಧ್ಯಮಗಳಿಗೆ ಸುದ್ದಿ ಮುಟ್ಟಿಸಿ ಬಂದಿದ್ದ ಚೆಡ್ಡಿ ಭೂಪರು 'ಮಾಧ್ಯಮದವರು ಬರುವ ತನಕ ಯಾವ ಚರ್ಚೆಯೂ ಇಲ್ಲ' ಎಂದು ಪಟ್ಟು ಹಿಡಿದು ಕೂತಿದ್ದಾರೆ. ಮಾಧ್ಯಮಗಳ ಮಂದಿ ಬಂದದ್ದೇ, ಮಾತಿಲ್ಲ ಕತೆಯಿಲ್ಲ, ಜಾಫ್ರಿಯನ್ನು ತಳ್ಳಾಡಿ, ಇತಿಹಾಸ ವಿಭಾಗದ ಕಚೇರಿಯನ್ನು ಪುಡಿಗೈದು, 'ಪ್ರಬಂಧವನ್ನು ಪಠ್ಯಕ್ರಮದಿಂದ ಕೈಬಿಡಬೇಕು' ಎಂಬ ಧಮಕಿ ಹಾಕಿ ಹೋಗಿದ್ದಾರೆ. ಭಾರತದ ಯಾವ ಊರಾದರೇನು? 'ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡ' ಎನ್ನುವ ಹಾಗೆ, ದೇಶದ ರಾಜಧಾನಿಯ ಪ್ರತಿಷ್ಠಿತ ಸಂಸ್ಥೆಯಲ್ಲಿ ಹಾಡುಹಗಲೇ ಈ ದುಂಡಾವರ್ತಿ ನಡೆಯುತ್ತಿರುವಾಗ ಸ್ಥಳದಲ್ಲಿದ್ದ ಪೊಲೀಸರು ಯಥಾಪ್ರಕಾರ ಕೈಕಟ್ಟಿ ಪಿಳಿಪಿಳಿ ನೋಡುತ್ತಿದ್ದರು!


'ಸಂಘ ನನ್ನ ಆತ್ಮ' ಎನ್ನುವ ಬಿ.ಜೆ.ಪಿ.ಯ ಮಂದಿ, ತಮ್ಮ ಚೆಡ್ಡಿಪಡೆಯ ಸಾಹಸದ ಫಲವನ್ನು ನೀರಿಗೆ ಹಾಕುವವರಲ್ಲ; ಅದನ್ನು ರಾಜಕೀಯ ಕಾರ್ಯಸೂಚಿಯಾಗಿಸಲು ಅವರು ಸದಾ ಸನ್ನದ್ಧರು. ಪ್ರಧಾನ ಮಂತ್ರಿ ಮನಮೋಹನ್ ಸಿಂಗರ ಮಗಳು ಉಪೀಂದರ್ ಸಿಂಗ್, ದೆಹಲಿ ವಿ.ವಿ.ಯಲ್ಲಿ ಇತಿಹಾಸದ ಉಪನ್ಯಾಸಕಿಯಾಗಿದ್ದಾರೆ. ವಿವಾದಿತ ಪಠ್ಯಕ್ರಮವನ್ನು ಸಂಯೋಜಿಸಿ, ಅಧ್ಯಯನ ಪಠ್ಯಗಳನ್ನು ಸಂಕಲಿಸಿರುವವರು ಉಪೀಂದರ್ ಸಿಂಗ್ ಎಂಬ ಹಸಿ ಸುಳ್ಳಿನ ಬಾಲಂಗೋಚಿಯನ್ನೂ ಸದರಿ ಪ್ರಸಂಗಕ್ಕೆ ಸೇರಿಸಿದ್ದಾರೆ.

'ರಾತ್ರಿಯೆಲ್ಲ ರಾಮಾಯಣ ಕೇಳಿ, ಬೆಳಗ್ಗೆ ರಾಮ ಸೀತೆಗೇನಾಗಬೇಕು ಎಂದು ಕೇಳಿದ್ರಂತೆ' ಎನ್ನೋದು ಕನ್ನಡದ ಒಂದು ಗಾದೆ ಮಾತು. ಈ ಗಾದೆಯ ನೇರವಾದ ಅರ್ಥ, ಸವಿವರವಾಗಿ ಹೇಳಿದರೂ ತಿಳಿದುಕೊಳ್ಳಲಾಗದ ಮೂರ್ಖತನ ಎಂದು. ರಾತ್ರಿಯೆಲ್ಲ ರಾಮಾಯಣ ಕೇಳುವುದು ಅಂದರೆ ರಾಮಾಯಣದ ಪ್ರಸಂಗವನ್ನುಳ್ಳ ಬಯಲಾಟ ನೋಡುವುದೋ, ಕಥಾಕಾಲಕ್ಷೇಪ ಕೇಳುವುದೋ ಆಗಿರುತ್ತದೆ; ಅಲ್ಲಿ ರಾಮಾಯಣದ ನಿರೂಪಣೆ ಕಾಲ-ದೇಶಕ್ಕೆ ಹೊಂದಿಕೊಂಡ ಹಾಗೆ ಬದಲಾಗುತ್ತಲೂ ಇರುತ್ತದೆ- ಅದು ಏನಿದ್ದರೂ 'ರಾತ್ರಿ ಕೇಳಿದ' ಎನ್ನುವಾಗ ಈ ಗಾದೆ ರಾಮಾಯಣ ಒಂದು ಸ್ಥಿರವಾದ ಪಠ್ಯವಲ್ಲ ಎನ್ನುವುದನ್ನು ಧ್ವನಿಸಿಬಿಡುತ್ತದೆ. ಹಾಗೆ ರಾಮಾಯಣದ ಕುರಿತ ಅನೇಕ ಕನ್ನಡದ ಗಾದೆಗಳು ಇಂತಹ ಗಟ್ಟಿ ಲೋಕಜ್ಞಾನವನ್ನು ತಮ್ಮೊಳಗೆ ಕಟ್ಟಿಕೊಂಡಿವೆ. 'ಅಗಸನ ಮಾತನ್ನು ಕೇಳಿ ಹೆಂಡ್ರನ್ನ ಬಿಟ್ರಂತೆ', 'ರಾಮರಾಜ್ಯ ಬಂದರೂ ರಾಗಿ ಬೀಸೋದು ತಪ್ಪಲಿಲ್ಲ' ಎನ್ನುವ ಗಾದೆಗಳೆಲ್ಲ ರಾಮಾಯಣದ ಶಿಷ್ಟ ಕಥನದ ಅರ್ಥಗಳಿಗೆ ಭಿನ್ನ ವ್ಯಾಖ್ಯಾನಗಳಾಗಿಯೂ ಜನರೂಢಿಯಲ್ಲಿವೆ. ಈ ರೀತಿಯಲ್ಲಿ ಕನ್ನಡದ ಗಾದೆಗಳ ಲೋಕಜ್ಞಾನ, ಲೋಕಭಿನ್ನತೆ ಹಾಗು ಭಾಷಾ ಶಕ್ತಿಗಳನ್ನು ಕನ್ನಡದ ದೊಡ್ಡ ಕವಿ, ಚತುರ್ಭಾಷಾ ವಿದ್ವಾಂಸ (ಕನ್ನಡ, ತಮಿಳು, ಸಂಸ್ಕೃತ ಹಾಗು ಇಂಗ್ಲಿಷ್) ಎ.ಕೆ.ರಾಮಾನುಜನ್, ಅತ್ಯಂತ ಸರಳವೂ, ಸುಲಭವೂ ಆದ ಭಾಷೆಯಲ್ಲಿ 'ಗಾದೆಗಳು' ಎಂಬ ಪುಸ್ತಕದಲ್ಲಿ ವಿವರಿಸಿದ್ದಾರೆ. ಆಗ ಅವರು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು; ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರರಂಗದ ಒತ್ತಾಸೆಗೆ ಒಪ್ಪಿ ಈ ಪುಸ್ತಕವನ್ನು ರಾಮಾನುಜನ್ ಬರೆದರು; 1973ರಲ್ಲಿ ಈ ಪುಸ್ತಕ ಪ್ರಕಟವಾಗಿದೆ. ತಮಿಳು ಮತ್ತು ಕನ್ನಡ ಕಾವ್ಯಪರಂಪರೆಯ ಆಳವಾದ ಜ್ಞಾನವನ್ನು ಪಡೆದಿದ್ದ ರಾಮಾನುಜನ್ ವಚನಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದು ಮಾತ್ರವಲ್ಲ, ಆ ಅನುವಾದದ ಬಗ್ಗೆ ಬಂದ ಟೀಕೆ-ಪ್ರಶಂಸೆಗಳನ್ನು ಪಂಡಿತನಿಗೆ ತಕ್ಕುದಾದ ವಿನಯದಲ್ಲಿ ಅರಗಿಸಿಕೊಂಡು, ವಿದ್ವತ್ ಸಂಯಮ ಮೆರೆದವರು. ಕನ್ನಡ ಸಾಹಿತ್ಯಾಸಕ್ತರಿಗೆ ರಾಮಾನುಜನ್‌ರ ಈ ವಿದ್ವತ್‌ಪೂರ್ಣ ಬರಹಗಳಲ್ಲದಿದ್ದರೂ, ಅವರ ಗದ್ಯ ಪದ್ಯಗಳು ಚಿರಪರಿಚಿತ.



ಎ.ಕೆ. ರಾಮಾನುಜನ್

ಕವಿ ಕಾಲ ಮತ್ತು ಲೋಕಕ್ಕೆ ಯಾವತ್ತೂ ತನ್ನ ಬುದ್ಧಿ-ಭಾವಗಳನ್ನು ಮುಖಾಮುಖಿಯಾಗಿಸಿಕೊಂಡಿರುವುದು ಕಾವ್ಯಕರ್ಮದ ಅನಿವಾರ್ಯತೆ ಎಂಬ ಗಟ್ಟಿಯಾದ ಅರಿವಿನಿಂದ ಪದ್ಯಗಳನ್ನು ಬರೆದವರು ರಾಮಾನುಜನ್. ಕನ್ನಡ ಕಾವ್ಯಕ್ಕೆ ಅವರು ನೀಡಿದ ರೂಪಕ, ಪ್ರತಿಮೆಗಳು ಆಧುನಿಕ ಕನ್ನಡ ಭಾಷೆಗೆ ಕಾಲ-ದೇಶಗಳನ್ನು ನಿರ್ವಚಿಸುವ ಹೊಸ ಶಕ್ತಿಯನ್ನು ತಂದುಕೊಟ್ಟವು. ರಾಮಾನುಜನ್‌ರ ಎಲ್ಲಾ ಸಾಹಿತ್ಯ ಕೃತಿಗಳನ್ನೂ ಪ್ರಕಟಿಸಿದ್ದು ಜಿ.ಬಿ. ಜೋಷಿಯವರ ಕನ್ನಡದ ಪ್ರತಿಷ್ಠಿತ ಪ್ರಕಾಶನ ಸಂಸ್ಥೆ ಮನೋಹರ ಗ್ರಂಥಮಾಲಾ. ರಾಮಾನುಜನ್ ಕನ್ನಡ ಸಾಹಿತ್ಯಾಸಕ್ತರಿಗೆ ಹೇಗೆ ದೊಡ್ಡ ಕವಿ-ವಿದ್ವಾಂಸರೋ ಹಾಗೆಯೇ ಇಂಗ್ಲಿಷ್ ಸಾಹಿತ್ಯ-ವಿದ್ವತ್ ವಲಯದಲ್ಲಿ ಅಷ್ಟೇ ಖ್ಯಾತರಾದ ಕವಿ ಹಾಗೂ ಪಂಡಿತರು. ಭಾಷಾಶಾಸ್ತ್ರಜ್ಞರಾದ ರಾಮಾನುಜನ್, ತಮ್ಮ ಬರೆಯುವ ಬದುಕಿನ ಪ್ರಾರಂಭದಿಂದಲೂ ಜನಪದ ಲೋಕಜ್ಞಾನಕ್ಕೆ ಸದಾ ತೆರೆದುಕೊಂಡಿದ್ದವರು. ಅವರು ಭಾರತದ ಜಾನಪದ ಕಥನಾಪ್ರಪಂಚವನ್ನು ವಿಶಿಷ್ಟ ಒಳನೋಟಗಳ ಮೂಲಕ ಅರ್ಥೈಸಿದ್ದು ಮಾತ್ರವಲ್ಲದೆ, ಕತೆಗಳನ್ನು ಆಯ್ದು ಇಂಗ್ಲಿಷಿಗೆ ಅನುವಾದಿಸಿದ್ದಾರೆ. 'ಫೋಕ್ ಟೇಲ್ಸ್ ಫ್ರಾಮ್ ಇಂಡಿಯಾ' ಮತ್ತು 'ಫ್ಲವರಿಂಗ್ ಟ್ರೀಸ್ ಅಂಡ್ ಅದರ್ ಸ್ಟೋರೀಸ್' ಅವರು ಅನುವಾದಿಸಿದ ಬಹು ಖ್ಯಾತವಾದ ಕೃತಿಗಳು; ಈ ಪುಸ್ತಕಗಳು ಪ್ರಪಂಚದ ಅನೇಕ ಹೆಸರಾಂತ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನಕ್ಕೆ ಪಠ್ಯವೂ ಆಗಿವೆ.



ಕೆ. ಫಣಿರಾಜ್

ಸಂಘಪರಿವಾರ ಕಾಲು ಕೆರೆದು ತಂಟೆ ಮಾಡುತ್ತಿರುವ 'ಥ್ರೀ ಹಂಡ್ರೆಡ್ ರಾಮಾಯಾಣಾಸ್...' ರಾಮಾನುಜನರ ಎಂದಿನ ಬರಹಗಳ ಹಾಗೆ ಪಾಂಡಿತ್ಯ, ನಿರೂಪಣೆಯ ಸೊಗಸು ಹಾಗು ಭಾಷೆಯ ಎಚ್ಚರಗಳು ಮೇಳೈಸಿರುವಂತಹ ಶ್ರೇಷ್ಠ ಪ್ರಬಂಧ. ಇದು ರಾಮಾಯಣದ ಮೌಲ್ಯ ನಿರ್ಣಯವೂ ಅಲ್ಲ, ಅದರ ಬಹುರೂಪದ ರಮ್ಯ ಆರಾಧನೆಯೂ ಅಲ್ಲ. ರಾಮಾಯಣದ ಕಥಾನಕ ಸುಮಾರು ಎರಡೂವರೆ ಸಾವಿರ ವರ್ಷ ವಿಭಿನ್ನ ಕಾಲ-ದೇಶಗಳಲ್ಲಿ ಪಯಣಿಸಿದೆ; ಈ ಪಯಣದಲ್ಲಿ ಕತೆಯ ಹಂದರ ಬದಲಾಗದಿದ್ದರೂ, ಆಯಾ ಕಾಲ-ದೇಶಗಳ ಲೋಕಜ್ಞಾನ ರಾಮಾಯಣ ಹೊರಡಿಸುವ ಅರ್ಥದ ಅಭಿಪ್ರಾಯವನ್ನೇ ಬದಲಾಯಿಸಿ ಭಿನ್ನವಾದ ಧ್ವನಿಯನ್ನು ಜನಮಾನಸದ ಅರಿವಿಗೆ ತಂದಿದೆ; ಇಂತಹ ಕಥನದ ಆಧುನಿಕ ಓದುಗರಾದ ನಾವು ನಮ್ಮ ಕಾಲ-ದೇಶಗಳಲ್ಲಿ ರಾಮಾಯಣವನ್ನು 'ಭಾಷಾಂತರಿಸಿ'ಕೊಳ್ಳುವಾಗ ಹೊಂದಿರಬೇಕಾದ ಸೂಕ್ಷ್ಮ, ಎಚ್ಚರಗಳ ಬಗ್ಗೆ ಚಿಂತಿಸುವುದು ಈ ಪ್ರಬಂಧದ ಸ್ಪಷ್ಟವಾದ ಉದ್ದೇಶ. ಭಾಷಾಂತರವೆಂದರೆ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಮಾತ್ರವಲ್ಲ, ಒಂದು ವೈಚಾರಿಕ ನೆಲೆಯಿಂದ ಮತ್ತೊಂದು ವೈಚಾರಿಕ ನೆಲೆಗೆ, ಒಂದು ಲೋಕಸಂಸ್ಕೃತಿಯಿಂದ ಮತ್ತೊಂದು ಬಗೆಯ ಲೋಕಸಂಸ್ಕೃತಿಗೆ ಎಂಬ ಅರ್ಥಗಳನ್ನು ಯಾವ ಪಾಂಡಿತ್ಯ ಪ್ರಯಾಸವೂ ಇಲ್ಲದೆ ನಿರೂಪಿಸಿಬಿಡುವ ಈ ಪ್ರಬಂಧದ ರೀತಿಯೇ ಅನುಪಮವಾದದ್ದು. ವಿದ್ಯಾರ್ಥಿಗಳು ಕಲಿಯಲು ಇಷ್ಟು ಉತ್ತಮವಾದ ಪಠ್ಯವಿರುವುದೇ ಒಂದು ಭಾಗ್ಯ! ಇಂಥ ಒಂದು ಪ್ರಬಂಧದ ಬಗ್ಗೆ ಹಿಂದೂತ್ವವಾದಿಗಳು ತಮ್ಮ ಸಂಸ್ಕೃತಿಗೆ ತಕ್ಕುದಾದ ಭಾಷೆಯಲ್ಲಿ ಧಮಕಿ ಹಾಕುತ್ತಾರೆ ಮತ್ತು ತನ್ನ ಕೃತಿಗಳ ಮೂಲಕವೇ ಘನತೆ-ಗೌರವಗಳಿಗೆ ಅರ್ಹನಾದ ಬರಹಗಾರನ ಬಗ್ಗೆ ನಾವು ಇಷ್ಟುದ್ದದ ವಿವರಣೆ ಕೊಡಬೇಕಾಗಿ ಬಂದಿದೆ! ಅಯ್ಯೋ ರಾಮ! ಇದು ಕೇಡುಗಾಲವಲ್ಲದೆ ಮತ್ತೇನು!

ಎಡೂರಪ್ಪ ಪತ್ರಕರ್ತರಿಗೆ ಆಶ್ರಯದಾತ ಗೊತ್ತಾ!

ಕಾರಿಪುರದ ಕರ್ಮಯೋಗಿ, ಬಾಟ ಬಹದ್ದೂರ, ಯಿಯದ ಸಂಘದ ಸಂಚಾಲಕ, ಇತ್ಯಾದಿ ಬಿರುದಾಂಕಿದ ಬೂಕನಕೆರೆ ಯಡಿಯೂರಪ್ಪನಿಗೆ ಅರವತ್ತೈದು ವಿ ಅರವತ್ತಾರಕ್ಕೆ ಬಿತ್ತಂತಲ್ಲಾ, ಈ ಸಮಯದಲ್ಲಿ ನಂದಿಸಬೇಕಾದದ್ದು ನಮ್ಮ ಧರ್ಮವಲ್ಲವೆ, ಹಾಗೆಂದು ನ್ ಮಾಡಿದರೆ ಸಿಕ್ಕಿದರು. ರಿಂಗ್ ಟೋನ್; ಯೋನ ಪುಟೋದಯಾತ್ ದಿಯೋಯೋನ್ನ...

"ಹಲೋ, ಯಾರೂ?"

"ನಾನು ಯಾಹೂ ಅಂತ ಸಾರ್, ಪತ್ರಕರ್ತ."

"ಏನಾಗಬೇಕಾಗಿತ್ತು?"

"ಎಡೂರಪ್ಪನೋರ ಮಾತಾಡಸಬೇಕಾಗಿತ್ತು. ರು ಸಾರ್?"

"ನಾನೂ ಪತ್ರಕರ್ತನೆ ಕಂಡ್ರಿ."

"ನಮಸ್ಕಾರ ಸಾರ್, ಪತ್ರಕರ್ತರನ್ನ ಎಡೂರಪ್ಪ ಚೆನ್ನಾಗಿ ಡಿಕೊಳ್ತರಂತೆ, ನಿಜವ ಸಾರ್?"

"ನಿಜ ಏನು, ಪತ್ರಕರ್ತ ಅಂದ್ರೆ ಸಾಕು, ಸೈಟ್ ತ್ತರೆ."

"ನಿಜವ ಸಾರ್?"

"ಸೈಟ್ ಕೊಡದಷ್ಟೇ ಅಲ್ಲ ಕಂಡ್ರೀ, ಅದರ ದುಡ್ಡನ್ನು ರೇ ಕಟ್ಟುತರೆ."

"ಹಾಗಿದ್ರೆ ನನಗೂ ಒಂದು ಸೈಟ್ ಬೇಕಲ್ಲಾ ಸಾರ್?"

"ಎಲ್ಲಿದ್ದಿರಿ ನೀವೂ?"

"ಬೆಂಗಳೂರಲ್ಲಿದ್ದಿನಿ ಸಾರ್."

"ಬೆಂಗಳೂರಲ್ಲಾದ್ರೆ ಕಷ್ಟ. ಬೇರೆ ಜಿಲ್ಲೆಗಳಲ್ಲಿ ಸೈಟ್ ಸಿಕ, ಬಂದವ್ರುರಿಗೆ ಹೇಳಿ, ಕೊಡುಸ್ತರೆ."

"ನಿಜಕ್ಕೂ ಆಶ್ರಯದಾತ ಸಾರ್ ಎಡೂರಪ್ಪ, ಅದ್ಕೆ ು, ಇತ್ತೀಚಿಗೆ ಪತ್ರಕರ್ತರು ಎಡೂರಪ್ಪನ್ನ ಸಾದಕ, ಕ, ನಿರ್ಭೀತ ನಾಯಕ ಅಂತ ಬರೀತಾ ಅವ್ರರೆ ಸಾರ್."

"ಬರೀಲೆ ಬೇಕಲ್ರೀ. ಎಡೂರಪ್ಪನಿಂದ ಸಹಾಯ ಂಡು ದ್ರೋಹಮಾಡಕ್ಕಾಗುತ್ತ?"

"ಸೈಟ್ ತಗೊಳದೆ ದ್ರೋಹ, ಅದರಲ್ಲೂ ಸೈಟ್ ಯೂ ಕಟ್ಟಸಿಕೊಳ್ಳೋದು ಮಹಾದ್ರೋಹ. ಅಲ್ಲವಾ ?"

"ನೀವು ಯಾವ ಕಾಲದ ಪತ್ರಕರ್ತರು?"

"ಬರೋಬರಿ ಇಪ್ಪತ್ತೆಂಟು ವರ್ಸಾತು ಸಾರ್ ರ್ತ ಆಗಿ."

"ಅದಕ್ಕೆ ನೀವಿಂಗೆ ಮಾತಾಡ್ತಿರಿ. ಎಡೂರಪ್ಪನೋರಿಗೆ ನ್ ಕೊಡ್ತಿನಿ ಮಾತಾಡಿ."

"ಸಾರ್ ನಮಸ್ಕಾರ, ನಾನು ಯಾಹೂ ಅಂತ ಪತ್ರಕರ್ತ."

"ಏನ್ ಯಾಹೂ ಅವ್ರರೆ?"

"ಬಿಜಿನ ಸಾರ್?"

"ಏನಿಲ್ಲ, ದೇವರಿಗೆ ಪ್ರಾರ್ಥನೆ ಮಾಡ್ತಯಿದ್ದೆ."

"ಯಾಕೆ ಸಾರ್ ಇಷ್ಟೊತ್ತಿನಲ್ಲಿ ಪ್ರಾರ್ಥನೆ?"

"ಏನಿಲ್ಲ, ನಮ್ಮ ಗಣೇಶ ಮದುವೆಯಾದ, ಅದ್ಕೆ."

"ಯಾರು ಹಯಾಗ್ರೀವಾಚಾರ್ರ ಗಣೇಶನಾ?"

"ಅವ್ರನಲ್ಲ ಕಂಡ್ರಿ, ಅವ್ರನಿಗ್ಯಾರು ಹೆಣ್ಣು ಕೊಡ್ತರೆ? ನಮ್ಮ ಮುಂಗಾರು ಮಳೆ ಗಣೇಶ ಮದುವೆಯಾದ. ಆತನ ಸಂಸಾರನ ಭಗವಂತ ಚೆನ್ನಾಗಿಟ್ಟರ್ಲಿ ಅಂತ ದೇವರಲ್ಲಿ ಪ್ರಾರ್ಥನೆ ಮಾಡ್ತಯಿದ್ದೆ."



"ಆತನ ಸಂಸಾರ ಕಷ್ಟದಲ್ಲಿದ್ದಿಯಾ ಸಾರ್?"

"ಹೊಸದಾಗಿ ಮದುವೆಯಾದ ದಂಪತಿಗಳಿಗೆ ಒಳ್ಳೆದಾಗ್ಲಿ ಅಂತೇಳಿ ಪ್ರಾರ್ಥನೆ ಮಾಡಿದೆ ಕಂಡ್ರಿ."

"ಗಣೇಶನಿಗೇನೂ ಹೊಸ ಮದುವೆ, ಹುಡುಗಿಗೆ ಹಳೆ ಮದುವೆಯಂತಲ್ಲಾ ಸಾರ್?"

"ಅದಕ್ಕೆ ಮುಂದೆ ಹಾಗಾಗದಂಗೆ ಒಳ್ಳೆದಾಗ್ಲಿ ಅಂತ ಪ್ರಾರ್ಥನೆ ಮಾಡಿದೆ, ಅದರಲ್ಲಿ ತಪ್ಪೇನೂ?"

"ತಪ್ಪು, ಸರಿ ಅಂತ ನಾನೇಳಕ್ಕೆ ಬರಲ್ಲ ಸಾರ್. ಅದೇನಿದ್ರು ಹಿಂದೂ ಧರ್ಮದ ವಕ್ತಾರರಾದ ಪೇಜಾವರಶ್ರೀ ಮತ್ತು ಬನ್ನಂಜೆ ಗೋವಿಂದಾಚಾರಿ ಅಂಥೋರು

ಥೂತ್ತೇರಿ

ಯಾಹೂ

ಹೇಳಬೇಕು."

"ಅವ್ರುರ್ಯಾಕ್ರಿ ಹೇಳಬೇಕು?"

"ಹಿಂದೂ ಧರ್ಮದ ಶಾಸ್ತ್ರದ ಪ್ರಕಾರ ವಿಧವೆಯೊಬ್ಬಳು ಮದುವೆಯ ಮಂಟಪದಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳಂಗಿಲ್ಲ, ಯಾವ ಶಾಸ್ತ್ರನೂ ಮಾಡಂಗಿಲ್ಲ, ವಿಧುರರಿಗೂ ಇದು ಅನ್ವಯವಾಗತ್ತ? ಅಥವಾ ಅವರು ನವದಂಪತಿಗಳ ಬಗ್ಗೆ ಪ್ರಾರ್ಥನೆ ಮಾಡಬಹುದಾ? ಅಥವಾ ನಿಷಿದ್ಧವೆ ಅನ್ನದನ್ನ ಧರ್ಮದ ಕೂದಲು ಸೀಳೋ ಬನ್ನಂಜೆ ಗೋವಿಂದಾಚಾರಿ ಚೆನ್ನಾಗೇಳ್ತನೆ. ಇನ್ನ ಪೇಜಾವರ ಶ್ರೀಗಳಂತೂ ತಮ್ಮ ಆಶೀರ್ವಾದಕ್ಕೆ ಅಮೆರಿಕಾ ದೇಶದ ಶಕ್ತಿಯಿದೆ ಅಂತ ತಿಳಿದಿರೊ ಜಗದ್ಗುರು. ಇವರೆಲ್ಲ ನಿಮ್ಮ ಪ್ರಾರ್ಥನೆ ಬಗ್ಗೆ ತೀರ್ಪು ಕೊಡಬಲ್ಲರು. ಇನ್ನೊಂದು ವಿಷಯ ಸಾರ್. ಮದುವೆಯಾದವರಿಗೆಲ್ಲಾ ನೀವು ಪ್ರಾರ್ಥನೆ ಮಾಡೋದಾದ್ರೆ, ಮುಸ್ಲಿಮರ ತರ ದಿನಕ್ಕೆ ಐದು ಬಾರಿನಾದ್ರು ಮಾಡಬೇಕಾಗತ್ತೆ. ದಯಮಾಡಿ ಇಂತ ಅನಿಷ್ಟ ಪದ್ಧತಿ ಕೈಬಿಡಿ. ಯಾಕಂದ್ರೆ ತಮ್ಮ ಸಮಯ ಅಮೂಲ್ಯವಾದದ್ದು, ಮುಂದೆ ಬಹಳ ಕಡಿಮೆ ಸಮಯ ಇದೆ. ನನ್ನ ಮಾತಲ್ಲಿ ತಪ್ಪಿದ್ರೆ ಕ್ಷಮಿಸಿ ಸಾರ್."

"ಥ್ಯಾಂಕ್ಯೂ ಯಾಹೂ ಅವ್ರರೆ. ಆಗಾಗ್ಗೆ ನಮ್ಮನ್ನ ಎಚ್ಚರುಸ್ತಾ ಇರಿ."

"ಸಾರಿ ಸಾರ್, ನಿಮಗೆ ಅಭಿನಂದನೆ ಹೇಳಕ್ಕೆ ಫೋನ್ ಮಾಡಿದ್ದೆ, ತಾವು ಅರವತ್ತಾರಕ್ಕೆ ಕಾಲಿಟ್ಟರಂತೆ. ಈ ಸಮಯದಲ್ಲಿ ಅಭಿನಂದಿಸಬೇಕು ಅನುಸ್ತು ಅದ್ಕೆ ಫೋನ್ ಮಾಡ್ದೆ."

"ಥ್ಯಾಂಕ್ಯೂ ಯಾಹೂ ಅವರೆ. ನನ್ನ ಸ್ನೇಹಿತರು, ಬಂಧುಗಳು, ಹಿತೈಷಿಗಳೆಲ್ಲಾ ನನಗೆ ಅರವತ್ತಾರು ವರ್ಷ ಆರಂಭವಾಯ್ತು ಅಂತ ಅಭಿನಂದಸ್ತಾಯಿದಾರೆ. ಅನೇಕ ಸಭೆ, ಸಮಾರಂಭ, ಯಜ್ಞ, ಹೋಮ, ಎಲ್ಲಾ ನಾಡಿನ ತುಂಬ ನಡಿತಾಯಿದಾವೆ. ಆದರೆ ನನಗೆ ಆ ಭಗವಂತನ ಕೃಪೆಯಿಂದ ಅರವತ್ತಾರು ಅನ್ನದರ ಬದಲು ಇಪ್ಪತ್ತಾರರ ಹುಮ್ಮಸ್ಸಿದೆ."

"ನಿಜ ಸಾರ್, ಕೂದಲು ಮತ್ತೆ ಮೀಸೆಗೆ ಒಂದಿಷ್ಟು ಇಂಡಿಕಾ ಡೈ ಹೊಡದ್ರೆ ನೀವು ವಿಜಯ ರಾಘವೇಂದ್ರನ ತಮ್ಮನಂಗೆ ಕಾಣ್ತಿರಿ. ನಿಮ್ಮ ಇಂತ ಆರೋಗ್ಯದ ಗುಟ್ಟೇನು ಸಾರ್?"

"ಅವಿರತವಾದ ದುಡಿಮೆ, ಶ್ರಮ, ಜನರ ಬಗ್ಗೆ ಕಾಳಜಿ, ಹೋರಾಟ, ಇವೆಲ್ಲಾ ನನ್ನ ಆರೋಗ್ಯದ ಗುಟ್ಟು."

"ಮನುಷ್ಯನ ಆರೋಗ್ಯ ಚೆನ್ನಾಗಿರುವಾಗ ಹೆಂಡತಿ ಸಾಯಬಾರ್ದು ಸಾರ್. ನಿಮಗೆ ಹೆಂಡತಿ ಭಾಗ್ಯ ಇಲ್ಲ ನೋಡಿ, ನನಗಂತೂ ಭಾಳ ಫೀಲಾಗತ್ತೆ."

"ಏನು ಮಾಡೋಕಾಗತ್ತೆ? ಅದೂ ಕೂಡ ಭಗವಂತನ ಇಚ್ಛೆ."

"ಯಾವ ಸೀಮೆ ಭಗವಂತ ಬಿಡಿ ಸಾರ್, ಐವತ್ತು ವರ್ಷದ ನಂತರ ಹೆಂಡ್ತಿಸಾಯಬಾರ್ದಾ ಸಾರ್."

"ಯಾಕೆ ಸಾಯಬಾರ್ದು?"

"ಪುನಃ ಮದುವೆಯಾಗಕ್ಕೆ ಬರಲ್ಲ ಸಾರ್. ಸುಮ್ಮನಿರಕ್ಕೂ ಆಗಲ್ಲ, ಅಂತ ಕಷ್ಟದ ವಿಜಿದು. ನೀವು ಪ್ರಾರ್ಥನೆ ಮಾಡೊ ಆ ಭಗವಂತನಿಗೆ ಹೇಳಿ ಹಾಗಂತ."

"ಅದೂ ಭಗವಂತನ ಇಚ್ಛೆಯಾಗಿದ್ರೆ ನಾವೇನು ಮಾಡೋಕಾಗುತ್ತೆ ಯಾಹೂ? ಭಗವದ್ಗೀತೇಲಿ ಹೇಳಿಲ್ಲವಾ, ಆಗೋದೆಲ್ಲಾ ಒಳ್ಳೆದಕ್ಕೆ ಅಂತಾ, ನನ್ನ ಬಾಳಿನಲ್ಲೂ ಒಳ್ಳೆದಾಗ್ತಾ ಬಂದಿದೆ."

"ಕಂಗ್ರಾಟ್ಸ್ ಸಾರ್, ನಾನು ತಪ್ಪು ತಿಳಕೊಂಡಿದ್ದೆ, ನಿಮ್ಮ ಭಾಗಕ್ಕೆ ಆಗೋದೆಲ್ಲಾ ಒಳ್ಳೆದ್ದೆ ಆಗಿದೆ ಅನ್ನದಾದ್ರೆ, ಮೈತ್ರಾದೇವಿಯವರ ಸಾವು ಒಳ್ಳೆದು, ನೀವು ಏಳೇದಿನ ಮುಖ್ಯಮಂತ್ರಿಯಾಗಿದ್ದು ಒಳ್ಳೆದು ಅನ್ನಂಗಾಗುತ್ತಲ್ಲ ಸಾರ್."

"ಇನ್ನೊಮ್ಮೆ ಸಿಕ್ಕಿ ಮಾತಾಡೋಣ."

"ಥೂತ್ತೇರಿ !!!"

ಮುರಳಿ ಮನೋಹರ ಜೋಷಿಯಾಗಲಿ, ದೆಹಲಿಯಲ್ಲಿ ದಾಂಧಲೆ ಮಾಡಿದ ಚೆಡ್ಡಿ ಭೂಪರಾಗಲಿ ರಾಮಾನುಜನ್‌ರ ಪ್ರಬಂಧವನ್ನು ಓದಿರಲಿಕ್ಕಿಲ್ಲ, ಈ ಮಹಾಶಯರಿಗೆ ಅವರ ವಿದ್ವತ್ತು-ಪ್ರತಿಭೆಗಳ ಪರಿಚಯವಿರಲಿಕ್ಕಿಲ್ಲ ಎಂದೇ ಇಟ್ಟುಕೊಳ್ಳೋಣ. ಆದರೆ ಪುಣ್ಯಾತ್ಮನ ಬಾಯಿಂದ ಅಂತಹ ಮಾತುಗಳು ಬಂದದ್ದಾಗಲಿ, ಈ ಗುಂಪಿನ ದಾಳಿಯಾಗಲಿ, ಬರಿ ಅಜ್ಞಾನದ ಫಲವಲ್ಲ. ರಾಮಾನುಜನ್ ತಮ್ಮ ಪ್ರಸ್ತುತ ಬರಹದಲ್ಲೂ, ತಮ್ಮ ಉಳಿದ ಸೃಜನಶೀಲ ಮತ್ತು ವಿದ್ವತ್ ಕೃತಿಗಳಲ್ಲೂ ಯಾವ ಬಹುರೂಪಿ ಲೋಕಜೀವನ, ವ್ಯಕ್ತಿ ಸ್ವಾತಂತ್ರ್ಯ ಭಿನ್ನಮತೀಯ ಚಿಂತನೆಗಳನ್ನು ಎತ್ತಿಹಿಡಿಯುತ್ತಾರೋ ಅಂತಹ ಜೀವನಕ್ರಮ ಹಾಗು ಜ್ಞಾನ ಸೂಕ್ಷ್ಮಗಳು ಹಿಂದೂತ್ವವಾದದ ಫ್ಯಾಸಿಸ್ಟ್ ವಿಚಾರಕ್ರಮಕ್ಕೆ ಅಪಥ್ಯವಾಗಿವೆ. ಭಾರತದ ಬಹುವಚನೀಯವಾದ ಜೀವನಕ್ರಮ ಮತ್ತು ಲೋಕಸಂಸ್ಕೃತಿಗಳನ್ನು, ಸಂವಿಧಾನಿಕ ಹಕ್ಕು ಸ್ವಾತಂತ್ರ್ಯಗಳನ್ನೂ ದಮನ ಮಾಡದೆ ತಮ್ಮ 'ಹಿಂದು ರಾಷ್ಟ್ರ' ಸಾಕಾರವಾಗದು ಎಂದು ಅವರು ಚೆನ್ನಾಗಿ ಬಲ್ಲರು. ಕೆಲವು ವರ್ಷಗಳ ಕೆಳಗೆ 'ಸಹಮತ್' ಸಾಂಸ್ಕೃತಿಕ ಸಂಘಟನೆ ದೆಹಲಿಯಲ್ಲಿ ಸಂಘಟಿಸಿದ್ದ, ರಾಮಾಯಣದ ಬಹುರೂಪಿ ಅಸ್ತಿತ್ವವನ್ನು ನಿರೂಪಿಸುವ ಪಾರಂಪರಿಕ ಚಿತ್ರಕಲಾ ಪ್ರದರ್ಶನಕ್ಕೆ ಸಂಘಪರಿವಾರದ ಪಡೆ ನುಗ್ಗಿ ಮಹತ್ವದ ಕಲಾಕೃತಿಗಳನ್ನು ಧ್ವಂಸ ಮಾಡಿತ್ತು. ಹಾಗೆಯೇ ಎರಡು ವರ್ಷಗಳ ಹಿಂದೆ ಶಿವಸೇನೆಯ ಗೂಂಡಾ ಪಡೆ ಪೂನದಲ್ಲಿರುವ ವಿಖ್ಯಾತ ಭಂಡಾರ್ಕರ್ ಓರಿಯಂಟಲ್ ಮ್ಯುಸಿಯಮ್ಮನ್ನು ಧ್ವಂಸಗೊಳಿಸಿತ್ತು, ಈಗ ದೆಹಲಿ ವಿಶ್ವವಿದ್ಯಾಲಯದಲ್ಲಿ ನಡೆದಿರುವ ದಾಂಧಲೆ, ಫ್ಯಾಸಿಸ್ಟ್ ರಾಜಕೀಯ ಮುಂದೊತ್ತಿಕೊಂಡು ಬರುತ್ತಿರುವುದರ ನಿಚ್ಚಳ ಸೂಚನೆಯಾಗಿದೆ.

ಈ ಬಗೆಯ ಫ್ಯಾಸಿಸ್ಟ್ ಆಕ್ರಮಣಗಳನ್ನು ರಾಜಿ ಇಲ್ಲದೆ ಖಂಡಿಸಬೇಕಾಗಿದ್ದ ಬಾಕಿ ರಾಜಕೀಯ ಪಕ್ಷಗಳು ಹಾಗು ಮಾಧ್ಯಮಗಳು, ಅದಕ್ಕೆ ವ್ಯತಿರಿಕ್ತವಾಗಿ, ತಾವೇ ಅಪರಾಧ ಎಸಗಿದ ಭಾವದಲ್ಲಿ ಹಿಂಜರಿಕೆಯ ಪ್ರತಿಕ್ರಿಯೆ ನೀಡುತ್ತಿರುವುದು ಫ್ಯಾಸಿಸಮ್ ಉಚ್ಛ್ರಾಯಿಸುತ್ತಿರುವ ಸ್ಪಷ್ಟವಾದ ಲಕ್ಷಣ. ಈ ದೇಶದ ಸುಶಿಕ್ಷಿತರು ಹಾಗು ತಾವು ಸಭ್ಯರೆಂದೇ ಭಾವಿಸಿಕೊಂಡಿರುವ ಮಧ್ಯಮ ವರ್ಗದ ಮಂದಿ, ಈ ದಬ್ಬಾಳಿಕೆಗೆ ಬೆಚ್ಚಬೇಕಾಗಿತ್ತು; ಬದಲಾಗಿ ಈ ವರ್ಗಗಳು ತುಳಿಸಿಕೊಂಡವರನ್ನೇ ಅಪರಾಧಿಗಳನ್ನಾಗಿಸಿ, ದಬ್ಬಾಳಿಕೆಯನ್ನು ಬಹಿರಂಗವಾಗಿ ಸಮರ್ಥಿಸುವ ಸಾರ್ವಜನಿಕ ವರಸೆ ಸಾಮಾನ್ಯವಾಗುತ್ತಿದೆ. ಅಂತೆಯೇ ಕನ್ನಡಿಗರು ಸ್ವಾಭಿಮಾನಿ



ಗಳಾಗುವ ಕುರಿತು, ಕನ್ನಡ ಭಾಷೆಯ ವಿದ್ವತ್ತು ಮತ್ತು ಪ್ರಾಚೀನತೆಯ ಕುರಿತು, ಕರ್ನಾಟಕದ ಜಾನಪದ ಸಂಪತ್ತನ್ನು ಕುರಿತು ರಮ್ಯತೆ, ರೋಷಾವೇಶಭರಿತರಾಗಿ ಮಾತನಾಡುವ ಬಹುಪಾಲು ಮಂದಿಗೆ ಹಿಂದೂತ್ವವಾದಿಗಳು ಸತತವಾಗಿ ನಡೆಸುತ್ತಿರುವ ಹಲ್ಲೆಗಳು ಕಿಂಚಿತ್ತು ಆತಂಕವನ್ನೂ ಹುಟ್ಟಿಸುತ್ತಿಲ್ಲ, ಈ ಬಗೆಯ ಸಾಂಸ್ಕೃತಿಕ ದಂಭಾಚಾರವೂ ನಮ್ಮ ನಾಡಿನಲ್ಲಿ ಫ್ಯಾಸಿಸಂ ಬಲಗೊಳ್ಳುತ್ತಿರುವುದರ ಮತ್ತೊಂದು ಲಕ್ಷಣ.

75 ವರ್ಷಗಳ ಹಿಂದೆ ಜರ್ಮನಿಯಲ್ಲಿ ಹಿಟ್ಲರನ ನಾಝಿ ಪಾರ್ಟಿ ಚುನಾವಣೆಗಳಲ್ಲಿ ಭಾರಿ ಬಹುಮತ ಪಡೆದು ಅಧಿಕಾರಕ್ಕೆ ಬಂದಿತು. ಬಹುಪಾಲು ಸುಶಿಕ್ಷಿತ ಮಧ್ಯಮ ವರ್ಗದವರು (ವೈದ್ಯರು, ವಕೀಲರು, ಮೇಷ್ಟ್ರುಗಳು, ಇಂಜಿನಿಯರುಗಳು) ಹಾಗು ಜರ್ಮನಿಯ ಬಹುಸಂಖ್ಯಾತರ ಧಾರ್ಮಿಕ ಕೇಂದ್ರವಾದ ಲುಥರ್ ಪಂಥದ ಚರ್ಚಿನ ಧರ್ಮ ಗುರುಗಳು ನಾಝಿಗಳ ಫ್ಯಾಸಿಸ್ಟ್ ಅಧಿಕಾರವನ್ನು ಬೇಷರತ್ತಾಗಿ ಬೆಂಬಲಿಸಿದ್ದರು. ನಾಝಿಗಳ ಪತನದ ನಂತರದ ಕೆಲವೇ ವರ್ಷಗಳಲ್ಲಿ ಯಹೂದಿಯರ ನರಮೇಧದಲ್ಲಿ ಭಾಗಿಗಳಾಗಿದ್ದ ಉನ್ನತ ಹಂತದ ಅಧಿಕಾರಿಗಳ ಅಪರಾಧವೇನೋ ಬೆಳಕಿಗೆ ಬಂತು. ನರಮೇಧದಲ್ಲಿ ಕೆಳ ಹಂತದ ಅಧಿಕಾರ ವರ್ಗ ಹಾಗು ಸಮಾಜದ ಪ್ರತಿಷ್ಠಿತರ ಪಾತ್ರವನ್ನು ಕಂಡು, ಒಪ್ಪಿಕೊಳ್ಳುವುದಕ್ಕೆ ಎಪ್ಪತ್ತು ವರ್ಷಗಳೇ ಹಿಡಿದವು. ಆದರೆ ಇಷ್ಟು ಕಾಲದ ನಂತರವೂ ಜರ್ಮನಿಯ ಚರ್ಚ್ ಆಗಲಿ, ಮಧ್ಯಮ ವರ್ಗವಾಗಲಿ ಈ ಹಿಂಸಾಕಾಂಡದಲ್ಲಿ ತನ್ನ ಪಾತ್ರವೇನು ಎನ್ನುವುದರ ಆತ್ಮವಿಮರ್ಶೆ ಮಾಡಿಕೊಂಡು ತಪ್ಪೊಪ್ಪಿಕೊಂಡಿಲ್ಲ; ಇದು ಆಗದ ಹೊರತು ಜರ್ಮನಿಯ ಪ್ರಾಯಶ್ಚಿತ್ತ ಪೂರ್ಣವಾಗುವುದಿಲ್ಲ ಎನ್ನುತ್ತಾರೆ 'ಗಾರ್ಡಿಯನ್' ಪತ್ರಿಕೆಯ ಅಂಕಣಕಾರ ಜೊನಾಥನ್ ಸ್ಟೀಲ್ (ದಿ ಹಿಂದು, 28.2.2008). ತನ್ನ ಕಾಲದ ಹಿಂಸೆಯ ಆಳದ ಅರಿವಿದ್ದ ರಾಮಾನುಜನ್‌ರ ಪದ್ಯ ಒಂದರ ಸಾಲುಗಳು:

ಮ- ಮಗಳು ಹೊಸ ಲ್ಯಾಂಪ್ ಶೇಡ್
ಮ- ಮಾಡಿದಾಳೆಯೆ? ಅಯ್ಯೊ ಬಿಡಿ,
ನಾಜಿಗಳ ಹಾಗೆ ಜಾತಿ ನೋಡಿ
ಬೇಯಿಸಿ ಮನುಷ್ಯ ಚರ್ಮ ಸುಲಿದು
ಲ್ಯಾಂಪ್ ಶೇಡ್ ಮಾಡಿದರೆ ಅದು
ತೋ- ತೋರಿಸುವ ಬೆಳಕೇ ಬೇರೆ.

(ಮತ್ತೂ ಇತರ ಪದ್ಯಗಳು, ಮನೋಹರ ಗ್ರಂಥಮಾಲಾ, 1977)

ಇವತ್ತು ಕೆಲವು ಮಂದಿ 'ರಾಮಾನುಜನ್ ಕವಿಯೇ ಅಲ್ಲ' ಎನ್ನುವ ರಾಗ ಶುರುಮಾಡಿಕೊಂಡಿದ್ದಾರೆ.

ಎ.ಕೆ.ರಾಮಾನುಜನ್‌ರ ಕೃತಿಗಳು

ಪದ್ಯಗಳ ಸಂಗ್ರಹ:

ಹೊಕ್ಕುಳಲ್ಲಿ ಹೂವಿಲ್ಲ, ಕುಂಟೋಬಿಲ್ಲೆ ಮತ್ತು ಇತರ ಪದ್ಯಗಳು (ಕನ್ನಡ), ದಿ ಸ್ಟ್ರೈಡರ್ಸ್, ರಿಲೇಷನ್ಸ್, ಸೆಕೆಂಡ್ ಸೈಟ್, ಕಲೆಕ್ಟೆಡ್ ಪೊಯಮ್ಸ್ (ಇಂಗ್ಲಿಷ್)

ಗದ್ಯ:

ಮತ್ತೊಬ್ಬನ ಆತ್ಮಕತೆ, ಹಳದಿ ಮೀನು (ಕಾದಂಬರಿ), ಅಣ್ಣಯ್ಯನ ಮಾನವಶಾಸ್ತ್ರ, ಮಧುರೈಯಲ್ಲಿ ಬೊಕ್ಕ ತಲೆ (ಕತೆಗಳು), ಗಾದೆಗಳು, ದಿ ಕಲೆಕ್ಟೆಡ್ ಎಸ್ಸೇಸ್ (ಸಮಗ್ರ ಇಂಗ್ಲಿಷ್ ಪ್ರಬಂಧಗಳ ಸಂಗ್ರಹ)


ಅನುವಾದ:

ದ ಇಂಟೀರಿಯರ್ ಲ್ಯಾಂಡ್ ಸ್ಕೇಪ್ (ತಮಿಳು ಪ್ರಾಚೀನ ಕಾವ್ಯ), ಸ್ಪೀಕಿಂಗ್ ಆಫ್ ಶಿವ (ಕನ್ನಡದ ವಚನಗಳು), ಸಂಸ್ಕಾರ. ಪೋಯಮ್ಸ್ ಆಫ್ ಲವ್ ಅಂಡ್ ವಾರ್, ಹೈಮನ್ಸ್ ಫಾರ್ ದ ಡ್ರೌನಿಂಗ್, ಫೋಕ್ ಟೇಲ್ಸ್ ಫ್ರಮ್ ಇಂಡಿಯ, ಫ್ಲವರಿಂಗ್ ಟ್ರೀಸ್ ಅಂಡ್ ಅದರ್ ಸ್ಟೋರೀಸ್.

ಸಂಪಾದಿತ ಕೃತಿಗಳು:

ದ ಲಿಟರೇಚರ್ ಆಫ್ ಇಂಡಿಯ, ಅನದರ್ ಹಾರ್ಮೋನಿ, ಆಕ್ಸ್‌ಫರ್ಡ್ ಆಂಥಾಲಜಿ ಆಫ್ ಮಾಡರ್ನ್ ಇಂಡಿಯನ್ ಪೊಯಟ್ರಿ.

ಬಿಜೆಪಿ ಸೇರಲು ಅಂಬಿಗೆ 50 ಕೋಟಿ!




ಕ್ರಿಕೆಟ್ ಆಟಗಾರರನ್ನು ಯಾವ್ಯಾವುದೋ ಕಂಪನಿಗಳು ಕೋಟ್ಯಂತರ ಹಣ ತೆತ್ತು ಹರಾಜಿನಲ್ಲಿ ಖರೀದಿಸಿದ್ದನ್ನು ಮೊನ್ನೆ ತಾನೆ ನೋಡಿ ವಾಕರಿಕೆ ಬಂದಂತಾಗಿತ್ತಲ್ಲವೆ?

ಈಗ ಸಿನಿಮಾ ಸ್ಟಾರ್ ಕಂ ರಾಜಕಾರಣಿಗಳ ಸರದಿ ಶುರುವಾಗುವಂತಿದೆ. ಹೀಗೆ ತಮ್ಮನ್ನೇ ದುಡ್ಡಿಗಾಗಿ, ಅಧಿಕಾರಕ್ಕಾಗಿ ಮಾರಿಕೊಳ್ಳಲು ಯಾವ್ಯಾವ ಮಾನಗೇಡಿಗಳು ರೆಡಿಯಾಗುತ್ತಿದ್ದಾರೋ ಲಿಸ್ಟ್ ಪೂರ್ತಿ ಸಿಗುತ್ತಿಲ್ಲ.

ಆದರೆ....

ಖರೀದಿಗೆ ಹೊರಟಿರುವವರು ಮಾತ್ರ ಅಪ್ರತಿಮ ದೇಶಭಕ್ತರಾದ ಬಿಜೆಪಿಗಳು! ಕಳೆದ ತಿಂಗಳು ಕಾಂಗ್ರೆ ನಾಯಕ ಸಂಸದ ಅಂಬರೀಷ್‌ರನ್ನು ಬಿಜೆಪಿಗೆ ಸೆಳೆಯಲು ಹೋಗಿ ಚೆನ್ನಾಗಿ ಉಗಿಸಿಕೊಂಡು ಬಂದಿರುವ ರಾಜ್ಯ ಬಿಜೆಪಿ ನಾಯಕನೊಬ್ಬ ಈ ಸುದ್ದಿ ಎಲ್ಲೂ ಹೊರಬರದಂತೆ lock ಮಾಡಿಬಿಟ್ಟಿದ್ದ.





ಅಂದಹಾಗೆ ಅಂಬರೀಷ್‌ಗೆ ಈ ಬಿಜೆಪಿ ನೀಡಿದ್ದ ಆಫರ್ ಎಷ್ಟು ಗೊತ್ತೆ?

ಭರ್ತಿ 50 ಕೋಟಿ ರೂಪಾಯಿಗಳು!!

ಅಂಬರೀಷ್ ತಾನು ಕಾಂಗ್ರೆಸ್ ಬಿಟ್ಟು ಬರಲ್ಲ ಅಂತ ಖಡಾಖಂಡಿತವಾಗಿ ಹೇಳಿ ಕಳಿಸಿದರೆಂಬುದೂ ಈಗ ಖಚಿತವಾಗಿದೆ. ಇಷ್ಟು ಹೇಳಿ ಮುಗಿಸಿಬಿಟ್ಟರೆ ಈ ಡೀಲಿನ ಕ್ಲೈಮ್ಯಾಕ್ಸ್ ಹೇಳಿದಂತಾಗುವುದಿಲ್ಲ.

ಅಂಬಿ ತನ್ನ ಹತ್ತಿರ ಡೀಲ್ ಕುದುರಿಸಲು ಬಂದಿದ್ದ ಆ ಬಿಜೆಪಿ ಗ್ಯಾಂಗಿನವರಿಗೆ "ಹೋಗೋಲೆಯ್ ಐವತ್ತು ಕೋಟಿ ಅಂತೆ ಐವತ್ಕೋಟಿ.. ಈ ಎಂಜಲ್ ಕಾಸ್‌ಗಾಗಿ ನಾನು ಮಂಡ್ಯದ ಪಟಾಪಟಿ ಚೆಡ್ಡಿ ಬಿಟ್ಟು ನಿಮ್ ಖಾಕಿ ಚೆಡ್ಡಿ ಹಾಕ್ಕಳ್ಳಾ? ಹೋಗ್ರಲೇ... ನನ್ಮಕ್ಳಾ" ಎಂದು ಬೇಜಾನ್ ಉಗಿದು ಓಡಿಸಿದ್ದಾರೆ.

ಕಳೆದ ಎರಡು ತಿಂಗಳಲ್ಲಿ ಬಿಜೆಪಿಗೆ ಬೀಳುತ್ತಿರುವ ಎರಡನೇ ಒದೆ ಇದು. ಅಂಬಿಗೂ ಮುನ್ನ ಅಸಾಧ್ಯ ಮಾತುಗಾರ ಸಿ.ಎಂ. ಇಬ್ರಾಹಿಂರನ್ನು ಬಿಜೆಪಿಗೆ ಸೆಳೆಯುವ ಒಂದು ಪ್ರಯತ್ನ ನಡೆದಿತ್ತು. ಕಾಂಗ್ರೆಸ್‌ನಿಂದ ಹೊರಗೆ ತಳ್ಳಿಸಿಕೊಂಡಿದ್ದ ಇಬ್ರಾಹಿಂ ದೇವೇಗೌಡರೊಂದಿಗೂ ಜಗಳ ಆಡಿಕೊಂಡು ದೂರಾಗಿದ್ದರು. ಇಬ್ರಾಹಿಂಗೂ ಒಂದು ನೆಲೆ ಬೇಕಿತ್ತು. ಆದೇರೀತಿ ಮುಸ್ಲಿಂ ಮತದಾರರನ್ನು ಒಲೈಸಲು ಬಿಜೆಪಿಗೂ ಒಬ್ಬ ನಾಮ್‌ಕಾವಸ್ತೆ ಮುಸ್ಲಿಂ ಲೀಡರ್ ಬೇಕಿತ್ತು. ಆದರೆ ಆ ಖರೀದಿ ಡೀಲು ಕುದುರಲಿಲ್ಲ.

ಕಾಂಗ್ರೆಸ್‌ನಲ್ಲಿ ಜಾಫರ್ ಷರೀಫ್ ಇರುವವರೆಗೂ ತನಗೆ ಒ... ಸ್ಥಾನ ಸಿಗಲಾರದೆಂಬ ಅನುಮಾನ ಇಬ್ರಾಹಿಂಗಿದ್ದ ಕಾರಣ ಅವರೊ... ಕ್ಷಣ ಈ ಬಿಜೆಪಿ ಎಂಬ ದುಷ್ಟರ ಗುಂಪು ಸೇರ... ಯೋಚಿಸಿದ್ದೇನೋ ನಿಜ. ಆದರೆ ಕಡೇ ಗಳಿಗೆಯಲ್ಲಿ ಹಿಂದೇ... ಹಾಕಿದ ಇಬ್ರಾಹಿಂ ಈಗ ಮತ್ತೆ ಕಾಂಗ್ರೆಸ್ ಬಾಗಿಲಿಗೆ ಬ... ನಿಂತಿದ್ದಾರೆ.

ಇಷ್ಟಕ್ಕೂ ಇಬ್ರಾಹಿಂ ಮುಖ ನೋಡಿ ಯಾವ ಮುಸ್ಲಿ... ಬಿಜೆಪಿಗೆ ಒಂದು ಓಟೂ ಹಾಕುತ್ತಿರಲಿಲ್ಲ ಎಂಬುದು ವಾಸ್ತ... ಅಸಲಿಗೆ ಈ ಇಬ್ರಾಹಿಂ ಮಾತುಗಾರನಾಗಿ ಪ್ರಸಿದ್ಧನೇ ... ಮುಸ್ಲಿಮರ ಲೀಡರೆಂದು ಯಾರೂ ಪರಿಗಣಿಸಿಲ್ಲ ಬಿಡಿ.

ಇದೆಲ್ಲಾ ಒತ್ತಟ್ಟಿಗಿರಲಿ.

ಈಗಾಗಲೇ ಕರ್ನಾಟಕ ವಿಧಾನಸಭಾ ಎಲೆಕ್ಷನ್‌ನಲ್ಲಿ ಗ... ಬಿಟ್ಟಿರುವಂತೆ ಕುಣಿದಾಡುತ್ತಿರುವ ಬಿಜೆಪಿಯ ಅಸಲಿ ಸ್ಥಿತಿ... ಏನು?

ಅಂಬರೀಷ್, ಇಬ್ರಾಹಿಂ ಥರದ ನಾಯಕರನ್ನು ತನ್ನತ್ತ ಸೆಳೆಯ... ಈ- ಬಿಜೆಪಿಗಳೇಕೆ ಕೋಟ್ಯಂತರ ರೂಪಾಯಿಗಳ ಆಮಿ... ಒಡ್ಡುತ್ತಿದ್ದಾರೆಂದು ನಾವು ನೋಡಬೇಕಿದೆ.

ಬಿಜೆಪಿಗೆ ಅಭ್ಯರ್ಥಿಗಳೇ ಇಲ್ಲ



2004 ರ ಎಲೆಕ್ಷನ್‌ನಲ್ಲಿ ಬಿಜೆಪಿ ಹೆಚ್ಚು ಸೀಟ್‌ಗಳನ್ನು ಗೆದ್ದಿದ್ದು ಕರಾವಳಿ ಹಾಗೂ ಉತ್ತರ ಕರ್ನಾಟಕ ಪ್ರದೇಶದಲ್ಲಿ. ಆದರೆ ಹಳೇ ಮೈಸೂರಿನಲ್ಲಿ ಅಂದರೆ ಒಕ್ಕಲಿಗರ ಪ್ರಾಬಲ್ಯವಿರುವ ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ತುಮಕೂರು, ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಅಡ್ರೆಸ್ಸೇ ಸಿಗದಂತೆ ಸೋತು ಸುಣ್ಣವಾಗಿ ಹೋಗಿದ್ದರು.

ಮೈಸೂರಿನಲ್ಲೊಬ್ಬ ಶಂಕರಲಿಂಗೇಗೌ... ಮಂಡ್ಯದ ಬನ್ನೂರಿನಲ್ಲಿ ಸುನೀತಾ ವೀ... ಗೌಡ (ನಂತರ ಜೆಡಿಯು ಸೇರಿದರು), ಹಾಸ... ಅರಸಿಕೆರೆಯಿಂದ ಬಸವರಾ... ತುಮಕೂರಿನಿಂದ ಸೊಗಡು ಶಿವ... ಕಳ್ಳಂಬೆಳ್ಳದಲ್ಲಿ ಕಿರಣ್‌ಕುಮಾರ್ ಮತ್ತು ... ಕೋಲಾರದಲ್ಲಿ ಒಬ್ಬನೇ ಜಟ್ಟಿಯೆಂಬ... ಮಾಲೂರಿನ ಕೃಷ್ಣಯ್ಯ ಶೆಟ್ಟಿ, ಜೊತೆಗೂ... ಬೇತಮಂಗಲದ ವೆಂಕಟ ಮುನಿಯಪ್ಪ... ಹೀ... ಬರೋಬ್ಬರಿ 6 ಜಿಲ್ಲೆಗಳಿಂದ ಬಿಜೆಪಿಯ... ಗೆದ್ದುಬಂದವರು ಜುಜುಬಿ ಏಳು ಜನ ಮಾ... ಇನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ... ಕ್ಷೇತ್ರಗಳಾದ ಚನ್ನಪಟ್ಟಣ, ರಾಮನಗರ, ಕನಕ... ಸಾತನೂರು, ಹೊಸಕೋಟೆ, ದೇವನಹ... ದೊಡ್ಡಬಳ್ಳಾಪುರ, ನೆಲಮಂಗಲ ಹಾಗ... ಮಾಗಡಿಗಳಲ್ಲಿ ಬಿಜೆಪಿ ಗೆಲ್ಲುವುದಿರಲಿ, ಅಂಥ ತಾಕತ್ತಿರುವ ಅಭ್ಯರ್ಥಿಯೇ ... ಪಾರ್ಟಿಗೆ ಸಿಕ್ಕಿರಲಿಲ್ಲ. ಅಸಲಿಗೆ ಈಗಲೂ ಈ ಕ್ಷೇತ್ರಗಳಲ್ಲಿ ಬಿಜೆಪಿಗೆ ಸರಿಯಾ... ಪಾರ್ಟಿ ಕಾರ್ಯಕರ್ತರೂ ಗತಿಯಿಲ್ಲ.

ಇನ್ನು ಬೆಂಗಳೂರು ನಗರದಲ್ಲಿ ಮಾತ್ರ ಬಿಜೆಪಿ ನಾಲ್ಕಾರು ಸೀಟ್ ಗೆದ್ದುಕೊಂಡಿ...

ಈ ಹಿನ್ನೆಲೆಯಲ್ಲಿ ಹಳೇ ಮೈಸೂರಿನ ಜಿಲ್ಲೆಗಳಲ್ಲಿ ಬಿಜೆಪಿಯ ಇವತ್ತಿನ ... ಏನು ಎಷ್ಟು ಎಂದು ನೋಡಿದರೆ ಹಾಸ್ಯಾಸ್ಪದ ಎನಿಸುವಂತಿದೆ. ಈ ಎಲ್ಲಾ ... ಬಿಜೆಪಿಗೆ ಸರಿಯಾದ ವರ್ಚಸ್ಸಿರುವ ಕ್ಯಾಂಡಿಡೇಟುಗಳೂ ಇಲ್ಲ, ಪಾ... ಕಾರ್ಯಕರ್ತರಂತೂ ಮೊದಲೇ ಇಲ್ಲ.

ಸಂಘ ಪರಿವಾರದ ಗೇಣೀಕಾರರಾದ ವಿಪ್ರ ಪತ್ರಕರ್ತರು ಏನೇ ತುತ್ತೂ... ಊದಿದರೂ ಒಟ್ಟಾರೆ ಹಳೇ ಮೈಸೂರಿನಲ್ಲಿ ಬಿಜೆಪಿಯ ಸ್ಥಿತಿ 2004 ಎಲೆಕ್ಷನ್‌ಗಿಂತ ಭಿನ್ನವಾಗಿಲ್ಲ.

ಈ ಲೆಕ್ಕಾಚಾರ ಯಡಿಯೂರಪ್ಪ ಸದಾನಂದಗೌಡರಿಗೆ ಚೆನ್ನಾಗಿ ಗೊತ್ತಿ... ಹಾಗಾಗಿ ಹೇಗಾದರೂ ಮಾಡಿ ಹಳೇ ಮೈಸೂರಿನಲ್ಲಿ ಅದರಲ್ಲೂ ಮುಖ್ಯವಾ... ಒಕ್ಕಲಿಗರ ಕೋಟೆಗೆ ಲಗ್ಗೆ ಹಾಕಲು ಇವರೊಂದು ಪ್ಲಾನ್ ಮಾಡಲು ಹೊರಟಿದ್ದ...

ಅಂಬರೀಷ್‌ಗೆ ಗಾಳ ಹಾಕುವುದೇ ಆ ಪಿತೂರಿಯಾಗಿತ್ತು.

50 ಕೋಟಿ ರಹಸ್ಯ ಡೀಲ್

ಕಾಂಗ್ರೆಸ್‌ನಲ್ಲಿದ್ದರೂ ಅಂಬರೀಷ್ ಆತ್ಮ ವಿಲವಿಲನೆ ಒದ್ದಾಡುತ್ತಿರುವುದನ್ನ... ಗಮನಿಸಿದ್ದ ಬಿಜೆಪಿ ಅಂಬಿಯನ್ನು ಸಮಾಧಾನಪಡಿಸುವ ನೆಪದಲ್ಲಿ ಬಿಜೆಪಿಗೆ ಸೆಳೆದುಕೊಳ್ಳುವ ತಂತ್ರ ಹೂಡಿತ್ತು.

ಕಾಂಗ್ರೆಸ್‌ನಲ್ಲಿದ್ದರೂ ಯಾರಿಗೂ ಬೇಡವಾದ ನಾಯಕ ತಾನೆಂಬ ಕೊರಗು ಅಂಬಿಗೆ ಈಗಲೂ ಇದೆ. ಕಾವೇರಿ ವಿವಾದದಲ್ಲಿ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರೂ ಅದನ್ನು ಹೈಕಮಾಂಡ್ ಅಂಗೀಕರಿಸದೆ ಅಂಬಿ ಸಂದಿಗ್ಧ ಸ್ಥಿತಿ... ತಲುಪಿದ್ದರು. ಇಂಥ ಅತೃಪ್ತ ಮನಸ್ಸಿನ ಅಂಬಿ ಕಾಂಗ್ರೆಸ್ ತೊರೆದು ಬರಬಹುದೆಂದು ಬಿಜೆಪಿಗಳಿಗೆ ಅದ್ಯಾವ ಅವಿವೇಕಿ ಹೇಳಿಕೊಟ್ಟನೊ ಅಂತೂ ಬಿಜೆಪಿಗಳು ಅಂಬಿ ಮನೆಬಾಗಿಲು ತಟ್ಟಲು ಹೊರಟರು. ಇದಕ್ಕಾಗಿ ಅವರು ಬಿಹಾರಿ ಬಾಬು ಹಿಂದಿ ನಟ ಶತ್ರುಘ್ನ ಸಿನ್ಹಾನ ಹತ್ತಿರ ಹೋಗಿದ್ದಾರೆ. ಅಂಬಿ-ಶತ್ರುಘ್ನರ ಗೆಳೆತನ ಎಲ್ಲರಿಗೂ ಗೊತ್ತಿರುವ ವಿಚಾರ. ಈಗಾಗಲೇ ಚೆಡ್ಡಿ ಗ್ಯಾಂಗ್ ಸೇರಿರುವ ಶತ್ರು ಅಂಬಿಯನ್ನು ಹೈಜಾಕ್ ಮಾಡಿ ಬಿಜೆಪಿಗೆ ತಂದೆಸೆಯುತ್ತಾನೆಂದು ಯಡ್ಡಿ ನಂಬಿಕೊಂಡಿದ್ದರು. ಆದರೆ ಶತ್ರುಘ್ನ ಸಿ... ಅಂಬಿ ಜೊತೆ ಫೋನ್‌ನಲ್ಲಿ ಮಾತಾಡಿದನಾದರೂ ಅಂಬಿ ಕದಲಲಿಲ್ಲ. ಇನ್ನೊಂದು ಪ್ರಯತ್ನವೆಂಬಂತೆ ಅಂಬಿ ಒಮ್ಮೆ ದೆಹಲಿಗೆ ಹೋಗಿದ್ದಾ...

ಬಿಜೆಪಿಯ ದಯನೀಯ ಸ್ಥಿತಿ

ಜೋಕರ್‌ಗಳೇ ಸ್ಟಾರ್‌ಗಳು



ಸಿನಿಮಾ ನಟರು ತಮ್ಮ ಪಾರ್ಟಿಗೆ ಬಂದು ಸೇರಿಬಿಟ್ಟರೆ ಲಕ್ಷಾಂತರ ಓಟುಗಳು ಬಂದುಬಿಡುತ್ತವೆಂಬ ಭ್ರಮೆ ಬಿಜೆಪಿಗಿರುವಂತಿದೆ. ಆದಕ್ಕಾಗಿ ಅಂಬರೀಷ್ ಸೆಳೆಯಲು ಹೋಗಿ ಉಗಿಸಿಕೊಂಡು ಬಂದರೂ ಅವರು ಬೇರೆ ನಟರಿಗೆ ಗಾಳ ಹಾಕುವುದನ್ನು ಬಿಟ್ಟಿಲ್ಲ.

ಒಂದಿಬ್ಬರು ಅಬ್ಬೇಪಾರಿ ಕಲಾವಿದರು ಈಗ ಬಿಜೆಪಿ ಸೇರಿಕೊಂಡಿದ್ದಾರೆ.

ಟೆನ್ನಿಸ್ ಕೃಷ್ಣನೆಂಬ ನಟ ಭಯಂಕರ ಅಂಥವರಲೊಬ್ಬ, ಬಣ್ಣ ಹಚ್ಚಿ ನಟಿಸುವುದನ್ನು ಬಿಟ್ಟು ಹಗಲೂ ರಾತ್ರಿ ಎಣ್ಣೆ ಏರಿಸುವುದನ್ನೇ ಫುಲ್‌ಟೈಂ ಕೆಲಸ ಮಾಡಿಕೊಂಡಿರುವ ಕೃಷ್ಣ ತನ್ನ ಕೀರಲು ಕಂಠದಲ್ಲಿ ಬಿಜೆಪಿ ಪರ ಪ್ರಚಾರಕ್ಕೆ ಹೋದಾಕ್ಷಣ ಓಟು ಹಾಕಲು ಜನ ಏನು ಮುರ್ಖರಾ?



ಇನ್ನೊಬ್ಬ ಫೇಯಲ್ಡ್ ನಟ ತೆಲುಗಿನ ಸಾಯಿಕುಮಾರ್ ಈ ಬಾರಿ ಬಾಗೇಪಲ್ಲಿಯಿಂದ ಬಿಜೆಪಿ ಅಭ್ಯರ್ಥಿಯಾಗುವ ಸೂಚನೆಗಳಿವೆ. ಕಳೆದ ಚುನಾವಣೆಯಲ್ಲೂ ಇದೇ ಸಾಯಿಕುಮಾರ್ ಬಿಜೆಪಿ ಪರವಾಗಿ ಹತ್ತಾರು ಕಡೆ ಓಡಾಡಿದರೂ ಜನ ಸೇರಿರಲಿಲ್ಲ. ಇನ್ನು ನಿರುದ್ಯೋಗಿ ಕಲಾವಿದರಾದ ಸುಂದರ್‌ರಾಜ್-ಪ್ರಮೀಳಾ ಜೋಷಾಯ್ ಜೋಡಿ ಬಿಜೆಪಿ ಸೇರಿಕೊಂಡಿದೆ. ಜಾತಿ ಬೆಂಬಲ, ದುಡ್ಡು ಜನಪ್ರಿಯತೆ ಒಂದೂ ಇರದ ಇವರಿಂದಲೂ ಬಿಜೆಪಿಗೆ ಚಿಕ್ಕಾಸಿನ ಪ್ರಯೋಜನವೂ ಆಗಲಾರದು. ಇದೇ ಲಿಸ್ಟಿಗೆ ಈಗ ನಿರ್ದೇಶಕ ಮಹೇಂದರ್, ನಟ ಶೃತಿ ಸೇರಿದ್ದಾರೆ. ಕೊಳ್ಳೇಗಾಲ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಲು ಬಯಸಿರುವ ಮಹೇಂದರ್‌ಗೆ ಅಲ್ಲಿ ಠೇವಣಿ ಸಿಗುವುದೂ ಕಷ್ಟ. ಬಿಎಸ್‌ಪಿ ಅಭ್ಯರ್ಥಿ ಎನ್. ಮಹೇಶ್ ಎದುರು ಮಹೇಂದರ್ ಥರದವರು ಕಾಗದದ ಚೂರಿಗೆ ಸಮ ಅಷ್ಟೆ.

ಒಟ್ಟಾರೆ ಬಿಜೆಪಿ ಪಾಳೆಯ ಸೇರಿರುವ ಈ ಸಿನಿಮಾದವರಿಂದ ಬಿಜೆಪಿಗೆ ಏನೂ ಗಿಟ್ಟುವುದಿಲ್ಲ.

ಅಂದಹಾಗೆ

ಅಂಬಿಗೆ 50 ಕೋಟಿ ಕೊಡಲು ಹೊರಟಿದ್ದವರು ಈ ಟೆನ್ನಿಸ್ ಕೃಷ್ಣ ಮಹೇಂದರ್, ಸುಂದರ್‌ರಾಜ್‌ಗೂ ಏನಾದರೂ ದುಡ್ಡು ಕೊಟ್ಟು ಸೇರಿಸಿಕೊಂಡಿದ್ದಾರಾ ಅಂತ ಚೆಕ್ ಮಾಡಿ ನೋಡಿದರೆ ಬಿಜೆಪಿ ಲೀಡರ್ ಒಬ್ಬರು "ಈ ವೇಸ್ಟ್ ಬಾಡಿಗಳಿಗೆ ದುಡ್ಡು ಬೇರೆ ಕೊಟ್ಟು ಪಾರ್ಟಿಗೆ ಸೇರಿಸ್ಕೋಬೇಕಾ" ಎಂದು ಗೇಲಿ ಮಾಡಬೇಕಾ!

ಬಣ್ಣಬ್ಬ, ಬಿಜೆಪಿ ಅಧ್ಯಕ್ಷ ರಾಜನಾಥ್ ...ವರಿಗೂ ಭೇಟಿ ಮಾಡಿಸಿವೆ.

...ನವೆಂಬರ್ 3ರಂದು ಅವರ ... ಅಂಬಿ ಅಗಲೂ ಮಿಸುಕಾಡಿರಲಿಲ್ಲ. ಇವರ ...ಮಾಯಿಸುವುದಾಗಿ ಕಳೆದ ತಿಂಗಳು ಅಡ್ವಾಣಿ ...ನೆರವು ಸಂಪದ ಸಿದ್ದೇಶ್ವರರ ಕಾಲೇಜಿನ ...ಗೆ ಬಂದಾಗಲೂ ಅಂಬಿ ಜೊತೆ ...ವಿಸಿದ್ದಾರೆ. ಸೌಜನ್ಯಕ್ಕೆ ಅಡ್ವಾಣಿ ಜೊತೆ ...ನಲ್ಲೇ ಅಂಬಿ ನಾಲ್ಕು ಮಾತಾಡಿದರಾದರೂ ... ಬಿಟ್ಟು ಬರುವ ಬಗ್ಗೆ ಯಾವ ಸೂಚನೆಯನ್ನು ...ಲ್ಲ.

...ಸ್ತರಲ್ಲಿ ಹತಾಶೆಗೊಂಡಿದ್ದ ರಾಜ್ಯ ಬಿಜೆಪಿಗಳು ...ಮ ಕೊನೆ ಪ್ರಯತ್ನವೆಂಬಂತೆ ಆಸಕ್ತಿಕರ ಡೀಲ್ ... ಅಂಬಿ ಮುಂದೆ ಇಟ್ಟರು.

...0 ಕೋಟಿ ರೂಪಾಯಿಗಳ ಡೀಲ್ ಅದು!

...ಯು ಬಿಟ್ಟರೆ ದೇಶಪ್ರೇಮ, ಸಮಾಜ ಸೇವೆಯ ...ಡುವ ಈ ಖದೀಮರು ಯಾವ ಕೆಳಮಟ್ಟಕ್ಕೆ ... ನೋಡಿ?

...ಗಳೂರಿನ ಭೂಗಳ್ಳ ಬಿಜೆಪಿ ಶಾಸಕರಿಬ್ಬರು ... 25 ರ ಸಂಜೆ ಯಾವುದೋ ಖಾಸಗಿ ...ಭಕ್ಕೆ ದಿಂದಿದ್ದ ಅಂಬಿಯ ಬೆನ್ನು ಹತ್ತಿ ಹೋಗಿ ...ಗಿ ಕರೆದುಕೊಂಡು ಹೋಗಿದ್ದಾರೆ. ಕರ್ನಾಟಕ ...ಜೆಪಿ ಗೆಲ್ಲುವುದು ಗ್ಯಾರಂಟಿಯಂತಲೂ ಈಗ ...ಮ್ಮ ಪಾರ್ಟಿ ಜೊತೆ ಕೈಗೂಡಿಸಿದರೆ ಮುಂದೆ ಅಧಿಕಾರ ಸ್ಥಾನಮಾನ ನೀಡುವುದಾಗಿಯೂ, ಸುಮ್ಮನೆ ಇಟ್ಟುಕೊಳ್ಳಲೆಂದು 50 ಕೋಟಿ ...ಯಿ ಕೊಡಲು ಪಾರ್ಟಿ ತಯ್ಯಾರಿದೆಯೆಂದೂ ...ೋರಿಸಿದ್ದಾರೆ.

ಅಂಬರೀಷ್ ಒಂಥರಾ ವಿಚಿತ್ರ ಸ್ವಾಭಿಮಾನದ ...ಷ್ಯ. ಬಿಜೆಪಿಗಳು ಲಂಚದ ಆಸೆ ತೋರಿಸದೆ ... ಪಾರ್ಟಿಗೆ ಬನ್ನಿ ಸಾರ್' ಅಂದಿದ್ದರೆ, ಆಗಲ್ಲ ಎಂದು ಕಳಿಸುತ್ತಿದ್ದರೇನೋ. ಆದರೆ ಸಂಧಾನಕ್ಕೆ ...ದ್ದ ಬಿಜೆಪಿ ನಾಯಕರು ಭೂಗಳ್ಳತನ, ದಗಾ, ..., ಲಂಚ ಇದರಲ್ಲೆಲ್ಲಾ ಚಾಂಪಿಯನ್‌ಶಿಪ್ ...ಸುವ ಜನ.

...ವರು ಯಾವುದೇ ಎಗ್ಗಿಲ್ಲದೆ ಅಂಬಿಗೆ 50 ... ಲಂಚದ ಆಸೆ ತೋರಿಸಿದ್ದಾರೆ.

...ಬಿಗೆ ಅದೆಲ್ಲಿತ್ತೋ ಕೋಪ, ಸಿನಿಮಾದಲ್ಲಿ ...ಸ್ ಆಫೀಸರ್ ಪಾತ್ರ ಮಾಡುವಾಗ ಹೇಳುತ್ತಿದ್ದ ...ಗಿಂತಲೂ ಕಟುವಾಗಿ (ಸ್ವಲ್ಪ ಎ ಸರ್ಟಿಫಿಕೆಟ್ ಸೇರಿಸಿಕೊಂಡು) "ನನ್‌ಮಕ್ಳಾ, ಐವತ್ಕೋಟಿ, ...ಐವತ್ಕೋಟಿ. ಈ ಎಂಜಲ್ ಕಾಸ್‌ಗೆ ನಾನ್ ...ಖಾಕಿ ಚಡ್ಡಿ (RSS) ಹಾಕ್ಕೋಬೇಕಾ.... ಳೀ ..." ಎಂದು ಬಾಯಿಗೆ ಬಂದಂತೆ ಬೈಯ್ದು ... ಓಡಿಸಿದ್ದಾರೆ.

...ವತ್ತು ಅಲ್ಲಿದ್ದದ್ದು ಅಂಬಿಯ ಒಂದಿಬ್ಬರು ...ರು ಮತ್ತು ಬಿಜೆಪಿಯ ಇಬ್ಬರು ಡೀಲು ...ರು ಮಾತ್ರ.

...ಜೆಪಿ ಜನಕ್ಕೆ ಇಂಥ ಅನೈತಿಕ ರಾಜಕೀಯ ಯಾಕೆ ...? ಯಾಕೆಂದರೆ ಅಂಬಿ ಬಂದರೆ ದೇವೇಗೌಡರ ...ವಿರುವ ಹಳೇ ಮೈಸೂರು ಪ್ರಾಂತ್ಯದಿಂದ ಒಬ್ಬ ...ಗ ನಾಯಕನನ್ನು ಪರ್ಯಾಯವಾಗಿ ...ಂತಾಗುತ್ತದೆ. ಅಲ್ಲಿಗೆ ಬಿಜೆಪಿ ಲಿಂಗಾಯತ ಮತ್ತು ...ರ ಪಕ್ಷ ಎಂಬ ಅಪವಾದದಿಂದಲೂ ಮುಕ್ತಿ ...ಾಗುತ್ತದೆ ಎಂಬುದು ಅವರ ಲೆಕ್ಕಾಚಾರ. ಅಷ್ಟೇ ಅಂಬರೀಷ್ ಸಿನಿಮಾ ನಟನಾಗಿರುವುದರಿಂದ ... ಸಂದರ್ಭದಲ್ಲಿ ಜನ ಸೇರಿಸಲು ಈತನನ್ನು ... ಬ್ರಾಂಡ್ ಅಂಬಾಸಿಡರ್ ಆಗಿ ಬಳಸಬಹುದು ... ಮಾರುಕಟ್ಟೆ ತಂತ್ರ ಚಡ್ಡಿಗಳದ್ದಾಗಿತ್ತು. ಇದಿಷ್ಟೇ ... ಪರವಾಗಿರಲಿಲ್ಲ, ಅಂಬರೀಷ್ ಚಿತ್ರರಂಗದಲ್ಲಿ ...ತ್ತು ಎಂಬುದೂ ಎಲ್ಲರಿಗೂ ಗೊತ್ತಿರುವ ವಿಷಯ. ... ಅಂಬಿ ಪರವಾಗಿ ವಿಷ್ಣುವರ್ಧನ್, ರವಿಚಂದ್ರನ್, ... ಅದಿಯಾಗಿ ಇಡೀ ಉದ್ಯಮ ಕಳೆದ ಬಾರಿ ...ದಲ್ಲಿ ಪ್ರಚಾರ ಮಾಡಿದ್ದು ಕೂಡಾ ...ವರ ಮನಸ್ಸಿನಲ್ಲಿತ್ತು, ಹೀಗಾಗಿ ಅಂಬಿಯನ್ನು ... ಮುಂತಾಂತರ ಇಡೀ ಕನ್ನಡ ಚಿತ್ರರಂಗವನ್ನೇ ... ಮಾಡುವ ಹುನ್ನಾರವೂ ಇವರದ್ದಾಗಿತ್ತು.

... ಕಾಗದದ ... ... ಚೊಂಬಿ ಸಿ.ಎಂ. ... ಗಳಿಗೆಯಲ್ಲಿ ಚಡ್ಡಿಗಳಿಗೆ ಕೈಕೊಟ್ಟು ... 'ಕೈ' ... ಅದ್ಭುತ ... ಚಡ್ಡಿಗಳ ವಿರುದ್ಧ ಗರ್ಜಿಸಿದರು.

...ದಾನ ಶೆಟ್ಟಿ, ...



ಸಿಂಹನ 'ಬಣ್ಣ' ವಿರಾಮ!

ಸಿಂಹ ಕಾಡಿನದಾದರೇನು ಗಾಂಧಿನಗರದ್ದೇ ಆದರೇನು; ಕಾಲಕ್ಕೆ ತಕ್ಕಂತೆ ನಡೆದರೆ ತಾನೇ ಬೆಲೆ?

ಸತ್ಯ ಕಹಿಯಾದರೂ ಸಾಹಸಸಿಂಹ ವಿಷ್ಣು ಅದನ್ನು ನುಂಗಲೇಬೇಕಿದೆ. ಒಂದೋ ತನ್ನ ಕಾಲ್‌ಶೀಟ್ ರೇಟನ್ನು ಅರ್ಧಕ್ಕಿಳಿಸಬೇಕು ಅಥವಾ ಎಂಥಾ ಪಾತ್ರವಾದರೂ ಬಣ್ಣ ಹಚ್ಚಲು ರೆಡಿಯಾಗಲೇಬೇಕು. ಇದು ನಟ ವಿಷ್ಣು ಎದುರಿನ ಸದ್ಯದ ಸಂಧಿಗ್ಧ.

ದುರಂತವೋ ದೌರ್ಭಾಗ್ಯವೋ ಗೊತ್ತಿಲ್ಲ. ವಿಷ್ಣು ಈಗ ನಿರುದ್ಯೋಗಿ. ಒಂದೇ ಒಂದು ಚಿತ್ರವೂ ಕೈಯಲ್ಲಿಲ್ಲ. ಹೊಸ ನಿರ್ಮಾಪಕರು ಬರುತ್ತಿಲ್ಲ. ನಂಬಿಕೊಂಡಿದ್ದ ವಿಜಯ್‌ಕುಮಾರ್, ಕೊಬ್ರಿ ಮಂಜು, ಸೂರಪ್ಪ ಬಾಬು, ರೆಹಮಾನ್, ತ್ಯಾಗು ಮುಂತಾದ ನಿರ್ಮಾಪಕರ್‍ಯಾರೂ ಸಿಂಹದ ಗುಹೆಯತ್ತ ಸುಳಿಯುತ್ತಿಲ್ಲ. 'ಮಾತಾಡ್ ಮಲ್ಲಿಗೆ' ತೋಪಾದ ಮೇಲೆ 'ಈ ಬಂಧನ'ವೂ ಬಿದ್ದ ಮೇಲೆ ಸಾಹಸಸಿಂಹಕ್ಕೆ ವಿಧಿಯಿಲ್ಲದೇ 'ಬಣ್ಣ' ವಿದಾಯ!

ವಿಷ್ಣು ಥರದ ಹಿರಿನಟರಿಗೆ ಈ ಗತಿ ಬರಬಾರದಿತ್ತು. ಸದ್ಯ ಕನ್ನಡದ ಪಾಲಿಗೆ ವಿಷ್ಣುಗಿಂತ ಮೇರುನಟರಿಲ್ಲ ನಿಜ, ಹಾಗಿದ್ದೂ ಹೊಸ ಚಿತ್ರಗಳಿಲ್ಲದೇ ಖಾಲಿ ಕೂರಬೇಕಾದ ಗತಿ ಬಂದಿದ್ದಾದರೂ ಏಕೆ? ಈ ಪ್ರಶ್ನೆಗೆ ವಿಷ್ಣು ವರ್ತನೆಗಳೇ ಉತ್ತರ ಕೊಡುತ್ತವೆ. ನಟ ಸುದೀಪ್ ಇತ್ತೀಚೆಗಷ್ಟೇ ಹಿಂದಿಯ 'ಸರ್ಕಾರ್' ಚಿತ್ರದ ರೀಮೇಕ್‌ಗೆಂದು ವಿಷ್ಣು ಕಾಲ್‌ಶೀಟ್ ಕೇಳಲು ಹೋದರೆ ಮಧ್ಯೆ ಬಾಯಿಹಾಕಿದ ಪತ್ನಿ ಭಾರತಿ 'ಅಲ್ಲಪ್ಪಾ ನಮ್ಮೆಜಮಾನ್ರು ಈ ವಯಸ್ಸಲ್ಲಿ ಮುದುಕನ ಪಾತ್ರ ಮಾಡೋಕ್ಕಾಗುತ್ತಾ?' ಅಭಿಮಾನಿಗಳಿಗೆ ಬೇಜಾರಾಗೋಲ್ವಾ?' ಎಂದರಂತೆ!



ವಿಷ್ಣುವಿಗೀಗ ಐವತ್ತೆಂಟರ ಇಳಿವಯಸ್ಸು. ಆ ಕಾಲದ ಸಾಹಸಸಿಂಹನಂತೆ ಫೈಟ್ ಮಾಡುವುದೇ ಹಾಸ್ಯಾಸ್ಪದ. ವಿಷ್ಣು ಅಭಿಮಾನಿಗಳಿಗೂ ವಯಸ್ಸಾಗಿದೆ. ಮಕ್ಕಳು ಮೊಮ್ಮಕ್ಕಳಿದ್ದಾರೆ. ಈ ವೃದ್ಧಾಪ್ಯದಲ್ಲೂ ಟೀನೇಜ್ ಹುಡುಗಿಯರ ಜೊತೆ ಡ್ಯುಯೆಟ್ ಕುಣಿದರೆ ಆ ಕಾಲದ ಭಕ್ತರೇ ನಗಾಡುತ್ತಾರೆ. ಅಂಥದ್ದರಲ್ಲಿ ಹಿಂದಿಯಲ್ಲಿ ಬಚ್ಚನ್ ಮಾಡಿದ ಮುದುಕ ಡಾನ್‌ನ ಪಾತ್ರ ಮಾಡಿದರೆ ಅಭಿಮಾನಿಗಳು ತಪ್ಪು ತಿಳಿದುಕೊಳ್ಳುತ್ತಾರೆಂದು ಇವತ್ತಿಗೂ ವಿಷ್ಣು ನಂಬಿಕೊಂಡಿದ್ದಾರೆಂದರೆ ಅದು ಅರಳು ಮರಳಲ್ಲದೇ ಮತ್ತೇನು?

ಕನಿಷ್ಠ ಬಚ್ಚನ್‌ನಿಂದಾದರೂ ವಿಷ್ಣು ಪಾಠ ಕಲಿಯಬೇಕಿತ್ತು. ತನಗೆ ವಯಸ್ಸಾಗಿದ್ದನ್ನು ಒಪ್ಪಿಕೊಂಡು ಅದಕ್ಕೆ ತಕ್ಕಂತೆ ಪಾತ್ರಗಳನ್ನು ಆಯ್ದುಕೊಂಡ ಬಚ್ಚನ್‌ರ ಆಂಖೆನ್, ಖಾಕಿ, ದೀವಾರ್, ಚೀನಿಕಮ್, ಬ್ಲಾಕ್, ಸರ್ಕಾರ್, ಕಾಂಟೆ ಮುಂತಾದ ಚಿತ್ರಗಳೆಲ್ಲ ಒಂದರ ಮೇಲೊಂದಾಗಿ ಹಿಟ್ಟಾದವು. ಆ ಕಾರಣಕ್ಕೇ ಬಚ್ಚನ್ ಇವತ್ತಿಗೂ ಹಿಂದಿಯ ಮೇರು ನಟರಾಗಿ ಚಾಲ್ತಿಯಲ್ಲಿದ್ದಾರೆ. ವರನಟ ರಾಜ್ ಕೂಡ ವಯಸ್ಸಿಗೆ ತಕ್ಕಂತೆ ಬದಲಾದರು. ದೇವತಾ ಮನುಷ್ಯ, ಭಕ್ತ ಪ್ರಹ್ಲಾದದಂಥ ಪಾತ್ರಗಳನ್ನು ಆಯ್ದುಕೊಂಡರು. ಆದರೆ ವಿಷ್ಣು ಮಾತ್ರ 'ಯಜಮಾನ'ದ ಗುಂಗಿನಿಂದ ಹೊರಬರಲೇ ಇಲ್ಲ.



ಈ ಮಧ್ಯೆ 'ಆಪ್ತಮಿತ್ರ' ಹಿಟ್ಟಾಗಿದ್ದು ಬಿಟ್ಟರೆ 'ಕೋಟಿಗೊಬ್ಬ', 'ಕದಂಬ', 'ಸಿಂಹಾದ್ರಿಯ ಸಿಂಹ', 'ವಿಷ್ಣು ಸೇನಾ', 'ಜಮೀನ್ದಾರ', 'ಪರ್ವ', 'ಏಕದಂತ', 'ಸಿರಿವಂತ', 'ಹಾಲುಂಡ ತವರು', 'ರಾಜನರಸಿಂಹ', 'ಹೃದಯವಂತ' ಮುಂತಾದ ಮೀಸೆ ವೇಷದ ಚಿತ್ರಗಳೆಲ್ಲ ಒಂದರ ಮೇಲೊಂದು ತೋಪೆದ್ದವು. ಒಂದೇ ರೀತಿಯ ನಟನೆ, ಒಂದೇ ಥಾಟಿಯ ಪಾತ್ರವನ್ನು ಅದೇ ಹಳೇ ಅಭಿಮಾನಿಗಳು ಎಷ್ಟು ಅಂತ ನೋಡುತ್ತಾರೆ?



ಸಾಲದ್ದಕ್ಕೆ ಸಂಭಾವನೆ ಬೇರೆ ವಿಪರೀತ. ಕತೆ ಅದೆಷ್ಟೇ ಜಾಳಾಗಿದ್ದರೂ ವಿಷ್ಣು ರೇಟು ಮಾತ್ರ 75 ಲಕ್ಷದಿಂದ ಕೆಳಕ್ಕಿಳಿಯಲೇ ಇಲ್ಲ. ಮೊದಲೇ ಮಾರ್ಕೆಟ್ಟಿಲ್ಲ. 75 ಲಕ್ಷ ಕೊಟ್ಟು ವಿಷ್ಣು ಹಾಕಿಕೊಳ್ಳುವ ಬದಲು ಆ ರೇಟಿಗೆ ಕಾಮಿಡಿ ಗಣೇಶ್, ದರ್ಶನ್ ಥರದ ಹೊಸ ಹೀರೋಗಳೇ ಸಿಕ್ಕಿಬಿಡುತ್ತಾರೆ. ಶಿವಣ್ಣ, ಸುದೀಪ್, ವಿಜಯ್, ಪ್ರೇಮ್ ಥರದವರೆಲ್ಲ ನಲವತ್ತೋ ಐವತ್ತೋ ಲಕ್ಷಕ್ಕೆ ಸಿಗುವಾಗ 75 ಲಕ್ಷ ತೆತ್ತು ಮುದಿಸಿಂಹವನ್ನು ಕೊಳ್ಳುವವರ್‍ಯಾರು?

ಇನ್ನು ಹೊಸ ನಿರ್ಮಾಪಕರ ಪಾಲಿಗೆ ವಿಷ್ಣು ನಿಲುಕದ ನಕ್ಷತ್ರ. ಅದೇ ಸೂರಪ್ಪ ಬಾಬು, ಕೊಬ್ರಿ ಮಂಜು, ವಿಜಯ್‌ಕುಮಾರ್, ರೆಹಮಾನ್ ಹೊರತುಪಡಿಸಿ ಯಾರೇ ಹೊಸಬರಿಗೆ ವಿಷ್ಣು ಮನೆಯೊಳಕ್ಕೆ ಪ್ರವೇಶ ನಿಷಿದ್ಧ. ಕನಿಷ್ಠ ಹೊಸ ನಿರ್ದೇಶಕ, ಹೊಸ ಕತೆಗಾರರು ಪ್ರೋತ್ಸಾಹಿಂಸಬೇಕಿತ್ತು. ತಮಿಳು ಮಲೆಯಾಳದ ಹಳಸಲು ಹಿಟ್‌ಗಳೇ ಬೇಕು. ಅದೂ ಅಂಡರ್ ಫಾರ್ಟಿ ವಯಸ್ಸಿನ ಹೀರೋನ ಕತೆಯೇ ಆಗಬೇಕು. ಅದೇ ಹೀರೋಯಿಜಂ. ಅದೇ ಹುಲಿಮೀಸೆ. ಯಥಾವತ್ ಜಮೀನ್ದಾರೀ ಕತೆ. ಒಂದೇ ಶೈಲಿಯ ಡೈಲಾಗ್. ಸಾಮಾನ್ಯ ಪ್ರೇಕ್ಷಕನ ಮಾತಿರಲಿ ಅಭಿಮಾನಿಗಳಾದರೂ ಎಷ್ಟು ಅಂತ ನೋಡುತ್ತಾರೆ?

ಕನಿಷ್ಠ ರಾಜ್‌ಗಿದ್ದ ಸಾಂಸ್ಕೃತಿಕ ಇಮೇಜ್, ನಟನೆಗಷ್ಟೇ ಅಲ್ಲದೆ ಸ್ವಾಭಿಮಾನಕ್ಕಾದರೂ ಬೆಂಬಲಿಸಬೇಕೆಂಬ ಭಕ್ತವೃಂದ ವಿಷ್ಣು ಬೆನ್ನಿಗಿರಲಿಲ್ಲ. ಸುತ್ತ ಇದ್ದ ಭಟ್ಟಂಗಿಗಳ ಹೊರತಾಗಿ ಹೊಸಬರಿಗೂ ವಿಷ್ಣು ಸಿಲುಕಲಿಲ್ಲ. ಬದಲಾದ ಪರಿಸ್ಥಿತಿಗೆ ತಕ್ಕಂತೆ ಪಾತ್ರಗಳ ಆಯ್ಕೆಯಾಗಲಿಲ್ಲ, ಸಂಭಾವನೆಯನ್ನೂ ಕಮ್ಮಿ ಮಾಡಿಕೊಳ್ಳಲಿಲ್ಲ. 'ವಿಷ್ಣು ಸೇನಾ'ದ ಸೋಲಿನಿಂದಾದರೂ ಪಾಠ ಕಲಿಯಲಿಲ್ಲ. ಅಂಥಾ 'ಮಾತಾಡ್ ಮಲ್ಲಿಗೆಯೇ' ತೋಪೆದ್ದ ಮೇಲೆ ಜೊತೆಗಿದ್ದ ಕೊಬ್ರಿ ಮಂಜುವೇ 'ಮುಂಗಾರು ಮಳೆ' ಗಣೇಶ್ ಕ್ಯಾಂಪಿಗೆ ನೆಗೆದದ್ದು ಕಾಯಂ ಭಟ್ಟಂಗಿಗಳಾದ ವಿಜಯ್‌ಕುಮಾರ್, ಸೂರಪ್ಪ ಬಾಬು, ರೆಹಮಾನ್ ಥರದವರೇ ದೂರ ಸರಿದದ್ದು ಇತ್ಯಾದಿ ಯಾವುದರಿಂದಲೂ ವಿಷ್ಣು ಪಾಠ ಕಲಿಯುತ್ತಿಲ್ಲ ಎಂದರೆ ಇನ್ನೇನಾಗುತ್ತೆ?

ಇನ್ನೂ ಕಾಲ ಮಿಂಚಿಲ್ಲ, ದಿನಕ್ಕೊಬ್ಬ ಹೊಸ ಸ್ಟಾರ್ ಹುಟ್ಟಿಕೊಳ್ಳುತ್ತಿರುವ ಈ ಕಾಲದಲ್ಲಿ ವಿಷ್ಣು ವಾಸ್ತವಕ್ಕಿಳಿಯಬೇಕು. ಈಗಲಾದರೂ ಎಚ್ಚೆತ್ತುಕೊಂಡು ತನ್ನ ಸಂಭಾವನೆಯನ್ನು ಅರ್ಧಕ್ಕಿಳಿಸಿಕೊಳ್ಳಲಿ. ಅಮಿತಾಭ್‌ರಂತೆ ವಯಸ್ಸಿಗೆ ತಕ್ಕ ಪಾತ್ರಕ್ಕೆ ಒಪ್ಪಲಿ. ಅರಳುಮರುಳಿಗೆ ಬಿದ್ದು ವಿಷ್ಣು ಕಳೆದು ಹೋಗದಿರಲಿ.

■ ರಾ. ಸೋಮನಾಥ್


ಉಪ್ಪಿಯ ಸುತ್ತ ಶನಿಪ್ರಭಾವ?



ಕೆ.ಬಿ.ಜೆ.ಎನ್.ಎಲ್ ಕರ್ಮಕಾಂಡ

ಗೂಗಲ್ ಬ್ರಿಜ್ ಕಮ್ ಬ್ಯಾರೇಜಿನಲ್ಲಿ ಕೋಟ್ಯಂತರ ಲೂಟಿ

ಕೃಷ್ಣ ಭಾಗ್ಯ ಜಲನಿಗಮ ಉತ್ತರ ಕರ್ನಾಟಕದ ಭಾಗದಲ್ಲಿ ನಿರ್ಮಿಸುತ್ತಿರುವ, ಈಗಾಗಲೇ ನಿರ್ಮಿಸಿರುವ ಕಾಮಗಾರಿಗಳನ್ನು ಹಾಗೂ ಅವುಗಳಲ್ಲಿ ಆದು ಮಾಡಿರುವ ಲಫಡಾಗಳನ್ನು ಪರಿಶೀಲಿಸುತ್ತ ಹೋದರೆ ಬಹು ದೊಡ್ಡ ದೊಡ್ಡ ಕರ್ಮಕಾಂಡಗಳು ನಿಮ್ಮ ಕಣ್ಣೆದುರು ಬಿಚ್ಚಿಕೊಳ್ಳುತ್ತವೆ. ಈ ಕರ್ಮಕಾಂಡಗಳಲ್ಲಿ ಅಧಿಕಾರಿಗಳು ಹೇಗೋ ಹಾಗೆಯೆ ಇಲ್ಲಿನ ಜನಪ್ರತಿನಿಧಿಗಳೂ ಕಂಠಮಟ ಮುಣುಗಿಯೂ, ತಮಗೂ ಇದಕ್ಕೂ ಯಾವುದೇ ಸಂಬಂಧ ಇಲ್ಲದಂತೆ ಇದ್ದುಬಿಡುತ್ತಿದ್ದಾರೆ. ಇದರಿಂದಾಗಿ ದಿನೇದಿನೇ ಈ ಭಾಗದಲ್ಲಿ ಇಂಥ ದರೋಡೆಕೋರರ ಸಂಖ್ಯೆ ಹೆಚ್ಚಾಗುತ್ತಲೆ ನಡೆದಿದೆ. ರಾಜ್ಯದ ಮುಖ್ಯಮಂತ್ರಿ ಮಾತ್ರವಲ್ಲದೆ ನೆರೆಯ ಆಂಧ್ರಪ್ರದೇಶದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯವರೂ ಕೃ.ಭಾ.ಜಲ ನಿಗಮಗಳ ಕೆಲಸಗಳಲ್ಲಿ



ಮಾಜಿ ಮುಖ್ಯಮಂತ್ರಿ
ಕುಮಾರಸ್ವಾಮಿ

ಕೈಯಾಡಿಸುತ್ತಾರೆಂದರೆ ಇದರ ಮಹತ್ವ ಹಾಗೂ ಇವುಗಳಲ್ಲಿ ತಿನ್ನಬಹುದಾದ ಅಮೇಧ್ಯ ಯಾವ ಮಟ್ಟದ್ದು? ಎಂದು ನೀವೇ ಊಹಿಸಿರಿ.

ಎಲ್ಲಿ ನೀರು ಹರಿಯುತ್ತದೋ ಅಲ್ಲಿ ಬಡತನ ಕಾಲು ಕಿತ್ತಿ ಓಡುತ್ತದೆ ಎಂಬ ಮಾತೇನೋ ಇದೆ. ಆದರೆ ಇಲ್ಲಿನ ರೈತರ ಬಡತನದ ಸ್ಥಿತಿಯಲ್ಲಿ ಮಾತ್ರ ಯಾವುದೇ ಏರುಪೇರಾಗಿಲ್ಲ. ಅಂದು ಸಾವಿರಗಟ್ಟಲೆ ಸಾಲದಲ್ಲಿದ್ದ ರೈತ ಇಂದು ಲಕ್ಷಗಳ ಸಾಲದಲ್ಲಿ ಇದ್ದಾನೆ. ಅಂದು ಸಾಲಗಾರರ ಕಾಟಕ್ಕೆ ಹೆದರಿ ರೈತ ಕುತ್ತಿಗೆಗೆ ಉರುಲು ಹಾಕಿಕೊಳ್ಳುತ್ತಿದ್ದರೆ, ಇಂದು ಕ್ರಿಮಿನಾಶಕ ಔಷಧಿ ಸೇವಿಸಿ ತನ್ನ ಬದುಕನ್ನು ಅಂತ್ಯಗೊಳಿಸಿಕೊಳ್ಳುತ್ತಿದ್ದಾನೆ. ಆಶ್ಚರ್ಯವೆಂದರೆ ಇಲ್ಲಿನ ಕಳ್ಳ ಕಂಟ್ರಾಕ್ಟದಾರರು, ಖದೀಮ ಅಧಿಕಾರಿಗಳು ಹಾಗೂ ರಾಜಕಾರಣಿ ಎಂಬ ಪುಢಾರಿಗಳು ಮಾತ್ರ ಕೆ.ಬಿ.ಜೆ.ಎನ್.ಎಲ್‌ನ ಹೆಸರಿನಲ್ಲಿ ಕೋಟ್ಯಂತರ ಲೂಟಿಯ ಜಾತ್ರೆ ನಡೆಸಿದ್ದಾರೆ. ಮಾಡದ ಕಾಮಗಾರಿಗಳನ್ನು ಮಾಡಿದ್ದೇವೆಂದು, ಕಾಮಗಾರಿಗಳ ರಿಪೇರಿಗೆಂದು, ಯಾವ್ಯಾವೋ ಸಬೂಬು ಹೇಳಿ ಮತ್ತೊಂದು ವರದಿ ತಯಾರಿಸಿ, ಬಿಲ್‌ಗಳನ್ನು ಬಾಣದ ರೀತಿಯಲ್ಲಿ ಮಾಡಿ ಮುಂಡಾಮೋಚುವ ಕೆಲಸ ಯಾವ ಎಗ್ಗಿಲ್ಲದೆ ಇಲ್ಲಿ ದಿನನಿತ್ಯ ನಡೆಯುತ್ತಲೆ ಇರುತ್ತವೆ. ಈ ಕೆ.ಬಿ.ಜೆ.ಎನ್.ಎಲ್.ನಲ್ಲಿ ಈಗಾಗಲೇ ಎಂತೆಂಥ ಮೀನುಗಳು, ಮೊಸಳೆಗಳು, ನೀರಿನ ತಿಮಿಂಗಲಗಳು ಇವೆ ಎಂಬುದು ನಿಮಗೆ ಊಹಿಸುವುದಕ್ಕೂ ಕಷ್ಟವಾಗುತ್ತವೆ.


ರಾಯಚೂರು ಜಿಲ್ಲೆಯ ದೇವದುರ್ಗ ಸಮೀಪದ ಗೂಗಲ್‌ನಲ್ಲಿ ನಿರ್ಮಿಸಲಾಗಿರುವ ಬ್ರಿಜ್ ಕಮ್ ಬ್ಯಾರೇಜ್‌ನ್ನು ರಾಯಚೂರು-ಯಾದಗಿರಿ-ಶಹಾಪುರ ಹಾಗೂ ದೇವದುರ್ಗದ ಊರುಗಳಿಗೆ ಸಂಪರ್ಕ ಕಲ್ಪಿಸಲು ರೂಪಿಸಲಾದ ಬ್ರಿಜ್. ಜೊತೆಗೆ ಇಲ್ಲಿನ ಥರ್ಮಲ್ ಘಟಕದ ವಿದ್ಯುತ್ ಉತ್ಪಾದನೆಗೂ ಇದರಿಂದ ಅನುಕೂಲವಾಗುತ್ತದೆ. ಅಲ್ಲದೆ ಸುತ್ತಮುತ್ತಲಿನ ಊರುಗಳಲ್ಲಿರುವ ಬೋರ್‌ವೆಲ್‌ಗಳ ನೀರಿನ ಒರತೆಯನ್ನು ನೀಗಿಸಲು, ಅವುಗಳಲ್ಲಿ ಈಗಾಗಲೆ ಇರುವ ಕ್ಲೋರೈಡ್ ಅಂಶಗಳನ್ನು ಕಡಿಮೆ ಮಾಡುವ, ಏತ ನೀರಾವರಿಗೆ ಉಪಯೋಗವಾಗಲೆಂದು ಈ ಬ್ಯಾರೇಜ್‌ನ್ನು ನಿರ್ಮಿಸಲಾಗಿದೆ. ಮೊದಲು ಆಂಧ್ರ ಮೂಲದ ಎ. ಪ್ರಭಾಕರರೆಡ್ಡಿ ಎಂಬ ಖದೀಮ ಕಂಟ್ರ್ಯಾಕ್ಟರ್ 2002ರ ನವೆಂಬರ್ 15 ರಂದು ಬ್ರಿಜ್ ಕಮ್ ಬ್ಯಾರೇಜಿನ ಕಾಮಗಾರಿ ಶುರುಮಾಡಿದ. ಇದರ ಎಸ್ಟಿಮೇಟ್ ಕಾಸ್ಟ್: 36 ಕೋಟಿ 70 ಲಕ್ಷ. ಟೆಂಡರ್‌ಗೆ ಇಟ್ಟ ಮೊತ್ತ: 35 ಕೋಟಿ 60 ಲಕ್ಷ. ಕಾಮಗಾರಿಗೆ ತಗುಲಬಹುದಾದ ವೆಚ್ಚ: 40 ಕೋಟಿ


ದೇವದುರ್ಗ ಸಮೀಪದ ಗೂಗಲ್ ಬ್ರಿಡ್ಜ್


ಆಂಧ್ರಪ್ರದೇಶದ ಮುಖ್ಯಮಂತ್ರಿ
ರಾಜಶೇಖರರೆಡ್ಡಿ

41 ಲಕ್ಷ. ಕಾಮಗಾರಿ ಪಡೆದದ್ದು: 21 ಕೋಟಿ 21 ಲಕ್ಷ. ಈ ಕೆಲಸವನ್ನು ಕೇವಲ ಒಂದು ವರ್ಷದೊಳಗೆ ಪೂರೈಸಬೇಕು ಎಂದಿತ್ತು. ಇದರಲ್ಲಿ ಸಿವಿಲ್ ಕಾಮಗಾರಿಯ ಬ್ರಿಜ್ ಕಮ್ ಬ್ಯಾರೇಜ್ ಸೇರಿದಂತೆ 2 x 4.50 ಮೀಟರ್ ಸೈಜಿನ ನೀಡಲ್ ಟೈಪ್ ಗೇಟುಗಳೂ ಸೇರಿದ್ದವು. ಮೂಲ ಕರಾರಿನಲ್ಲಿ ಗೇಟುಗಳ ವೆಚ್ಚ 26.60 ಕೋಟಿ ಇತ್ತು.

ಆದರೆ ಕಂತ್ರಾಟುದಾರರಿಗೆ, ರಾಜಕಾರಣಿಗಳಿಗೆ ಹಾಗೂ ತಮ್ಮ ಜೇಬಿಗೆ ಹಣ ಇಳಿಸಿಕೊಳ್ಳಬೇಕೆಂದಿದ್ದ ಕೆ.ಬಿ.ಜೆ.ಎನ್.ಎಲ್. ಅಧಿಕಾರಿಗಳು ಶೇಕಡಾ 70 ರಷ್ಟು ಕಾಮಗಾರಿ ಮುಗಿದಾಗ ಒಮ್ಮಿಂದೊಮ್ಮೆ ಜ್ಞಾನೋದಯವಾದವರಂತೆ ಈ ಬ್ರಿಜ್ ಕಮ್ ಬ್ಯಾರೇಜಿನ ಎಡದಂಡೆಯಲ್ಲಿ 10 ಮೆಗಾವ್ಯಾಟ್ ಸಾಮರ್ಥ್ಯದ ಪವರ್ ಪ್ಲಾಂಟ್‌ನ್ನು ಆಂಧ್ರ ಮೂಲದ ಎಸ್.ಆರ್.ಎಸ್. ಎನರ್ಜಿ ಸಿಸ್ಟಮ್ಸ್ (ಆಂಧ್ರದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯವರ ಮಗನಿಗೆ ಸಂಬಂಧಿಸಿದ್ದು) ಕಂಪನಿಗೆ ವಹಿಸಿಕೊಟ್ಟಿತು. ಜೊತೆಗೆ 120 ಗೇಟುಗಳ ಬದಲಾಗಿ ಮಳೆಗಾಲದಲ್ಲಿ ಲಿಫ್ಟಿಂಗ್ ಅರೆಂಜ್‌ಮೆಂಟ್ ಮ್ಯಾನುವೆಲ್ ಇದ್ದದ್ದರಿಂದ ಮಳೆಗಾಲದ ಸಮಯದಲ್ಲಿ ಗೇಟುಗಳ ಆಪರೇಷನ್‌ಗೆ ತೊಂದರೆಯಾಗುತ್ತದೆಂದು ವರದಿ ತಯಾರಿಸಿ, ಗೇಟ್ ಸೈಜನ್ನು 2 x 4.50 ಮೀಟರ್‌ನಿಂದ 7.60 x 4.50 ಮೀಟರ್‌ಗೆ ಬದಲಾಯಿಸಿದರು. ಜೊತೆಗೆ 210 ಗೇಟುಗಳ ಬದಲಾಗಿ 70 ಗೇಟುಗಳಿಗೆ ಅವುಗಳ ಸಂಖ್ಯೆಯನ್ನು ಇಳಿಸಿದರು. ಹೊಸ ಗೇಟುಗಳಿಗೆ


ಕೆ.ಬಿ.ಜೆ.ಎನ್.ಎಲ್.ನ ಆಡಳಿತಾಧಿಕಾರಿ
ದೇವರಾಜ್

26.60 ಕೋಟಿ ಮಾಡಿ, ಮತ್ತೆ ಹೊಸ ಟೆಂಡರ್‌ನ್ನು 2007ರ ಜೂನ್ 15 ರಂದು ಕರೆಯಲಾಯಿತು. ಇದಕ್ಕೆ ಒಟ್ಟು 7 ಜನ ಗುತ್ತಿಗೆದಾರರು ಅರ್ಜಿಯನ್ನು ಸಲ್ಲಿಸಿದ್ದರು. ಇದರಲ್ಲಿ ಐದು ಜನ ಗುತ್ತಿಗೆದಾರರನ್ನು ಉದ್ದೇಶಪೂರ್ವಕವಾಗಿ ಪ್ರಿ ಕ್ವಾಲಿಫಿಕೇಷನ್ ಹಂತದಲ್ಲಿ ಅಧಿಕಾರಿಗಳು ಮತ್ತು ಗುತ್ತೇದಾರರು ಶಾಮೀಲಾಗಿ (ಕಾನೂನುಬಾಹಿರವಾಗಿ ರಿಂಗ್ ಅಮೌಂಟ್ ಸ್ವೀಕರಿಸಿ) ತಿರಸ್ಕರಿಸಿದರು. ಇದರಿಂದ ಇಬ್ಬರು ಗುತ್ತೇದಾರರು ಮಾತ್ರ ಟೆಕ್ನಿಕಲ್ ಬಿಡ್ಡಗೆ ಅರ್ಹರೆಂದು ಪರಿಗಣಿಸಲ್ಪಟ್ಟರು. ಜಿ.ಶಂಕರ ಗುತ್ತಿಗೆದಾರರು ಬಿಜಾಪುರ ಶೇ.91.88 ಕೋಟಿ ನಮೂದಿಸಿದರೆ ಮೆ.ರಘು ಕನಸ್ಟ್ರಕ್ಷನ್ಸ್ ಬೆಂಗಳೂರು ಶೇಕಡಾ 104.17 ಕ್ಕೆ ಹೆಚ್ಚಿನ ದರವನ್ನು ನಮೂದಿಸಿದರು. ಕೊನೆಗೆ ಕಡಿಮೆ ಮೊತ್ತ ನಮೂದಿಸಿದ (49 ಕೋಟಿ 50 ಲಕ್ಷ) ಜಿ.ಶಂಕರ ಎಂಬುವವರಿಗೆ ಕಾಮಗಾರಿಯ ಗುತ್ತೆ ಸಿಕ್ಕಿತು. ಈ ಕುರಿತು ವಿಭಾಗ ಕಚೇರಿ ಹೊನ್ನಕುಣಿಯಲ್ಲಿ ಅಕ್ಟೋಬರ್ 2007 ರಲ್ಲಿ ಕಾಮಗಾರಿಯ ಒಪ್ಪಂದ ಕೂಡ ನಡೆಯಿತು.

ತಮಾಷೆ ಎಂಥದ್ದೆಂದರೆ ಹೀಗೆ ಒಪ್ಪಂದ ಮಾಡಿಕೊಂಡ ತಿಂಗಳೊಳಗೆ ಅಂದರೆ 14 ನವೆಂಬರ್ 2007 ರಂದು ಹೊಸಪೇಟೆಯ ಮಲ್ಲಿಗೆ ಲಾಡ್ಜನಲ್ಲಿ ತಂಗಿ 5.60 ಕೋಟಿ ಬಿಲ್ಲನ್ನು ತಯಾರಿಸಿ ಉಪವಿಭಾಗ

ನಾಮರ್ಧ ರಾಜಕಾರಣಿಗಳು


ಬಸವರೆಡ್ಡಿ ಇಟಗಿ

ದೇವದುರ್ಗ ತಾಲೂಕಿನ ಮಾಜಿ ಶಾಸಕ ಹನುಮಂತಪ್ಪ ಆಲ್ಕೋಡ ಭ್ರಷ್ಟ ರಾಜಕಾರಣಿ ಎಂದು ಆರೋಪ ಮಾಡುತ್ತ ತಾನು ಮಾತ್ರ ಸಾಚಾ ಎಂದೇ ಬೀಗಿಕೊಂಡಿದ್ದ ಮಾಜಿ ಎಂ.ಎಲ್.ಸಿ. ಬಸವರೆಡ್ಡಿ ಇಟಗಿ ಇಲ್ಲಿನ ಕೆ.ಬಿ.ಜೆ.ಎನ್.ಎಲ್ ಕಚೇರಿ ಹಾಗೂ ಆ ಮೂಲಕ ನಡೆಯಬಹುದಾದ ಎಲ್ಲಾ ಕಾಮಗಾರಿಗಳಲ್ಲಿ ಮೂಗು ತೂರಿಸದೆ ಬಿಡಲಾರ. ಏಕೆಂದರೆ ಅವೆಲ್ಲ ಆತನ ಏರಿಯಾದಲ್ಲಿ ನಡೆಯುತ್ತಿವೆ. ಅಲ್ಲದೆ ಕುಮಾರಸ್ವಾಮಿ ಸರಕಾರದಲ್ಲಿ ಸಚಿವನಾಗಿದ್ದ ದರ್ಶನಾಪುರ ಶರಣಬಸಪ್ಪ ಈತನ ಸಂಬಂಧಿ ಬೇರೆ. ಪವರ್‌ನಲ್ಲಿರುವ ಸಚಿವರೊಬ್ಬರ ಬೆಂಬಲ, ಜೊತೆಗೆ ಅವರ ಪಾಲು ಇರುವುದರಿಂದ ಈತನನ್ನು ಕೇಳುವವರ್‍ಯಾರು ಇಲ್ಲಿಲ್ಲ ಎಂಬ ಸ್ಥಿತಿ ನಿರ್ಮಿಸಿಕೊಂಡಿದೆ.


ಎ.ಪ್ರಭಾಕರರೆಡ್ಡಿ ಎಂಬ ಖದೀಮ ಕಂಟ್ರ್ಯಾಕ್ಟರನಿಗೆ ಹೆದರಿಸಿ ಗೂಗಲ್ ಕಾಮಗಾರಿಗೆ ತಂದಿದ್ದ ಬಹುತೇಕ ಮೆಟರಿಯಲ್‌ನ್ನು ಕೊಪ್ಪಳದಿಂದ ಹೇರೂರುವರೆಗಿನ ಎರಡು ಬ್ರಿಡ್ಜ್‌ಗಳ ಕೆಲಸಕ್ಕೆ ಬಳಸಿಕೊಂಡದ್ದು ಎಲ್ಲರೂ ಗಮನಿಸಿದ್ದಾಗಿದೆ.


ದರ್ಶನಾಪುರ

ಅಲ್ಲದೆ ಈ ಕಾಮಗಾರಿಗಳು 50 ಲಕ್ಷಕ್ಕೆ ಆಗುವಂಥವು. ಆದರೆ ಬಸವರೆಡ್ಡಿ ತನ್ನ ಗುಡಾಣ ತುಂಬಿಕೊಳ್ಳಲು ತಲಾ 2 ಕೋಟಿಗೆ ಒಂದೊಂದು ಬ್ರಿಡ್ಜ್ ಮಾಡಿ ವಿಕ್ರಮ ಸಾಧಿಸಿದ್ದಾನೆ. ಇದೆಲ್ಲ ಎಲ್ಲರಿಗೂ ಗೊತ್ತಿರುವ ಬಹಿರಂಗ ಸತ್ಯವಾಗಿದೆ. ಆದರೆ ಈ ಬಗ್ಗೆ ಇಲ್ಲಿನ ಸಂಸದ ವೆಂಕಟೇಶ್ ನಾಯಕ ಮಾತ್ರ ತುಟಿಪಿಟಿಕ್ ಅನ್ನದೆ ತೆಪ್ಪಗೆ ಕುಳಿತುಕೊಂಡಿದ್ದಾರೆ. ಇದಕ್ಕೆಲ್ಲ ಮುಖ್ಯ ಕಾರಣವೆಂದರೆ ನೀನು ಮಾಡಿದ್ದು ನಾನು ಕೇಳುವುದಿಲ್ಲ, ನಾನು ಮಾಡಿದ್ದು ನೀ ಕೇಳಬಾರದು ಎಂಬ ಅಲಿಖಿತ ಒಪ್ಪಂದವೇ ಆಗಿದೆ ಎಂಬುದು ಸ್ಪಷ್ಟ.


ವೆಂಕಟೇಶ್ ನಾಯಕ್

ಇಂಥ ನಾಮರ್ಧ ರಾಜಕಾರಣಿಗಳು ವಾಸವಾಗಿರುವ ದೇವದುರ್ಗ ತಾಲೂಕನ್ನು ಯಾರಾದರೂ ಕಾಪಾಡಲು ಸಾಧ್ಯವೆ?



ಹನೂರು

ಹನೂರು ಕ್ಷೇತ್ರದ ಮಾಜಿ ನಾಗಪ್ಪನವರನ್ನು ವೀರಪ್ಪನ್ ಮಾಡಿ ಹತ್ಯೆಗೈದಮ್ಮ ಆಗಿ ಬಿದ್ದಿದ್ದ ಅವರ ಇಡೀ ಕ್ಷೇತ್ರದ ಜನ ಗಳೆಗಳ ಅಂತ ಕಣ್ಣೀರು ಈ ಅನುಕಂಪದ ಮೇ ನಂತರ ಗೆ ನಿಂತ ನಾಗಪ್ಪನವರ ರಿಮಳಾ ನಾಗಪ್ಪ ಗೆದ್ದು ಈಗ ಇತಿಹಾಸ. ಆದರೆ ನಾಗಪ್ಪ ಹೀಗೆ ವಾಗಿ ಸಿಕ್ಕ ಅವಕಾಶವನ್ನು ಅಭಿವೃದ್ಧಿಗೆ ಬಳಸಿಕೊಳ್ಳದೇ ಒಂದು ಕಡೆಯಿಂದ ಬಳಸಿಕೊಂಡು ಜನರ ವನ್ನು ಕಟ್ಟಿಕೊಂಡಿರು ವರ್ತಮಾನ. ಅಂತೆಯೇ, ವ ಚುನಾವಣೆಯಲ್ಲಿ ಆಕೆ ಮನೆ ದಾರಿ ಲಿರುವುದು ಭವಿಷ್ಯ.

ಸ್ತವದಲ್ಲಿ ಹನೂರು ಚುನಾವಣೆ ಗಲೂ ನ್ನಯಿಂದ ತ್ತದೆ. ಇದಕ್ಕೆ ಈ ರೀತಿಯ ಖದರನ್ನು ತಂದು ದಿ. ರಾಜೂಗೌಡ ಮತ್ತು ದಿ. ನಾಗಪ್ಪ, ನ್ನೂ ಚುನಾವಣೆ ಎದುರಿಸುವುದಕ್ಕೆ ಎಷ್ಟೊಂದು ಟಿ ನಡೆಸುತ್ತಿದ್ದರೋ ಗೆದ್ದು ಬಂದ ಮೇಲೆ ಆ ಜನಪ್ರಿಯತೆಯನ್ನು ಉಳಿಸಿಕೊಳ್ಳುವುದಕ್ಕೂ ಸ್ಪೈಪೋಟಿ ನಡೆಸುತ್ತಿದ್ದರು. ಅದರ ಪರಿಣಾಮ ೀ ಕ್ಷೇತ್ರದಲ್ಲಿ ಒಂದಿಷ್ಟು ಅಭಿವೃದ್ಧಿ ಕೆಲಸಗಳೂ ನಿಂದ ನಡೆಯುತ್ತಿದ್ದವು. ನಾಗಪ್ಪ ತಮ್ಮ ಾವಧಿಯಲ್ಲಿ ಮಾಡಿದ ಅಭಿವೃದ್ಧಿ ಕೆಲಸಗಳೇ ಜೀವಂತವಾಗಿವೆ. ಅವರ ಇಂತಹ ಕೆಲಸಗಳು, ದಾರುಣ ಸಾವು ಅವರ ಮಡದಿಯನ್ನು ಶಾಸಕಿ ಸಿದ್ದವು.

ದರೆ, ಪರಿಮಳಾ ನಾಗಪ್ಪರ ಮೇಲೆ ಹನೂರು ಜನ ಇಟ್ಟಿದ್ದ ವಿಶ್ವಾಸಕ್ಕೆ ಅವರು ಸಂಪೂರ್ಣವಾಗಿ ಬಗೆದು ಬಿಟ್ಟರು. ತನ್ನ ಗಂಡ ಮಾಡಿದ್ದ ಷ್ಟು ಕೆಲಸಗಳಲ್ಲಿ ಕಾಲುಭಾಗವನ್ನೂ ಈಕೆ ವಿಲ್ಲ. ಮಾಡಿದ ಚೂರುಪಾರು ಕೆಲಸಗಳನ್ನು ಕಮೀಷನ್ನು ಕಬಳಿಸುವುದಕ್ಕೆ ಬಳಸಿಕೊಂಡರೇ ದ ಅಭಿವೃದ್ಧಿಗಾಗಿ ಮನಃಪೂರ್ವಕವಾಗಿ ಕೆಲಸ ಲ್ಲ.

ನೂರು ಕ್ಷೇತ್ರದಲ್ಲಿ ಬರುವ ಪ್ರಸಿದ್ಧ ಮಲೆ ಮಹದೇಶ್ವರ ಬೆಟ್ಟದ ಅವಸ್ಥೆಯನ್ನೇ ನೋಡಿ. ಇಲ್ಲಿಗೆ ಪ್ರತಿದಿನ ಬರುವ ಭಕ್ತರ ಸಂಖ್ಯೆಯೇ ಒಂದು ಸಾವಿರ ದಾಟುತ್ತದೆ. ಅವರಿಗೆ ಕನಿಷ್ಠ ಮೂಲ ಸೌಕರ್ಯಗಳನ್ನೂ

ಒದಗಿಸುವ ವ್ಯವಸ್ಥೆಯಿಲ್ಲ, ಸರಿಯಾದ ರಸ್ತೆಯೂ ಇಲ್ಲ, ಮಲೆ ಮಹದೇಶ್ವರನ ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ಇದೊಂದು ರೀತಿಯ ಶಿಕ್ಷೆಯಾಗಿಬಿಟ್ಟಿದೆ. ಆದರೆ ಶಾಸಕಿ ಪರಿಮಳಾ ನಾಗಪ್ಪ ಒಮ್ಮೆಯೂ ಈ ಬಗ್ಗೆ ತಲೆಕೆಡಿಸಿಕೊಂಡಿದ್ದಿಲ್ಲ. ಇನ್ನು ಕ್ಷೇತ್ರದ ಜನರು ಕುಡಿಯುವ ನೀರಿಗಾಗಿ ಪರಿತಪಿಸುವುದನ್ನು ಕಂಡರೆ ಅಭಿವೃದ್ಧಿ ಯಾವ ಮಟ್ಟಗಾಗಿದೆ ಎಂದು ಅರ್ಥವಾಗುತ್ತದೆ.

ಹನೂರಿನಲ್ಲಿರುವ ಸರ್ಕಾರಿ ಆಸ್ಪತ್ರೆಯ ಪರಿಸ್ಥಿತಿಯನ್ನಂತೂ ಕೇಳುವುದೇ ಬೇಡ. ಸುತ್ತಮುತ್ತಲ ಗ್ರಾಮದ ಜನರು, ಕಾಡುಗಳಲ್ಲಿ ಗಿರಿಜನರ ಹಾಡಿಗಳಲ್ಲಿ ವಾಸಿಸುವ ಆದಿವಾಸಿಗಳು ಸಾಯುವುದಕ್ಕಾಗಿ ಈ ಆಸ್ಪತ್ರೆಗೆ ಬರುತ್ತಾರೆ. ಗಿರಿಜನರ ಹಾಡಿಗಳಂತೂ ವಿದ್ಯುತ್ ಸಂಪರ್ಕವನ್ನು ಈವರೆಗೆ ಕಂಡಿದ್ದಿಲ್ಲ. ಇವೆಲ್ಲವೂ ಅವರಿಗೆ ಚುನಾವಣೆಯ ಸಮಯದಲ್ಲಿ ಒಮ್ಮೆ ಗಮನಕ್ಕೆ ಬಂದಿದ್ದವು; ಗೆದ್ದ ಮೇಲೆ ಪಾಪ ಮರೆತುಬಿಟ್ಟಿದ್ದಾರೆ. ಈಗ ಮತ್ತೆ ಚುನಾವಣೆ ಎದುರಾಗುತ್ತಿರುವುದರಿಂದ ಅವೆಲ್ಲವುಗಳನ್ನು ಮತ್ತೆ ಜ್ಞಾಪಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಆದರೆ, ದುರಾದೃಷ್ಟ ಎಂದರೆ ಜನ ಅವರನ್ನು ಮರೆಯಲು ಪ್ರಯತ್ನಿಸುತ್ತಿದ್ದಾರೆ!

ಅಧಿಕಾರವಿರುವಷ್ಟು ದಿನ ತನಗೆ ಬೇಕಾದ ಅಧಿಕಾರಿಗಳನ್ನು ಬೇಕಾದ ಆಯಕಟ್ಟಿನ ಸ್ಥಳಕ್ಕೆ ತಂದು ಕೂರಿಸಿ ಅವರ ಮೂಲಕವೇ ಕಮೀಷನ್ ತಿನ್ನುತ್ತಾ ಕೊಬ್ಬಿರುವುದೇ ಪರಿಮಳಾ ನಾಗಪ್ಪ ಈತನಕ ಮಾಡಿರುವ ಸಾಧನೆಯಾಗಿದೆ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಅವರಿಂದ ಹನೂರಿನ ಗ್ರಾಮವೊಂದರಲ್ಲಿ 'ಗ್ರಾಮ ವಾಸ್ತವ್ಯ'ದ ನಾಟಕ ಮಾಡಿಸಿ, ಒಂದಿಷ್ಟು ಕಾಮಗಾರಿಗಳನ್ನು ಮಂಜೂರು ಮಾಡಿಸಿಕೊಂಡು, ಅವುಗಳ ಮೂಲಕ ಕೋಟ್ಯಂತರ ರೂ. ಕಮಿಷನ್‌ನನ್ನು ಪುಷ್ಕಳವಾಗಿ ಮೇಯ್ದದ್ದು, ಪರಿಣಾಮವಾಗಿ ಕಾಮಗಾರಿ ಕೆಲಸಗಳೆಲ್ಲ ಕಳಪೆಯಾದದ್ದು- ಯಾವುದನ್ನೂ ಜನ ಮರೆತಿಲ್ಲ.

ಹೋಗಲಿ, ಇವರನ್ನು ಗೆಲ್ಲಿಸಲು ಹಗಲಿರುಳೂ ದುಡಿದ ಹಿಂಬಾಲಕ ಬೆಂಬಲಿಗರನ್ನಾದರೂ ಉದ್ಧಾರ ಮಾಡಿದರೆ ಎಂದರೆ ಅದೂ ಇಲ್ಲ. ವೀರಮಾದು, ಪೊನ್ನಾಚಿ ಮಹದೇವಸ್ವಾಮಿ, ವೀರಪ್ಪ ನಾಗೇಂದ್ರರಂತಹ ಹತ್ತಾರು ಜನ ಇವರ ಗೆಲುವಿಗಾಗಿ ದುಡಿದರು; ತಮ್ಮದೇ ಹಣ ಖರ್ಚುಮಾಡಿ ಚುನಾವಣೆಯಲ್ಲಿ ಓಡಾಡಿದರು. ಆದರೆ, ಗೆಲ್ಲುತ್ತಿದ್ದಂತೆ ಇವರನ್ನೆಲ್ಲಾ ಮೂಲೆಗುಂಪು ಮಾಡಿ ಒಂಟಿ ಸಲಗನಂತೆ ನಾಗಪ್ಪ ಮೇಯಲಾರಂಭಿಸಿದ್ದನ್ನು ನೋಡಿ ಇವರೆಲ್ಲಾ ಹೌಹಾರಿದ್ದಂತೂ ಸತ್ಯ. ಉಂಡ ಮನೆಗೆ ದ್ರೋಹ ಬಗೆದಿರುವ ಪರಿಮಳಕ್ಕನಿಗೆ

ಮನೆದಾರಿ ಹಿಡಿಯಲಿರುವ ಪರಿಮಳಾ ನಾಗಪ್ಪ!



ಪಾಠ ಕಲಿಸಲು ಅವರೆಲ್ಲ ಈಗ ಪಂಚೆ ಬಿಗಿಮಾಡಿಕೊಂಡು ನಿಂತಿದ್ದಾರೆ. ಆಕೆಯೊಂದಿಗೆ ಇದ್ದಷ್ಟೂ ದಿನ ತಮಗೆ ಬೆಳೆಯಲು ಅವಕಾಶ ಸಿಗುವುದಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಂಡು ಅವರೆಲ್ಲ ಈಗ ಕಾಂಗ್ರೆಸ್‌ನ ಕದ ತಟ್ಟಿದ್ದಾರೆ.

ಇವರೆಲ್ಲರ ಶಕ್ತಿ-ಯುಕ್ತಿಗಳನ್ನು ಸರಿಯಾಗಿ ಬಳಸಿಕೊಂಡಿದ್ದೇ ಆದರೆ ಕಾಂಗ್ರೆಸ್‌ನಿಂದ ಕಣಕ್ಕಿಳಿಯುತ್ತಿರುವ ದಿ. ರಾಜೂಗೌಡರ ಮಗ ನರೇಂದ್ರ ಈ ಬಾರಿ ಕಣ್ಣುಮುಚ್ಚಿಕೊಂಡೇ ಗೆದ್ದುಬಿಡುತ್ತಾರೆ. ಆದರೆ, ಈ ನರೇಂದ್ರ ಮಹಾ ಸೋಮಾರಿ; ಈ ಬಂಡುಕೋರರನ್ನೆಲ್ಲಾ ಚೆನ್ನಾಗಿ ಬಳಸಿಕೊಂಡು ಕಾಂಗ್ರೆಸ್ಸನ್ನು ಬಲಪಡಿಸುವಷ್ಟು ಚುರುಕುತನ ಅವನಲ್ಲಿಲ್ಲ. ಅಲ್ಲದೇ, ದಿ. ನಾಗಪ್ಪನವರ ಮಾಜಿ ಪಟ್ಟಾ ಶಿಷ್ಯ ಪೊನ್ನಾಚಿ ಮಹದೇವಸ್ವಾಮಿ ಸಿದ್ದರಾಮಯ್ಯರ ಮೂಲಕ ಕಾಂಗ್ರೆಸ್ ಟಿಕೆಟ್ ಪಡೆಯಲು ಹವಣಿಸುತ್ತಿದ್ದಾನೆ. ಹೀಗೆ, ಕಾಂಗ್ರೆಸ್‌ನ ಒಳಜಗಳ ಕೂಡ ಪಕ್ಷವನ್ನು ಶಿಥಿಲಗೊಳಿಸಿಬಿಡುವ ಅಪಾಯವಂತೂ ಇದ್ದೇ ಇದೆ. ಹಾಗೇ ನೋಡಿದರೆ ಪೊನ್ನಾಚಿ ಮಹದೇವಸ್ವಾಮಿಗೆ ಒಂದು ವೇಳೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದ್ದೇ ಆದರೆ ಆತ ಗೆಲ್ಲುವ ಎಲ್ಲಾ ಸಾಧ್ಯತೆಗಳಿವೆ. ಏಕೆಂದರೆ, ಕ್ಷೇತ್ರದಲ್ಲಿ ವರ್ಚಸ್ಸನ್ನು ಕಾಪಾಡಿಕೊಂಡು ಬಂದಿರುವ ಆತ ತನ್ನದೇ ಓಟ್ ಬ್ಯಾಂಕ್‌ನ್ನು ಸೃಷ್ಟಿಸಿಕೊಂಡಿದ್ದಾನೆ; ಪರಿಮಳಾ ನಾಗಪ್ಪ ಬಿಡಿಯಾಗಿ ಅಲ್ಲಿ ಕ್ಷೇತ್ರದಲ್ಲಿರುವುದರಿಂದ ಜೆಡಿಎಸ್‌ನ ಓಟುಗಳು ಬಹುತೇಕ ಈತನಿಗೆ ಬರಲಿವೆ. ಜತೆಗೆ ಕಾಂಗ್ರೆಸ್‌ನ ರಿಸರ್ವ್ ಓಟುಗಳೂ ಸೇರಿದರೆ ಆತನ ಗೆಲುವು ನಿಶ್ಚಿತವಾಗಿಬಿಡುತ್ತದೆ.

ಇನ್ನೊಂದೆಡೆ ಬಿಜೆಪಿಯೂ ಹನೂರನ್ನು ಗೆದ್ದುಕೊಳ್ಳುವುದಕ್ಕೆ ಸೆಣಸುತ್ತಿದೆ. ಲಿಂಗಾಯತರೆ ಪ್ರಬಲವಾಗಿರುವ ಈ ಕ್ಷೇತ್ರದಲ್ಲಿ ಅನಂತೂ ಬಣದ ಬಿ.ಕೆ. ಶಿವಕುಮಾರ್ ಎಂಬ ಲಿಂಗಾಯತನನ್ನು ಕಣಕ್ಕಿಳಿಸಲು ಬಜೆಪಿ ಸಿದ್ಧತೆ ನಡೆಸಿದೆ. ಈತ ಇಲ್ಲಿ ಎಷ್ಟು ತಿಣುಕಾಡಿದರೂ ಪರಿಮಳಾ ನಾಗಪ್ಪರನ್ನು ಸೋಲಿಸಲು ಸಾಧ್ಯವಾಗಬಹುದೇ ವಿನಃ ಆತ ಗೆಲ್ಲುವುದು ಅಸಾಧ್ಯವೇ ಸರಿ.

ಏನೇ ಆದರೂ ಈ ಬಾರಿಯ ಚುನಾವಣೆಯಲ್ಲಿ ಪರಿಮಳಾ ನಾಗಪ್ಪ ಮನೆದಾರಿ ಹಿಡಿಯುವುದು ಹೆಚ್ಚುಕಡಿಮೆ ಸ್ಪಷ್ಟವಾಗಿದೆ. ಸದ್ಯಕ್ಕೆ ಎಂ.ಪಿ. ಪ್ರಕಾಶರ ಬಣದಲ್ಲಿ ಗುರುತಿಸಿಕೊಂಡಿರುವ ಅವರು ಅತಂತ್ರ ಪರಿಸ್ಥಿತಿಯಲ್ಲಿರುವುದು ಮೇಲ್ನೋಟಕ್ಕೇ ಗೊತ್ತಾಗುತ್ತದೆ. ಏಕೆಂದರೆ, ಖುದ್ದು ಅವರ ಲೀಡರ್ ಎಂ.ಪಿ. ಪ್ರಕಾಶರೇ ಜೆಡಿಎಸ್ ತೊರೆದು ತ್ರಿಶಂಕು ಸ್ಥಿತಿಯಲ್ಲಿರುವಾಗ ಇನ್ನು ಸೋಲುವ ಕುದುರೆ ಪರಿಮಳಕ್ಕನನ್ನು ಯಾರು ಮಾತನಾಡಿಸುತ್ತಾರೆ ಹೇಳಿ?

ಸಾರಾಂಶದಲ್ಲಿ ಕ್ಷೇತ್ರದ ಜನರಿಗೆ ಪರಿಮಳಕ್ಕ ಬೇಡ. ಕೋಮುವಾದಿ ಬಜೆಪಿ ಅಧಿಕಾರಕ್ಕೆ ಬರುವುದು ರಾಜ್ಯದ ಸಾಮರಸ್ಯಕ್ಕೆ ಒಳಿತಲ್ಲ. ಹನೂರಿನಲ್ಲಿ ಹವಾ ಇರುವುದು ಕಾಂಗ್ರೆಸ್ ಕಡೆಗೆ. ಇದನ್ನೆಲ್ಲಾ ಲೆಕ್ಕ ಹಾಕಿ, ಒಳಜಗಳಗಳನ್ನು ಚುನಾವಣೆ ಮುಗಿಯುವ ತನಕ ಮುಂದೂಡಿ ಸೂಕ್ತ ವ್ಯೂಹತಂತ್ರವನ್ನು ರೂಪಿಸಿದರೆ ಕಾಂಗ್ರೆಸ್ ಹನೂರನ್ನು ಬುಟ್ಟಿಗೆ ಹಾಕಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಆದರೆ ಅಂತಹ ಚಾಣಾಕ್ಷತನವನ್ನು ಕಾಂಗ್ರೆಸ್ ತೋರಬೇಕಲ್ಲ?

- ಕೊಳ್ಳೆಗಾಲ ಮಾಳಿಗೆ

ಸರಕಾರಕ್ಕೆ ಪಂಗನಾಮ ಹಾಕಿದ ಕೆ.ಬಿ.ಜೆ.ಎನ್.ಎಲ್ ಖದೀಮರು


.ಆರ್.ಸಂ.47 ಕ್ಕೆ ಸಲ್ಲಿಸಿದರು. ಡಿಸೆಂಬರ್ 2007ಕ್ಕೆ ಶಿವಣ್ಣ ಸಹಾಯಕ ಅಭಿಯಂತರ ದಂ.ಕಾ.ಉಪ ವಿಭಾಗ ಸಂಖ್ಯೆ: ತಿರುಮಲ್ ರಾವ್ ಕುಲ್ಕರ್ಣಿ ಯಂತರ ನಾರಾಯಣಪುರ ಎಡೆ ಕಾಲುವೆ ಉಪವಿಭಾಗ 11. ಜಿ.ಎನ್. ಹನುಮಂತರಾಜ ಯಕ ಕಾರ್ಯಪಾಲಕ ಯಂತರು,



ಕಾರ್ಯಪಾಲಕ ಅಭಿಯಂತರ ಹನುಮಂತಪ್ಪ


ನಾ.ಬ.ದಂ.ಕಾ. ಉಪವಿಭಾಗ ಸಂಖ್ಯೆ: 22 ಹಾಗೂ ಜಿ.ಹನುಮಂತರಾಯಪ್ಪ ಕ.ಪಾ.ಅ.ನಾ. ಬ.ದಂ.ಕಾ.ವಿಭಾಗ ಸಂಖ್ಯೆ: 4 ಚಿಕ್ಕ ಹೊನ್ನಕುಣಿ ಇವರು ಮತ್ತೊಂದು ಬಿಲ್ ರೆಡಿ ಮಾಡಲು ಹೈದ್ರಾಬಾದ್‌ಗೆ ಹೋದರು. ಅಲ್ಲಿಯೂ ಖಾಸಗಿ ಲಾಡ್ಜವೊಂದರಲ್ಲಿ ತಂಗಿ ಎಲ್ಲಾ ಡೀಲ್ ಮುಗಿಸಿಕೊಂಡು ಮತ್ತೆ ಎಸ್.ಬಿ.ಆರ್.ಸಂಖ್ಯೆ: 49ರ ಮೂಲಕ ಸಲ್ಲಿಸಿದರು. ಇದರಿಂದ ಒಟ್ಟು 15 ಕೋಟಿ 91 ಲಕ್ಷ ರೂಪಾಯಿಗಳನ್ನು ಹೊಸಪೇಟೆ ಮತ್ತು ಹೈದ್ರಾಬಾದ್ ಲಾಡ್ಜಗಳಲ್ಲಿ ತಂಗುವ ಮೂಲಕ ಗುತ್ತೇದಾರನಿಗೆ ಕೊಟ್ಟಿದ್ದಾರೆ. ಗೇಟುಗಳ ಕಾಮಗಾರಿಯನ್ನು ಆಯಾ ಸ್ಥಳಕ್ಕೆ ಹೋಗಿ ಪರಿಶೀಲಿಸಿ ನೋಡಿ, ವರದಿ ಪಡೆದು ಬಿಲ್ ಪಾವತಿಸಬೇಕಾದ ಖದೀಮ ಅಧಿಕಾರಿಗಳು ತಮ್ಮ ಮನಬಂದಂತೆ ನಡಕೊಂಡಿದ್ದಾರೆ.

ಆಶ್ಚರ್ಯವೆಂಥದೆಂದರೆ ಗೂಗಲ್



ಕಿರಿಯ ಅಭಿಯಂತರ ಚಂದ್ರಶೇಖರ ನಾಯರ

ಬ್ಯಾರೇಜಿನ ಹತ್ತಿರ ಗೇಟ್‌ಗಳನ್ನು ನೋಡಲೆಂದು ಖುದ್ದು ನಾನು ಹೋಗಿದ್ದಾಗ ಅಲ್ಲಿ ಪಾವತಿಸಿದ ಬಿಲ್ಲಿನ ಶೇಕಡಾ 10 ರಷ್ಟು ಸಹ ಗೇಟುಗಳ ಭಾಗಗಳು ಇರಲಿಲ್ಲ. ಕೇವಲ 6 ಕೋಟಿ 20 ಲಕ್ಷಕ್ಕೆ ಮುಗಿಯಬೇಕಾಗಿದ್ದ ಕಾಮಗಾರಿಯನ್ನು 49 ಕೋಟಿ 50 ಲಕ್ಷಕ್ಕೆ ಏರಿಕೆ ಮಾಡಿರುವುದು ಏನನ್ನು ತೋರಿಸುತ್ತದೆ? ಕಂಟ್ರ್ಯಾಕ್ಟರರಿಗೆ ಸಹಕರಿಸುವ ಭ್ರಷ್ಟ ಅಧಿಕಾರಿಗಳು, ಅವರಿಗೆ ಆಗಾಗ ಹೆದರಿಸಿ ತಾವು ಅಮೇಧ್ಯ ತಿನ್ನುವ ರಾಜಕಾರಣಿಗಳು, ಯೋಜನೆ ರೂಪಿಸುವ ಮೊದಲೆ ಪರ್ಸೆಂಟೇಜ್ ಹೊಡಕೊಂಡು ಕುಳಿತು ಕೊಳ್ಳುವ ಸಿ.ಎಂ.ಗಳು, ಮಂತ್ರಿಗಳು ಇರುವಾಗ ಈ ಕಾಮಗಾರಿಗಳ ಅವ್ಯವಹಾರ ಅವ್ಯಾಹತವಾಗಿ ನಡೆಯು ತ್ತಲೆ ಇರುತ್ತವೆ.



ಪ್ರಭಾಕರ ರೆಡ್ಡಿ

ಎ.ಪ್ರಭಾಕರ ರೆಡ್ಡಿ ಎಂಬ ಆಂಧ್ರದ ಖದೀಮ ಕಂಟ್ರ್ಯಾಕ್ಟರನಿಗೆ ಲಾಭಮಾಡಿಕೊಡುವುದು. ಅಂದರೆ ಕಾಮಗಾರಿ ಪೂರ್ಣಗೊಳ್ಳುವ ಮೊದಲೆ (ಗೇಟುಗಳನ್ನು ತಯಾರಿಸಿ ಕೂಡಿಸದೆ ಇದ್ದರೂ) ಅವನಿಗೆ ಇಲ್ಲಿಂದ ಗೇಟ್‌ಪಾಸ್ ನೀಡಿದರು. ಈ ಖದೀಮ ಕಂಟ್ರ್ಯಾಕ್ಟರ ತಾನು ಈ ಕಾಮಗಾರಿಗೆ ತೆಗೆದುಕೊಂಡ ಕಾಲಾವಧಿ ತಾನು ಒಪ್ಪಿಕೊಂಡ ಕಾಲಾವಧಿಗಿಂತಲೂ ಮೂರ್‍ನಾಲ್ಕು ಪಟ್ಟು ಹೆಚ್ಚಾಗಿತ್ತು. ಇದನ್ನು ಸರಿದೂಗಿಸಲು ಮತ್ತೆ ರೇಟ್ ರೀವೈಜ್ ಮಾಡುವ ನೆವದಲ್ಲಿ (210 ಗೇಟುಗಳು ಕೂಡಿಸದೇ ಇದ್ದರೂ) ಹೆಚ್ಚು ಬಿಲ್ ಪಾವತಿಸಲಾಯಿತು. ಕಾನೂನಾತ್ಮಕವಾಗಿ ತಾವು ಒಪ್ಪಿಕೊಂಡ ಕಾಲಾವಧಿಯ ಒಳಗೆ ಕಾಮಗಾರಿಯನ್ನು ಮುಗಿಸಿಕೊಡದ ಕಂಟ್ರ್ಯಾಕ್ಟುದಾರರನ್ನು ಇಲಾಖೆ ಬ್ಲಾಕ್ ಲಿಸ್ಟ್‌ನಲ್ಲಿ ಇಡಬೇಕು. ಜೊತೆಗೆ ಅಂತಹವರ ಗೋಳುಗಳನ್ನು ಕೇಳುತ್ತ ಪರಿಷ್ಕೃತ ದರ ನೀಡಬಾರದು ಎಂದು ಇದ್ದರೂ ಅದನ್ನು ಯಾವ ಗಣನೆಗೆ ತಕ್ಕೊಳ್ಳಲಿಲ್ಲ.

ಜೊತೆಗೆ ಆಂಧ್ರ ಪ್ರದೇಶ ಮುಖ್ಯಮಂತ್ರಿಯ ಸಂಬಂಧಿಗಳ ಹೆಸರಿನಲ್ಲಿರುವ ಎಸ್.ಆರ್.ಎಸ್.ಎನರ್ಜಿ ಸಿಸ್ಟಮ್ ಎಂಬ ಕಂಪನಿ ಇಲ್ಲಿ ಬೆಲೆ ಕಂಡುಕೊಳ್ಳಲು ಆದ್ಯತೆ ಕೊಡುವುದೇ ಆಗಿದೆ. ಗೇಟುಗಳ ಬದಲಾವಣೆಯ ಸಂದರ್ಭದಲ್ಲಿ ತಾಂತ್ರಿಕ ಸಲಹಾ ಸಮಿತಿಯ ಕಾಮಗಾರಿಯ ವ್ಯತ್ಯಾಸ ಮೊತ್ತವನ್ನು ಮೊದಮೊದಲು ಎಸ್.ಆರ್.ಎಸ್. ಎನರ್ಜಿ ಕಂಪನಿಯೇ ಸಂದಾಯ ಮಾಡಬೇಕು ಎಂದೇ ಚರ್ಚೆ ನಡೆದಿತ್ತು. ಆದರೆ ಖದೀಮ ರಾಜಕಾರಣಿಗಳು ಹಾಗೂ ಜಿ.ಹನುಮಂತರಾಯಪ್ಪ ಎಂಬ ಕಾರ್ಯಪಾಲಕ ಅಭಿಯಂತರ ಚಿಕ್ಕಹೊನ್ನಕುಣಿ ಹಾಗೂ ಚಂದ್ರಶೇಖರ ನಾಯರ ಚಿಕ್ಕಹೊನ್ನಕುಣಿ ಎಂಬ ಕೇರಳ ಮೂಲದ ತಲೆಹಿಡುಕ ಅಧಿಕಾರಿ ಗೋಲ್‌ಮಾಲ್ ಮಾಡಿ ಸರಕಾರದ ಬೊಕ್ಕಸಕ್ಕೆ ಟೋಪಿ ಹಾಕಿದ್ದಾರೆ. ಇದರಲ್ಲಿ ಕೆ.ಬಿ.ಜೆ.ಎನ್.ಎಲ್ ಎಂ.ಡಿ. ಮಹೇಶ್ ಅಧಿಕಾರಿ ಹಾಗೂ ಕೆ.ಬಿ.ಜೆ.ಎನ್.ಎಲ್‌ನ ಆಡಳಿತಾಧಿಕಾರಿಯಾಗಿರುವ ದೇವರಾಜಗೂ ಅಮೇಧ್ಯ ತಲುಪಿದೆ. ಹೀಗೆ ಎಲ್ಲಾ ಅಧಿಕಾರಿ ರಾಜಕಾರಣಿಗಳು ತಿಂದುಂಡು ದೇಕರಿಕೆ ಹೊಡೆದ ಮೇಲೆ ಇನ್ನೇನಿದೆ? ಇಡೀ ಸರಕಾರವನ್ನಾದರೂ ಕಂಟ್ರ್ಯಾಕ್ಟರರಿಗೆ ಗುತ್ತಿಗೆಯಾಗಿ ನೀಡುತ್ತಾರೆ.

ರಾಜಕಾರಣಿಗಳು ನಿಸ್ಸಂತುವಾಗಿರುವ ಈ ದಿನಗಳಲ್ಲಾದರೂ ರಾಜ್ಯಪಾಲರು ಕೆ.ಬಿ.ಜೆ.ಎನ್.ಎಲ್‌ನ ಎಂ.ಡಿ.ಮಹೇಶ್, ಆಡಳಿತಾಧಿಕಾರಿ ದೇವರಾಜ, ಜಿ.ಹನುಮಂತಪ್ಪ, ಚಂದ್ರಶೇಖರ ನಾಯಕ ಮುಂತಾದ ಖದೀಮರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಕಾಮಗಾರಿಯೇ ಮಾಡದೆ ಬಿಲ್ ಎತ್ತಿಕೊಂಡು ಹೋದ ಎ.ಪ್ರಭಾಕರರೆಡ್ಡಿ ಎಂಬ [illegible] ಆತನಿಗೆ ಸಹಕರಿಸಿದ ಈ ಎಲ್ಲ ಅಧಿಕಾರಿಗಳ ವಿರುದ್ಧ ರಾಜ್ಯಪಾಲರೆ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲದೆ [illegible]

-[illegible]

(1ನೇ ಪುಟದಿಂದ)

ಅಂದರೆ ಸರ್ಕಾರ ತನ್ನ ಬಜೆಟ್ಟಿನಲ್ಲಿ ಈ ಬಾಬತ್ತಿಗೆ ಶೇ. 7ರಷ್ಟು ಹೆಚ್ಚುವರಿ ಹಣವನ್ನು ಹಂಚಿಕೆ ಮಾಡಿದ್ದರೆ ಮಾತ್ರ ಕಳೆದ ವರ್ಷದಷ್ಟಾದರೂ ಅಕ್ಕಿ ಸಿಗುವುದು ಮುಂದುವರೆಯುತ್ತದೆ ಎಂದರ್ಥ. ಆದರೆ ಈ ವರ್ಷ ಸರ್ಕಾರ ಇದಕ್ಕೆ ಹೆಚ್ಚುವರಿ ಹಂಚಿಕೆಮಾಡಿರುವುದು ಕೇವಲ ಶೇ.3ರಷ್ಟು. ಅಂದರೆ 107 ರೂ. ಬೇಕಿರುವ ಕಡೆ ಸರ್ಕಾರ ಕೊಡುವುದು 103 ರೂ. ಗಳನ್ನು ಮಾತ್ರ. ಅಂದರೆ 103 ರೂ. ಕಳೆದ ವರ್ಷದ 100 ರೂ.ಗಳಿಗಿಂತ 3 ರೂ. ಹೆಚ್ಚಿಗೆಯೇ ಇದ್ದರೂ ವಾಸ್ತವದಲ್ಲಿ ಅದರ ಕೊಳ್ಳುವ ಶಕ್ತಿ ಕಳೆದ ವರ್ಷಕ್ಕಿಂತ ಕಡಿಮೆಯೇ. ಅಂದರೆ ಐದು ಕೆಜಿ ಅಕ್ಕಿಯನ್ನು ಕೊಳ್ಳಲೂ ಸಾಲದಷ್ಟು. ಹೀಗಾಗಿ ಸರ್ಕಾರ ವಾಸ್ತವದಲ್ಲಿ ಆಹಾರ ಸಬ್ಸಿಡಿಯನ್ನು ಕಡಿತಗೊಳಿಸಬೇಕೆಂಬ ನೀತಿಯನ್ನು ಮುಂದುವರೆಸಿದೆಯೇ ವಿನಃ ಆಹಾರ ಸಬ್ಸಿಡಿಯ ಬಾಬತ್ತಿಗೆ ನೈಜ ದರದಲ್ಲಿ ಹಣವನ್ನು ಹೆಚ್ಚಿಸಿರುವುದಿಲ್ಲ. ಇದು ಬಜೆಟ್ಟುಗಳನ್ನು ಅರ್ಥಮಾಡಿಕೊಳ್ಳುವ ಮುಂಚೆ ನೀಗಿಕೊಳ್ಳಬೇಕಿರುವ ಮತ್ತೊಂದು ಮಿಥ್ಯೆ.

ಬಜೆಟ್ಟುಗಳ ಬಗ್ಗೆ ವ್ಯವಸ್ಥೆಯು ಸೃಷ್ಟಿಸುವ ಮತ್ತೊಂದು ಮಿಥ್ಯೆ ಎಂದರೆ ಯಾವ ಕ್ಷೇತ್ರಕ್ಕೆ ಹೆಚ್ಚು ಹಣ ನೀಡಲಾಗುತ್ತದೆಯೋ ಅದು ಆ ವರ್ಗದವರ ಪರವಾದ ಬಜೆಟ್ ಎಂಬುದು. ಅಂದರೆ ಈ ಸಾಲಿನಲ್ಲಿ ರೈತರ ಸಾಲ ಮನ್ನಾವು ಸೇರಿಕೊಂಡಂತೆ ಗ್ರಾಮೀಣ ಕ್ಷೇತ್ರಕ್ಕೆ ಒಂದು ಲಕ್ಷ ಕೋಟಿ ರೂ. ಮಂಜೂರಾಗಿದೆಯೆಂದರೆ ಅದು ರೈತ ಪರ ಬಜೆಟ್. ಶಿಕ್ಷಣಕ್ಕೆ ಈ ಬಾರಿ ಕಳೆದ ಸಾಲಿಗಿಂತ ಶೇ.15ರಷ್ಟು ಹೆಚ್ಚು ಏರಿಕೆ (ಹಿಂದೆ ವಿಶ್ಲೇಷಿಸಿದಂತೆ ಶೇ.7ರ ಹಣದುಬ್ಬರದ ಕಾರಣದಿಂದ ಅದು ವಾಸ್ತವವಾಗಿ ಶೇ.8ರಷ್ಟು ಹೆಚ್ಚುವರಿಯೇ ಹೊರತು ಶೇ.15ರಷ್ಟಲ್ಲ) ಯಾದರೆ ಅದು ವಿದ್ಯಾರ್ಥಿ ಪರ ಬಜೆಟ್ ಇತ್ಯಾದಿ. ಆದರೆ ಈ ದೇಶ ವರ್ಗ, ಲಿಂಗ, ಜಾತಿ, ಪ್ರದೇಶ, ಧರ್ಮಾಧಾರದಲ್ಲಿ ಶೋಷಣೆಗೊಳಪಡುತ್ತಿರುವ ಸಮುದಾಯಗಳಿರುವ ದೇಶ. ಹೀಗಾಗಿ ಯಾವುದೇ ಬಜೆಟ್ ಅಥವಾ ಆರ್ಥಿಕ ನೀತಿಯ ವಿಶ್ಲೇಷಣೆ ಮಾಡುವಾಗ ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಹಣ ಹೂಡಿಕೆಯಾಗಿದೆ ಎಂಬ ವಿಶ್ಲೇಷಣೆಯಿಂದ ಬಡ ಮತ್ತು ಶೋಷಿತ ಜನತೆಗೆ ಅನುಕೂಲವಾಗಿದೆ ಎಂಬ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ಉದಾಹರಣೆಗೆ ಶಿಕ್ಷಣಕ್ಕೆ ಈ ಬಾರಿ ಕಳೆದ ವರ್ಷಕ್ಕಿಂತಲೂ ನೈಜ ದರದಲ್ಲೂ ಹೆಚ್ಚಿನ ಹಣ ಹಂಚಿಕೆಯಾಗಿದೆ. ಆದರೆ ಇದರಲ್ಲಿ ಶ್ರೀಮಂತ ವರ್ಗಗಳಿಗೆ ಮಾತ್ರ ಲಭ್ಯವಿರುವ ಉನ್ನತ ಶಿಕ್ಷಣದ ಆಧುನೀಕರಣಕ್ಕೆ ಎಷ್ಟು ಪಾಲು ಮತ್ತು ಬಡ ಮತ್ತು ಹಿಂದುಳಿದ ಸಾಮಾಜಿಕ ವರ್ಗಗಳ ಪಾಲೆಷ್ಟೆಂಬುದನ್ನು ವಿಶ್ಲೇಷಿಸದೆ ಅದರ ಗೂಡಾರ್ಥ ತಿಳಿಯುವುದಿಲ್ಲ.

ಈ ಸಾಲಿನಲ್ಲಿ ಅಂಗನವಾಡಿ, ಮಕ್ಕಳ ಮಧ್ಯಾಹ್ನದ ಊಟ ಇನ್ನಿತರ ಬಾಬತ್ತುಗಳಿಗೆ ವಾಸ್ತವ ದರದಲ್ಲಿ ಹಣ ಹಂಚಿಕೆಯಾಗಿದೆ. ಆದರೆ ಅಷ್ಟೇ ಪ್ರಮಾಣದ ಹಣ ಮೇಲ್ವರ್ಗಗಳಿಗೆ ಮಾತ್ರ ಲಭ್ಯವಿರುವ ಉನ್ನತ ಶಿಕ್ಷಣದ ಆಧುನೀಕರಣಕ್ಕೂ, ಹಲವಾರು ಹೊಸ ಸೆಂಟರ್ ಆಫ್ ಎಕ್ಸಲೆನ್ಸ್‌ಗಳನ್ನು ಪ್ರಾರಂಭಿಸುವುದಕ್ಕೂ (ನಮ್ಮ ಮೈಸೂರು ವಿಶ್ವ ವಿದ್ಯಾಲಯಕ್ಕೆ 100 ಕೋಟಿ ರೂ. ದೊರೆತಿರುವುದೂ ಸಹ ಅದನ್ನು ಸಾಮಾನ್ಯರಿಗೆಟುಕದ ಸೆಂಟರ್ ಆಫ್ ಎಕ್ಸಲೆನ್ಸ್ ಮಾಡುವುದಕ್ಕೆ!) ಮತ್ತು ಪ್ರಾಥಮಿಕ ಶಿಕ್ಷಣದಲ್ಲೂ ನವೋದಯ ಶಾಲೆಯಂತ ಪ್ರಾಥಮಿಕ ಹಂತದಲ್ಲೇ ನೀಡಲಾಗುವ ಎಲೈಟ್ ಶಿಕ್ಷಣಕ್ಕೂ ಹಂಚಲಾಗಿದೆ. ಇದು ಯುಪಿಎ ಸರ್ಕಾರ ಐಎಂಎಫ್‌ನ ಶರತ್ತುಗಳನ್ನು ಪಾಲಿಸುವ ಭಾಗವಾಗಿ ತರುತ್ತಿರುವ ಸಾಂಸ್ಥಿಕ ಶಿಕ್ಷಣವನ್ನು ಕುಲೀನೀಕರಣದ, ಸಾಮಾನ್ಯ ಶಿಕ್ಷಣದ ಅನೌಪಚಾರೀಕರಣದ ಭಾಗವಾಗಿದೆಯೇ ವಿನಃ ಈ ಬಜೆಟ್ಟು ಇದ್ದಕ್ಕಿದ್ದಂತೆ ಯಾವುದೇ ಬಡ ವಿದ್ಯಾರ್ಥಿಪರ ಯೋಜನೆಯನ್ನು ಜಾರಿಗೆ ತರುತ್ತಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಐಎಂಎಫ್ ಶರತ್ತಿನಂತೆ ಇನ್ನು ಮುಂದೆ ಎಲ್ಲ ಸರ್ಕಾರಿ ಸೇವೆ ಮತ್ತು ಅನುದಾನಗಳಿಗೆ ಕಾರ್ಯಕ್ಷಮತೆ (performance) ಯನ್ನು ಆಧಾರ ಮಾಡಿಕೊಳ್ಳಬೇಕೆಂಬ ನಿಯಮವನ್ನು ಇಲ್ಲಿಯೂ ಅನ್ವಯಗೊಳಿಸಲಾಗುತ್ತಿದೆ. ಆದ್ದರಿಂದಲೇ ಇನ್ನು ಮುಂದೆ ಸರ್ಕಾರ ವಿದ್ಯಾರ್ಥಿಗಳಿಗೆ ನೀಡುವ ಎಲ್ಲಾ ವಿದ್ಯಾರ್ಥಿ ವೇತನ ಅಥವಾ ಶಿಕ್ಷಣ ಅನುದಾನಗಳಿಗೆ ಶೇ.60ರಷ್ಟು ಅಂಕಗಳನ್ನು ಪಡೆದಿರುವುದನ್ನು ಕಡ್ಡಾಯ ಮಾಡುತ್ತಿದೆ. ಇದು ಅರ್ಹರಾಗಿದ್ದರೂ ವಂಚಿತರಾಗಿರುವ ವಿದ್ಯಾರ್ಥಿಗಳನ್ನು ಔಪಚಾರಿಕ ಶಿಕ್ಷಣದಿಂದ ಹೊರಗಿಡುವ ಹುನ್ನಾರದ ಭಾಗ. ಬಜೆಟ್ ಅದನ್ನು ಚಾಚೂತಪ್ಪದೆ ಅನುಷ್ಠಾನ ಗೊಳಿಸುತ್ತಿದೆ ಅಷ್ಟೆ.


ನಾಲ್ಕನೆಯದಾಗಿ ಈ ಬಜೆಟ್ಟಿನ ಬಗ್ಗೆ ಎಲ್ಲರೂ ಮೆಚ್ಚಿಕೊಳ್ಳುತ್ತಿರುವ ಮತ್ತು ವಿರೋಧ ಪಕ್ಷಗಳು ಹೊಟ್ಟೆ ಉರಿಸಿಕೊಳ್ಳುತ್ತಿರುವ ಮತ್ತೊಂದು ಅಂಶವೇನೆಂದರೆ ದೇಶದ ಇತಿಹಾಸದಲ್ಲೇ ಪ್ರಥಮ ಬಾರಿಗೆ 60,000 ಕೋಟಿ ರೂಪಾಯಿಗಳಷ್ಟು ರೈತರ ಸಾಲವನ್ನು ಮನ್ನಾ ಮಾಡಿರುವುದು. ಈ 60,000 ಕೋಟಿ ಹಣ ಹೂಡಿಕೆಗೆ ಎಷ್ಟು ಓಟುಗಳು ಕಾಂಗ್ರೆಸ್ಸಿಗೆ ಬೀಳುತ್ತವೆ ಎಂಬುದನ್ನು ಕಾದು ನೋಡಬೇಕಾದರೂ ಚುನಾವಣೆ ದೃಷ್ಟಿಯನ್ನಿಟ್ಟು ಕೊಂಡು ಈ ಘೋಷಣೆ ಮಾಡಿರುವುದರಲ್ಲಿ ಸಂಶಯವಿಲ್ಲ. ಹಾಗಿದ್ದಲ್ಲಿ ಈ ನೀತಿಯೂ ಸಹ ಸರ್ಕಾರದ ಈವರೆಗಿನ ಕೃಷಿ ನೀತಿಯಾದ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಕೃಷಿಯಿಂದ ಹೊರತರುವ ನೀತಿಗೆ ವ್ಯತಿರಿಕ್ತವಾಗಿದೆಯೇ?

ಕಳೆದ ಹತ್ತು ವರ್ಷಗಳಲ್ಲಿ 1,50,000 ರೈತರು ಭಾರತದಲ್ಲಿ - ಅದರಲ್ಲೂ ಕರ್ನಾಟಕ, ಕೇರಳ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿ - ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರಲ್ಲಿ ಕನಿಷ್ಠ ಶೇ.80ರಷ್ಟು ರೈತರು ಕಬ್ಬು ಹತ್ತಿ ರಬ್ಬರ್, ತೆಂಗು, ಇನ್ನಿತ್ಯಾದಿ ವಾಣಿಜ್ಯ ಕೃಷಿಯಲ್ಲಿ ತೊಡಗಿಕೊಂಡಿರುವ ಸಣ್ಣ ಮತ್ತು ಅತಿ ಸಣ್ಣ ರೈತರೇ ಆಗಿದ್ದಾರೆ. ಕೃಷಿಯ ಮೇಲಿನ ಹೂಡಿಕಾ ವೆಚ್ಚ ಅಂದರೆ ನೀರು, ವಿದ್ಯುತ್, ಗೊಬ್ಬರ, ಬೀಜಗಳ ಬೆಲೆ ಜಾಸ್ತಿ ಆಗುತ್ತಿರುವುದು, ಸರ್ಕಾರ ನೀರಾವರಿ ಇನ್ನಿತ್ಯಾದಿಗಳ ಮೇಲೆ ಹೂಡಿಕೆ ಮಾಡದೆ ಉತ್ಪಾದಕತೆ ಕುಂಟುತ್ತಿರುವುದು, ಬ್ಯಾಂಕ್ ಮತ್ತಿತರ ಸಾಂಸ್ಥಿಕ ಸಾಲಗಳು ಕಡಿಮೆ ದರದಲಿ ಸಣ್ಣ ರೈತರಿಗೆ ದೊರೆಯದಿರುವುದು ಮತ್ತು ಮುಕ್ತ ಆಮದು ನೀತಿಯಿಂದಾಗಿ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದಿರುವುದು ಈ ಎಲ್ಲಾ ಕಾರಣಗಳಿಂದ ರೈತನ ಬದುಕು ದಿಕ್ಕೆಟ್ಟಿದೆ. ಹೂಡಿಕಾ ವೆಚ್ಚಕ್ಕೆ ಬೇಕಾಗುವ ಬಂಡವಾಳವಿಲ್ಲದೆ ಅತ್ಯಧಿಕ ಬಡ್ಡಿ ದರದಲ್ಲಿ ರೈತ ಸಾಲ ಮಾಡುತ್ತಾ, ಆದರೆ ಅಂತಿಮವಾಗಿ ಅದಕ್ಕೆ ಸರಿಯಾದ ಬೆಲೆ ಸಿಗದೆ ಸಾಲದ ಬಲೆಯಿಂದ ಹೊರ ಬರಲಾಗದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಹೀಗೆ ರೈತರ ಆತ್ಮಹತ್ಯೆಗೆ ಸಾಲ ತತ್‌ಕ್ಷಣದ ಕಾರಣವಾಗಿದ್ದರೂ ಅದರ ಹಿಂದಿನ ಮೂಲ ಕಾರಣಗಳು ಮೇಲೆ ವಿವರಿಸಿದಂತೆ ಆಳವಾಗಿವೆ ಮತ್ತು ಅದರ ಬೇರುಗಳು ಆರ್ಥಿಕ ಉದಾರೀಕರಣದ ನೀತಿಯಡಿ ಭಾರತವನ್ನು ಮತ್ತು ಭಾರತದ ಕೃಷಿಯನ್ನು ಶ್ರೀಮಂತ ರಾಷ್ಟ್ರಗಳ ಮಾಹತುವನ್ನಾಗಿ ಮಾಡಿದ್ದರಲ್ಲಿದೆ.

■

ಎಲ್ಲರನ್ನೂ ಸಂತುಷ್ಟಗೊಳಿಸಿರುವ "ಬಜೆಟ್" ಎಂಬ ಬಣ್ಣನೆಯೇ ಈ ಬಜೆಟ್‌ನ ಪ್ರಾಮಾಣಿಕತೆಯ ಬಗ್ಗೆ ಸಾಕಷ್ಟು ಪ್ರಶ್ನೆಗಳನ್ನು ಮೂಡಿಸಬೇಕು. ಈ ಪ್ರಶ್ನೆ ಒಂದು ಬಜೆಟ್ಟಿನ ಪ್ರಶ್ನೆಯಲ್ಲ. ಬದಲಿಗೆ ಸರ್ಕಾರದ ಆರ್ಥಿಕ ನೀತಿಗಳ ಪ್ರಶ್ನೆಯೇ ಆಗಿದೆ. ಹೀಗಾಗಿ ಬಜೆಟ್ಟು ಜನಪರವೋ ಅಲ್ಲವೋ ಎಂಬ ಬಗ್ಗೆ ಚರ್ಚಿಸುವ ಮೊದಲು ಎಲ್ಲಾ ಬಜೆಟ್ಟಿನ ಬಗ್ಗೆಯೂ ಮಾಧ್ಯಮಗಳು ಮತ್ತು ಸರ್ಕಾರಗಳು ಹುಟ್ಟಿಹಾಕಿರುವ ಮತ್ತು ಜನಪ್ರಿಯವಾಗಿರುವ ಕೆಲವು ಮಿಥ್ಯೆಗಳನ್ನು ಒಡೆದುನೋಡುವ ಅಗತ್ಯವಿದೆ.

■



'ಮಾಂತ್ರಿ'ಕ ಬಜೆಟ್ಟೋ 'ಭ್ರಾಂತಿ'ಕ ಬಜೆಟ್ಟೋ?

ಆದೇನೇ ಇದ್ದರೂ ರೈತರನ್ನು ಆತ್ಮಹತ್ಯೆಯಂಥ ದುರಂತದಿಂದ ಬಚಾವು ಮಾಡಲು ಕೆಲವು ತುರ್ತು ಕ್ರಮಗಳ ಅಗತ್ಯವಿದ್ದೇ ಇತ್ತು, ಆದರೆ ಈ 60,000 ಕೋಟಿ ಸಾಲ ಮನ್ನಾವು ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಬಚಾವು ಮಾಡುತ್ತದೆಯೇ ಎಂಬುದನ್ನು ಮೊದಲು ನೋಡೋಣ.

ಶ್ರೀಮಂತ ರೈತ ಅಥವಾ ಸಣ್ಣ ರೈತನೇ ಆದರೂ ವಾಣಿಜ್ಯ ಕೃಷಿಯಲ್ಲಿ ತೊಡಗಿದನೆಂದರೆ ಬೀಜ, ಗೊಬ್ಬರ ಇನ್ನಿತ್ಯಾದಿ ಬಂಡವಾಳ ಹೂಡಿಕೆಗಳಿಗಾಗಿ ಸಾಲ ಮಾಡಲೇ ಬೇಕು. ಆದರೆ ಕಳೆದ ಎರಡು ದಶಕಗಳಲ್ಲಿ ರೈತರಿಗೆ ದೊರಕುತ್ತಿರುವ ಸಾಲದ ಪ್ರಮಾಣದಲ್ಲಿ ಸಾಂಸ್ಥಿಕ ಸಾಲದ ಪ್ರಮಾಣ ಕಡಿಮೆಯಾಗುತ್ತಾ ಬಡ್ಡಿ ವ್ಯಾಪಾರಿಗಳಿಂದ ಪಡೆಯುವ ಅನೌಪಚಾರಿಕ ಸಾಲದ ಪ್ರಮಾಣ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣಗಳನ್ನು ಹುಡುಕಿ ಮತ್ತೆ ಕಡಿಮೆ ದರದಲ್ಲಿ ಸಾಂಸ್ಥಿಕ ಸಾಲ ದೊರೆಯುವಂತೆ ಮಾಡದಿದ್ದರೆ ರೈತರ ಆತ್ಮಹತ್ಯೆಗಳು ನಿಲ್ಲುವುದು ಕಷ್ಟ.

ಅದರಲ್ಲೂ ಬ್ಯಾಂಕುಗಳು ಉದಾರೀಕರಣ ನೀತಿಗಳು ಪ್ರಾರಂಭವಾದ ಮೇಲೆ ಉತ್ತಮ ಆಸ್ತಿ ಪಾಸ್ತಿಯನ್ನು ಹೊಂದಿರುವ ಮೇಲ್ಮಧ್ಯಮ ಮತ್ತು ಶ್ರೀಮಂತ ರೈತರಿಗೆ ಸಾಲ ಕೊಡಲು ಮುಂದುವರೆಸಿದವೇ ವಿನಃ ಅತಿಸಣ್ಣ ರೈತರ ಕಡೆ ಇರಲಿ ಸಣ್ಣರೈತರ ಕಡೆಗೂ ಕಣ್ಣೆತ್ತಿಯೂ ನೋಡಲಿಲ್ಲ.

ಇದರ ಬಗ್ಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ನಬಾರ್ಡ್‌ಗಳು ನಡೆಸಿದ ಜಂಟಿ ಅಧ್ಯಯನವೊಂದು ಈ ಕೆಳಗಿನ ಮಾಹಿತಿಯನ್ನು ಹೊರಹಾಕಿದೆ. ಬ್ಯಾಂಕ್ ರಾಷ್ಟ್ರೀಕರಣವಾದ ನಂತರ ಗ್ರಾಮೀಣ ಪ್ರದೇಶಕ್ಕೆ ನೀಡುತ್ತಿದ್ದ ಸಾಂಸ್ಥಿಕ ಸಾಲ 1971-72ರಲ್ಲಿ 1865 ಕೋಟಿ ರೂ.ಗಳಿದ್ದದ್ದು 2006-07ರ ಸಾಲಿನಲ್ಲಿ 2,03,296 ಕೋಟಿ ರೂ.ಗಳನ್ನು ತಲುಪಿದೆ. ಆದರೆ ಅದೇ ವರದಿ ತುಂಬ ಸ್ಪಷ್ಟ ಮಾತುಗಳಲ್ಲಿ ತಿಳಿಸುವಂತೆ ಸಾಲ ನೀಡಿದ ಪ್ರಮಾಣ ಹೆಚ್ಚಿದ್ದರೂ ಗ್ರಾಮೀಣ ಕ್ಷೇತ್ರದ ಅತಿಸಣ್ಣ ಹಿಡುವಳಿದಾರರಲ್ಲಿ ಶೇ.87.03ರಷ್ಟು ರೈತರಿಗೆ ಮತ್ತು ಸಣ್ಣ ಹಿಡುವಳಿದಾರರಲ್ಲಿ ಶೇ.69.21ರಷ್ಟು ರೈತರಿಗೆ ಈವರೆಗೆ ಯಾವುದೇ ಸಾಂಸ್ಥಿಕ ಸಾಲಗಳು ದೊರಕಿಲ್ಲ. ಇದಕ್ಕೆ ಕಾರಣಗಳೇನು?

ಈ ಅಂಶವನ್ನು ರೈತರ ಆತ್ಮಹತ್ಯೆಗಳ ಬಗೆ ಅಧ್ಯಯನ ಮಾಡಲು ರಿಸರ್ವ್ ಬ್ಯಾಂಕ್ ನೇಮಕ ಮಾಡಿದ ಪರಿಣಿತರ ಗುಂಪಿನ ವರದಿಯೇ ಸ್ಪಷ್ಟಪಡಿಸುತ್ತದೆ. ಅದನ್ನು ಸರಿ ಮಾಡಲು ಬಜೆಟ್ಟಿನಲ್ಲಿ ಏನಾದರೂ ಮಾರ್ಗೋಪಾಯ ಗಳಿವೆಯೇ?

ರೈತರಿಗೆ ಪ್ರಧಾನವಾಗಿ ಮೂರು ರೂಪದಲ್ಲಿ ಸಾಂಸ್ಥಿಕ ಸಾಲ ಸಿಗುತ್ತಿತ್ತು. ಮೊದಲನೆಯದಾಗಿ ವಾಣಿಜ್ಯ ಬ್ಯಾಂಕುಗಳು ರಾಷ್ಟ್ರೀಕರಣಗೊಂಡ ಮೇಲೆ ತಮ್ಮ ಒಟ್ಟಾರೆ ಸಾಲನೀಡಿಕೆಯ ಶೇ.18ರಷ್ಟನ್ನು ಕೃಷಿ ಕ್ಷೇತ್ರಕ್ಕೆ ನೀಡಲೇ ಬೇಕೆಂಬುದು ಕಡ್ಡಾಯವಾಗಿತ್ತು, ಹಾಗೆಯೇ 1980ರ ದಶಕದಲ್ಲಿ ಪ್ರಾರಂಭವಾದ ಗ್ರಾಮೀಣ ಬ್ಯಾಂಕುಗಳೂ ಸಹ ರೈತರಿಗೆ ಅಗತ್ಯವಾದ ಬಂಡವಾಳ ಸಾಲವನ್ನು ಕೊಡುವುದು ಕಡ್ಡಾಯವಾಗಿತ್ತು. ಅದೇರೀತಿ ರೈತರಿಗೆ ಅದರಲ್ಲೂ ಸಣ್ಣ ಹಿಡುವಳಿದಾರರಿಗೆ ಸಾಲದ ಅಗತ್ಯಗಳನ್ನು ಪೂರೈಸಲೆಂದೇ ಸಹಕಾರಿ ಕ್ಷೇತ್ರದಲ್ಲಿ ಕೋ-ಆಪರೇಟೀವ್ ಬ್ಯಾಂಕುಗಳನ್ನು ಹುಟ್ಟು ಹಾಕಲಾಯಿತು. ಇವುಗಳು ತಮ್ಮ ಉದ್ದೇಶಕ್ಕೆ ಅನುಗುಣವಾಗಿ ಎಷ್ಟು ನಡೆದುಕೊಂಡವು ಎನ್ನುವುದು ಗೊತ್ತಿರುವ ವಿಷಯವೇ ಆದರೂ 1991ರ ನಂತರ ಉದಾರೀಕರಣ, ಜಾಗತೀಕರಣ ನೀತಿಗಳಿಗೆ ಒಳಪಟ್ಟು ಭಾರತವು ಐಎಂಎಫ್ ಮತ್ತು ವಿಶ್ವ ವಾಣಿಜ್ಯ ಸಂಸ್ಥೆಯ ಶರತ್ತುಗಳಿಗೆ ಅನುಗುಣವಾಗಿ ತನ್ನ ಹಣಕಾಸು ಕ್ಷೇತ್ರವನ್ನು ಮತ್ತು ಕೃಷಿ ಕ್ಷೇತ್ರವನ್ನು ಪುನರ್ ರಚಿಸಲು ಪ್ರಾರಂಭಿಸುತ್ತಿದ್ದಂತೆ, ಗ್ರಾಮೀಣ ಕ್ಷೇತ್ರಗಳಿಗೆ ಅದರಲ್ಲೂ ಸಣ್ಣ ಹಿಡುವಳಿದಾರರಿಗೆ ಸಾಲವನ್ನು ನೀಡುವುದನ್ನು ಅವುಗಳ ಪ್ರಾಧಾನ್ಯತಾ ಪಟ್ಟಿಯಿಂದ ಅನೌಪಚಾರಿಕವಾಗಿ ಮಾತ್ರವಲ್ಲದೆ ನಿಯಮಬದ್ಧವಾಗಿಯೂ ತೆಗೆದುಹಾಕಿದ್ದಾರೆ!

ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ರಾಷ್ಟ್ರೀಕರಣವಾಗು ಮೊದಲು 28,391.73 ಕೋಟಿ ರೂ.ಗಳಷ್ಟು ಸಾಲವ ನೀಡುತ್ತಿದ್ದರೆ 2000ದ ವೇಳೆಗೆ ಕೊಡುತ್ತಿದ್ದ ಸಾಲ ಮೊತ್ತ 4,60,080.68 ಕೋಟಿಗಳಿಗೇರಿದೆ. ಆದ ಒಟ್ಟಾರೆ ಸಾಲದಲ್ಲಿ ಕೃಷಿ ಕ್ಷೇತ್ರಕ್ಕೆ ನೀಡುತ್ತಿದ್ದ ಸಾಲ ಪ್ರಮಾಣ ಶೇ.16.44ರಿಂದ ಶೇ.10.39ಕ್ಕಿಳಿದಿದೆ. 1991 ಆರ್ಥಿಕಾ ಸುಧಾರಣಾ ನಂತರದ ಸಮಯದಲ್ಲಿ ಕೃಷಿಯೇತ ಕ್ಷೇತ್ರಗಳಿಗೆ ನೀಡುತ್ತಿದ್ದ ಸಾಲ ಕೃಷಿ ಕ್ಷೇತ್ರಕ್ಕೆ ನೀಡುತ್ತಿದ್ದ ಸಾಲಕ್ಕಿಂತ ಎಷ್ಟೋ ಪಟ್ಟು ಹೆಚ್ಚಾಗಿದೆ. ಅದೇ ರೀತಿ ಕೃಷಿ ಕ್ಷೇತ್ರದಲ್ಲಿ ನೀಡುತ್ತಿದ್ದ ಸಾಲಗಳಲ್ಲೂ ಉದಾರೀಕರಣದ ಕಾಲಘಟ್ಟದಲ್ಲಿ ಕೆಲವು ನಿರ್ದಿಷ್ಟ ಸ್ವರೂಪದ ಬದಲಾವಣೆಗಳು ಬಂದಿವೆ. ಇದರ ಬಗ್ಗೆ ಅಧ್ಯಯನ ನಡೆಸಿರುವ ಪರಿಣಿತರ ಗುಂಪು ಗ್ರಾಮೀಣ ಕ್ಷೇತ್ರಕ್ಕೆ ಶೆಡ್ಯೂಲ್ಡ್ ಬ್ಯಾಂಕ್ ಕೊಡುತ್ತಿರುವ ಸಾಲಗಳಲ್ಲಿ ಈ ಕೆಲವು ಬದಲಾವಣೆಗಳನ್ನು ಗುರುತಿಸಿದೆ:

ಅ) ಈ ಬ್ಯಾಂಕುಗಳಲ್ಲಿ ಕೃಷಿ ಸಾಲದ ಖಾತೆಗಳು 1992ರಲ್ಲಿ 2.77 ಕೋಟಿಯಷ್ಟಿದ್ದದ್ದು 2004ರಲ್ಲಿ 2.03 ಕೋಟಿಗಿಳಿದಿದೆ.

ಆ) ಕೃಷಿ ಸಾಲದ ಬಳಕೆಯು ಗ್ರಾಮೀಣ ಕ್ಷೇತ್ರದಿಂದ ನಗರಕ್ಕೆ ಸ್ಥಳಾಂತರಗೊಂಡಿದೆ.

ಇ) ಕೃಷಿಯಲ್ಲೂ ಸಹ ನೇರ ಹಣಕಾಸು ನೆರವಿನ ಪ್ರಮಾಣ ಕುಸಿಯುತ್ತಿದೆ.

ಈ) ನೇರ ಹಣಕಾಸು ಸಹಾಯ ನೀಡಿದ ಕಡೆಗಳಲ್ಲೂ ಅದು ಅಧಿಕ ಮೌಲ್ಯದ ಬೆಳೆಗಳ ಕಡೆಗೆ ವರ್ಗಾವಣೆಗೊಂಡಿದೆ.

ಉ) ಸಾಲ ನೀಡಿದ ಕಡೆಗಳಲ್ಲೂ 25,000 ರೂ.ಗಿಂತ ಜಾಸ್ತಿ ಹಣ ಪಡೆಯುವವರ ಕಡೆಗೇ ಹೆಚ್ಚು ಸಾಲಗಳನ್ನು ವರ್ಗಾಯಿಸಲಾಗಿದೆ.

ಇದರಿಂದಾಗಿ ಬ್ಯಾಂಕ್ ಸಾಲದ ಖಾತೆಗಳಲ್ಲಿ ಮತ್ತು ಹಣ ಸಂದಾಯದಲ್ಲಿ 25,000ಕ್ಕಿಂತ ಕಡಿಮೆ ಸಾಲ ಪಡೆಯುವವರ - ಅಂದರೆ ಸಣ್ಣ ಮತ್ತು ಅತಿ ಸಣ್ಣ ರೈತರ - ಪ್ರಮಾಣ ಕಡಿಮೆಯಾಗುತ್ತಿದೆ.

ಈ ವಿಶ್ಲೇಷಣೆಯು ಸ್ಪಷ್ಟಪಡಿಸುವಂತೆ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ಅಧಿಕ ಬಡ್ಡಿ ದರವನ್ನು ಪಡೆದುಕೊಳ್ಳುವ ಬಾಬತ್ತಿಗೇ ಹೆಚ್ಚು ಸಾಲವನ್ನು ನೀಡಿವೆ. ಹೀಗಾಗಿ ಉದಾರೀಕರಣದ ಅವಧಿಯಲ್ಲಿ ಶ್ರೀಮಂತ ರೈತರಿಗೆ ಸಾಂಸ್ಥಿಕ ಸಾಲಗಳ ಲಭ್ಯತೆ ಹೆಚ್ಚಾಗಿದೆಯೇ ವಿನಃ ಸಣ್ಣ ಮತ್ತು ಅತಿಸಣ್ಣ ರೈತರನ್ನು ಸಾಂಸ್ಥಿಕ ಸಾಲದ ಮಾರುಕಟ್ಟೆಯಿಂದ ಹೊರಗಡೆಯೇ ಇಡಲಾಗಿದೆ. 1994ರಲ್ಲಿ ವಿಶ್ವಬ್ಯಾಂಕಿನ ಮುಖ್ಯಸ್ಥರಾಗಿದ್ದ ಸ್ಟಿಗ್ಲಿಟ್ಜ್ ಅವರು ನಡೆಸಿದ ಅಧ್ಯಯನವೂ ಸಹ ಉದಾರಿಕರಣದ ಅವಧಿಯಲ್ಲಿ ಬ್ಯಾಂಕುಗಳು ಅತಿ ಹೆಚ್ಚಿನ ಸಾಮಾಜಿಕ ಲಾಭಗಳನ್ನು ನೀಡಬಹುದಾಗಿದ್ದ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಸಾಲ ಒದಗಿಸುವಲ್ಲಿ ವಿಫಲವಾಗಿವೆ ಎಂದೇ ಹೇಳುತ್ತದೆ.

ಅದೇರೀತಿ ಕೃಷಿಗೆ ಮತ್ತು ಗ್ರಾಮೀಣ ಕ್ಷೇತ್ರಕ್ಕೆ ಹೆಚ್ಚಿನ ಸಾಲ ಬಂಡವಾಳ ಒದಗಿಸುವ ಸಲುವಾಗಿಯೇ ರಚಿಸಲಾದ ಕೋ-ಆಪರೇಟೀವ್ ಬ್ಯಾಂಕುಗಳೂ ಸಹ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಾಲ ಒದಗಿಸುವಲ್ಲಿ ವಿಫಲವಾಗಿವೆ ಮತ್ತು ಸರ್ಕಾರದ ಉದಾರೀಕರಣದ ನೀತಿಯಿಂದಾಗಿ ತಾವೇ ಖುದ್ದು ಸಾಲದ ಬಲೆಯಲ್ಲಿ ಸಿಕ್ಕಿ ಕೊನೆಯುಸಿರೆಳೆಯುತ್ತಿವೆ. ರೈತರಿಗೆ ನೀಡುತ್ತಿದ್ದ ಕಡಿಮೆ ಕಾಲಾವಧಿ ಸಾಲದ ಪ್ರಮಾಣದಲ್ಲಿ ಕೋ-ಆಪರೇಟೀವ್ ಬ್ಯಾಂಕುಗಳ ಪಾಲು 1975-76ರಲ್ಲಿ ಶೇ.74.90 ಇದ್ದದ್ದು 2005-06ರಲ್ಲಿ ಶೇ.33.2ಕ್ಕೆ ಇಳಿದಿದೆ. ಅದೇ ರೀತಿ ದೀರ್ಘಾವಧಿ ಸಾಲಗಳಲ್ಲಿ ಕೋ-ಆಪರೇಟಿವ್ ಬ್ಯಾಂಕುಗಳ ಪಾಲು 1975-76ರಲ್ಲಿ ಶೇ.61.2 ರಷ್ಟಿದ್ದದ್ದು 2005ರ ವೇಳೆಗೆ ಕೇವಲ ಶೇ.6ಕ್ಕೆ ಇಳಿದಿದೆ!

ಹಾಗೆ ನೋಡಿದರೆ ರೈತರು ಮಾಡುವ ಸಾಲಗಳಲ್ಲಿ ಕೋ-ಆಪರೇಟೀವ್ ಸಾಲದ ಪ್ರಮಾಣ ಶೇ.20ಕ್ಕಿಂತ ಜಾಸ್ತಿ ಇಲ್ಲದಿದ್ದರೂ ಇತರ ಬ್ಯಾಂಕುಗಳಲ್ಲಿ ಕೇವಲ 1.6 ಕೋಟಿ ಖಾತೆದಾರರಿದ್ದರೆ ಕೋ-ಆಪರೇಟಿವ್ ಬ್ಯಾಂಕುಗಳಲ್ಲಿ 6 ಕೋಟಿಗೂ ಹೆಚ್ಚು ಖಾತೆದಾರಾರಿದ್ದಾರೆ. ಈ ಬ್ಯಾಂಕುಗಳ ಆರೋಗ್ಯ ರೈತರ ಆರೋಗ್ಯವನ್ನು ಸ್ವಲ್ಪವಾದರೂ ಸುಧಾರಿಸಬಹುದು. ಆದರೆ ಈವರೆಗೆ ಕೇಂದ್ರ ಸರ್ಕಾರ ಈ ಬ್ಯಾಂಕುಗಳ ಆರ್ಥಿಕ ಆರೋಗ್ಯ ಆಯಾ ರಾಜ್ಯ ಸರ್ಕಾರಗಳಿಗೆ ಸಂಬಂಧಪಟ್ಟ ವಿಷಯವೆಂದು ತಳ್ಳಿಹಾಕುತ್ತಾ ಬಂದಿದೆ. ಆದರೂ ಇವುಗಳ ಆರೋಗ್ಯ ಸುಧಾರಣೆಯ ಬಗ್ಗೆ ಕ್ರಮವನ್ನು ಸಲಹೆ ಮಾಡಲು 2001ರಲ್ಲಿ ಕಪೂರ್ ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಯ ವರದಿಯನ್ನು ಆಧರಿಸಿ ಹಣಕಾಸು ಅನುದಾನವನ್ನು ನಿಗದಿಪಡಿಸಲು ವಿ.ಕೆ. ಪಾಟೀಲ್ ಸಮಿತಿಯನ್ನು ರಚಿಸಲಾಗಿತ್ತು. ಆದರೆ ಅವ್ಯಾವುದೂ ಜಾರಿಗೆ ಬರಲಿಲ್ಲ, ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವೈದ್ಯನಾಥನ್ ಸಮಿತಿಯನ್ನು ನೇಮಿಸಿತು. ಅದು ವರದಿ ನೀಡಿ ಒಂದು ವರ್ಷ ಕಳೆಯುತ್ತಾ

...ತ ವರದಿಯ ಮುಖ್ಯ ಸಲಹೆಯೆಂದರೆ ...ಟೀವ್ ಬ್ಯಾಂಕುಗಳು ಎದುರಿಸುತ್ತಿರುವ ...ಭಾರವನ್ನು ಸರ್ಕಾರ ಹೊತ್ತು ಆಧಿಕವಾಗಿ ...ಬಂಡವಾಳವನ್ನು ಒದಗಿಸಬೇಕೆಂಬುದು.

...ಬಗ್ಗೆ ಈವರೆಗೆ ಏನೂ ಮಾತಾಡದೇ ಇದ್ದ ...ಇದು ಚುನಾವಣಾ ವರ್ಷವಾದ್ದರಿಂದ ...ವರದಿಯನ್ನು ಒಪ್ಪಿಕೊಂಡಿದ್ದು ಅವರ ...ಹೊಣೆಗಾರಿಕೆಯನ್ನು ಪೂರೈಸಲು 2,000 ...ಷ್ಟು ಭಾರವನ್ನು ಹೊರಲಿರುವುದಾಗಿ 2008ರ ...ಭಾಷಣದಲ್ಲಿ ಹೇಳಿದೆ. ಇದು ಚುನಾವಣಾ ...ಬದು ವಿಶೇಷವಾಗಿ ಹೇಳಬೇಕಿಲ್ಲವೇಕೆಂದರೆ ...ದ ಹಣಕಾಸು ಹಂಚಿಕೆಯನ್ನೇ ಬಜೆಟ್ಟನಲ್ಲಿ ...ಬಜೆಟ್‌ನಲ್ಲಿ ಹಣಕಾಸು ಬೆಂಬಲವಿಲ್ಲದ ...ಾಗಿಯೇ ಇಂಥಾ ಹಲವಾರು ಭರವಸೆಗಳು ...ವಾಗಿ ನೆನೆಗುದಿಗೆ ಬಿದ್ದಿವೆ.

...ನಾಕ್ಯತತ್ವಗಳ ಬಗ್ಗೆ ಮಾಡಿರುವ ಅಧ್ಯಯನಗಳು ...ತೋರಿಸಿಕೊಡುವುದೇನೆಂದರೆ ಸಣ್ಣ ಹಾಗೂ ...ರೈತರು ಹೆಚ್ಚು ಸಾಲ ಮಾಡುವುದು ಸ್ಥಳೀಯ ...ರಿಗಳಲ್ಲೇ ವಿನಃ ಸಾಂಸ್ಥಿಕ ಮೂಲಗಳಿಂದಲ್ಲ. ...ಸ್ಯಾಂಪಲ್ ಸರ್ವೆ(NSS)ಯ 59ನೇ ಸುತ್ತಿನಲ್ಲಿ ...ಬಂದಿರುವ ಮಾಹಿತಿಯ ಪ್ರಕಾರವೂ ...ಕ ಮೂಲಗಳಲ್ಲಿ ಶೇ.70 ಭಾಗದಷ್ಟು ಸ್ಥಳೀಯ ...ರಿಗಳೇ ಆಗಿದ್ದಾರೆ. ಬಹಳಷ್ಟು ಸಂದರ್ಭಗಳಲ್ಲಿ ...ವ್ಯಾಪಾರಿಗಳು ಹಳ್ಳಿಗಳಲ್ಲಿ ಬಲಾಢ್ಯರಾದ ...ಕರೋ ಅಥವಾ ರಾಜಕೀಯ ನಾಯಕರೋ ...ಸರ್ಕಾರದ ಸಾಂಸ್ಥಿಕ ಮೂಲಗಳ ಸಾಲಗಳಿಂದ ...ಇತರ ಗ್ರಾಮೋಪಯೋಗಿ ಯೋಜನೆಗಳಿಂದ ...ಪ್ರಯೋಜನ ಪಡೆದವರೂ ಅವರೇ ಆಗಿರುತ್ತಾರೆ. ...ಬ್ಯಾಂಕ್ ಖುದ್ದು ಅಧ್ಯಯನ ಮಾಡಿದ ...ಬ್ಲೂ ಈ ಅನೌಪಚಾರಿಕ ಮೂಲದ ಸಾಲಗಳು ...ವರೂ ಶೇ.30ಕ್ಕಿಂತ ಹೆಚ್ಚು ಬಡ್ಡಿಯನ್ನು ...ಗಿತ್ತು.

...-09ರ ವಾಸ್ತವವಾಗಿ ಚುನಾವಣಾ ಸಮಯವೂ ...ರಿಂದ ಈ ಸಾಲಿನ ಬಜೆಟ್ ಚುನಾವಣಾ ...ಆಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ...ಿ ಸಣ್ಣ ಮತ್ತು ಅತಿಸಣ್ಣ ರೈತರು ಶೆಡ್ಯೂಲ್ಡ್ ...ಿಂದ ಮಾಡಿರುವ ಎಲ್ಲಾ ಸಾಲಗಳನ್ನು ಮನ್ನಾ ...ವಾಗಿ ಸರ್ಕಾರ ಘೋಷಿಸಿದೆ ಹಾಗೂ ಮಧ್ಯಮ ...ತರ ರೈತರು ತಾವು ಮಾಡಿರುವ ಸಾಲದ ...ತ್ತದಲ್ಲಿ ಶೇ.75ರಷ್ಟನ್ನು ಪಾವತಿ ಮಾಡಿದಲ್ಲಿ ...ಒಂದು ಬಾರಿಗೆ ಮನ್ನಾ ಮಾಡುವುದಾಗಿ ...ಾಗಿದೆ. ಇದೆಲ್ಲದರ ಒಟ್ಟು ಮೊತ್ತ 60,0000 ...ಗಳಾಗುತ್ತದೆಂದು ಹಣಕಾಸು ಮಂತ್ರಿ ತನ್ನ ...ಭಾಷಣದಲ್ಲಿ ತಿಳಿಸಿದ್ದಾರೆ.

...ಈಗಾಗಲೇ ಬ್ಯಾಂಕುಗಳ ಬ್ಯಾಂಕಾದ ರಿಸರ್ವ್ ...ನೇಮಕ ಮಾಡಿದ ಪರಿಣಿತರ ಗುಂಪೇ ...ರಷ್ಟು ಅತಿ ಸಣ್ಣ ರೈತರು ಮತ್ತು ಶೇ.69ರಷ್ಟು ...ಯಾವುದೇ ಸಾಂಸ್ಥಿಕ ಮೂಲದ ಅಂದರೆ ...ಿಂದ ಸಾಲ ಪಡೆದಿರುವುದಿಲ್ಲವೆಂದು ತಿಳಿಸಿದೆ. ...ತ್ತು ಕೊಯ್ಯುವ ಬಡ್ಡಿ ದರದಲ್ಲಿ ಬಡ್ಡಿ ...ಿಂದ ಸಾಲವನ್ನು ಪಡೆದಿರುತ್ತಾರೆ. ಆದರೂ ...ಅತಿಸಣ್ಣ ರೈತರ ಹೆಸರಲ್ಲಿ ಇತರ ರೈತರು ...ನಾದ ಲಾಭ ಪಡೆಯುವುದರಲ್ಲಿ ಆಶ್ಚರ್ಯವಿಲ್ಲ. ...ರೀತಿ ಈ ಸಾಲಮನ್ನಾದಿಂದ ಉಂಟಾಗುವ ...ಹೊರೆಯನ್ನು ಶ್ರೀಮಂತರಿಗೆ ವರ್ಗಾಯಿಸುವ ...ಸೂಚನೆಯನ್ನು ಬಜೆಟ್ಟನಲ್ಲಿ ನೀಡಲಾಗಿಲ್ಲ. ...ಅದು ಒಂದೋ ಪರೋಕ್ಷವಾಗಿ ಅದರ ...ಸಾಮಾನ್ಯರ ಮೇಲೇ ಹೇರಬಹುದು. ...ದ್ದರೂ ಈ ಸಾಲ ಮನ್ನಾ ಯೋಜನೆಯಿಂದ ...ಗೆ ಬರುವ ಚುನಾವಣೆಯಲ್ಲಿ ...ಗಬಹುದೇ ವಿನಃ ಸಣ್ಣ ಹಾಗೂ ಅತಿ ಸಣ್ಣ ...ಯಾವುದೇ ರೀತಿಯಿಂದಲೂ ಸಹಾಯ ...ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ...ಗಬೇಕೆಂದರೆ ಅವರಿಗೂ ಬ್ಯಾಂಕು ಸಾಲಗಳು ...ದಲ್ಲಿ ಸಿಗುವಂತಾಗಬೇಕು. ಕಡಿಮೆ ಬಡ್ಡಿ ...ಲ ಕೊಡಲು ಸಾಧ್ಯವೇ ಇಲ್ಲವೆಂದು ಹಣಕಾಸು ...ಹೇಳಿದ್ದಾರೆ! ಆದಾಗಬೇಕೆಂದರೆ ಗ್ರಾಮೀಣ ...ಆಪರೇಟಿವ್ ಬ್ಯಾಂಕುಗಳು ತಮ್ಮ ಶಾಖೆಗಳನ್ನು ...ಲ್ಲಿ ತೆರೆಯುವಂತಾಗಬೇಕು. ಎಲ್ಲಕ್ಕಿಂತ ಹೆಚ್ಚಾಗಿ ...ವ್ಯವಹಾರದ ಪರಮೋದ್ದೇಶ ಲಾಭ ...ಕ್ಕಿಂತ ಕೃಷಿಗೆ ಮತ್ತು ಸಣ್ಣ ಮತ್ತು ಅತಿ ಸಣ್ಣ ...ರಿಗೆ ಬರುವುದು ಎಂದಾಗಬೇಕು. ಆದೆಲ್ಲಾ ...ಪ್ಪ ವಾಣಿಜ್ಯ ಸಂಸ್ಥೆಯ ಹಿತಾಸಕ್ತಿಗಳಿಂದ ...ಬಿಡುಗಡೆ ಹೊಂದುವಂತಾಗಬೇಕು! ಈ ದಿಕ್ಕಿನಲ್ಲಿ ಯಾವ ...ಇಲ್ಲದೆ ಕೇವಲ ಬ್ಯಾಂಕು ಸಾಲಮನ್ನಾ ...ದಿಂದ ರೈತರ ಬದುಕು ಯಾವ ರೀತಿ [illegible]



ನಾರಯ್ಯ, ಮಾತಯ್ಯ, ನಾಗನ್ನನಂಥವರು ಅವನ ಮುಂದೆ ನಿಂತು ಅವನ ಎದೆಯನ್ನ ತಟ್ಟಿ, ಕಣ್ಣಲ್ಲಿ ನೀರು ತುಂಬಿಸಿಕೊಂಡು ಅವನನ್ನೇ ದಿಟ್ಟಿಸಿ ನೋಡ್ತಾ ಇದ್ದಾರೆ. ಇಂಥವರು ಅದೆಷ್ಟು ಜನ? ಈ ಪ್ರಶ್ನೆನೇ ಅವನಲ್ಲಿ ಗೊಂದಲ ಮೂಡಿಸ್ತಿತ್ತು. ತನಗೆ ಉತ್ತರ ಬೇಕು. ಅದನ್ನ ಕಂಡುಹಿಡಿಯಬೇಕಾದರೆ ತಾನು ಇಲ್ಲಿರಬಾರದು. ಇಲ್ಲಿಂದ ಹೋಗಬೇಕು. ಆದರೆ ಎಲ್ಲಿಗೆ?

ಎಲ್ಲರಿಂದ ದೂರ ಹೋದ ಎಲ್ಲನ್ನ

ಎಲ್ಲನ್ನನಿಗೂ ತಿಳಿಯದೆಯೇ ಅವನಲ್ಲಿ ಅಶಾಂತಿ, ಆಂದೋಲನ, ದಂಗೆ ಒಂದೇ ಬಾರಿಗೆ ರೂಪುಗೊಳ್ಳುತ್ತಿದ್ದವು. ಆದರೆ ಅವನಿಗೆ ಅದು ಸ್ಪಷ್ಟವಾಗ್ತಿರಲಿಲ್ಲ. ನಾರಯ್ಯ, ಮಾತಯ್ಯ, ನಾಗನ್ನನಂಥವರು ಅವನ ಮುಂದೆ ನಿಂತು ಅವನ ಎದೆಯನ್ನ ತಟ್ಟಿ, ಕಣ್ಣಲ್ಲಿ ನೀರು ತುಂಬಿಸಿಕೊಂಡು ಅವನನ್ನೇ ದಿಟ್ಟಿಸಿ ನೋಡ್ತಾ ಇದ್ದಾರೆ. ಇಂಥವರು ಅದೆಷ್ಟು ಜನ? ಈ ಪ್ರಶ್ನೆನೇ ಅವನಲ್ಲಿ ಗೊಂದಲ ಮೂಡಿಸ್ತಿತ್ತು. ತನಗೆ ಉತ್ತರ ಬೇಕು. ಅದನ್ನ ಕಂಡುಹಿಡಿಯಬೇಕಾದರೆ ತಾನು ಇಲ್ಲಿರಬಾರದು. ಇಲ್ಲಿಂದ ಹೋಗಬೇಕು. ಆದರೆ ಎಲ್ಲಿಗೆ? ಗೊತ್ತಿಲ್ಲ. ಆದರೂ ಹೋಗಬೇಕು, ಹೊರಟ. ಅದು ತಪ್ಪು ಅಂತ ಅನ್ನಿಸಿದರೂ ಹೊರಟ. ಅವನು ಮಾಡಿದ್ದು ತಪ್ಪು ಅಂತಾ ನಾವು ಹೇಳಲಾಗದು. ಆ ಹಟ್ಟಿಯಲ್ಲಿಯೇ ಇದ್ದರೆ ಹೋರಾಟದ ಬಗೆಗಿನ ಎಲ್ಲ ಯೋಚನೆಗಳೂ ನಾಗನ್ನನ ಹತ್ತಿರಕ್ಕೆ ಬಂದು ನಿಂತುಬಿಡುತ್ತವೆ. ಇನ್ನು ಮುಂದು ಹೋಗಲಾಗದ ಸ್ಥಿತಿಯೇ ಅವನಿಗೆ ಅಸಹನೀಯವಾಯಿತು. ಅದಕ್ಕೇ ಹೋದ. ಆ ಊರು ಬಿಟ್ಟು ತುಂಬಾ ದೂರ. ಹಿಂದೆ ಮೇಲ್ಜಾತಿಯ ಅಹಂಕಾರ ಬೆನ್ನಟ್ಟಿದಾಗ ಓಡಿ ಹೋಗಿದ್ದ, ಬರೀ ಮೈಯಲ್ಲಿ. ಈಗ ತಾನಾಗಿ ಹೊರಟ. ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕ್ತಾ ಹೊರಟ. ಚುಕ್ಕಿಯ ಗೆರೆ ಸುಭದ್ರಳನ್ನು ಬಿಟ್ಟ. ಮಗ ಶಿವಯ್ಯನ ಮಂದಹಾಸವನ್ನೂ ಮರೆತ. ಭೂದೇವಿಯನ್ನ ಎನ್ನೆಲದಿನ್ನೆಗೇ ಬಿಟ್ಟ. ಅಪ್ಪ ಅಮ್ಮನ ಜೊತೆ ತನಗಿದ್ದ ಸಂಬಂಧ ಗಾಢವಾದದ್ದೇನೂ ಅಲ್ಲ. ಅವನು ಹಟ್ಟಿ ಬಿಟ್ಟು ಹೊರಟಾಗ ಅವರನ್ನ ನೆನಪಿಸಿಕೊಳ್ಳಲೂ ಇಲ್ಲ.

ಹೋಗುವ ಮೊದಲು ಒಂದು ವಾರ ಪೂರ್ತಿ ಶಿವಯ್ಯನ ಜೊತೆ ಆಡಿದ, ಭೂದೇವಿಯ ಜೊತೆ ಹಾಡಿದ. ಅಳಿಯ ಇಷ್ಟು ಖುಷಿಯಾಗಿದ್ದದ್ದು ಎಂದೂ ಕಾಣದ ಭೂದೇವಿಗೆ ಖುಷಿಯೋ ಖುಷಿ. ಗೆಳೆಯರ ಜೊತೆ ಹರಟೆ ಹೊಡೆದ. ಕೋಲಾಟವಾಡಿದ. ಮನೆಯಲ್ಲಿ ಕಜ್ಜಾಯ ಮಾಡಿದರು, ಅವನ ಸಂತೋಷವನ್ನ ತಾವೂ ಅನುಭವಿಸಬೇಕು, ಅವತ್ತು ಎಲ್ಲರೂ ಅವನ ಮನೆಯಲ್ಲಿಯೇ ಉಂಡರು. ಸುಭದ್ರಳಿಗೆ ಜೀವನದಲ್ಲಿ ಒಂದು ಸಂತೋಷದ ಮಹಾ ಪ್ರವಾಹದಲ್ಲಿ ಕೊಚ್ಚಿಹೋಗುತ್ತ ಇದ್ದಂತಿತ್ತು. ಆ ವಾರದಲ್ಲಿ ಗೆಳೆಯರ ಜೊತೆ ಸೇರಿ ಒಂದು ಹಾಡು ಕಟ್ಟಿದ. ತುಂಬಾ ದೊಡ್ಡ ಹಾಡು: ಅದರ ರಾಗ ಭೂದೇವಿ ಹಾಡ್ತಾ ಇದ್ದ ಒಂದು ಜನಪದ ಗೀತೆಯಿಂದ ತಗೊಂಡಿದ್ದ.

ಆ ಹಾಡಿನಲ್ಲಿ ನಾರಯ್ಯ, ನೀರು ಮನೆಗಳಿಗೆ ನುಗ್ಗಿದ್ದು, ಹೊಲೆಮಾದಿಗರು ದಿಬ್ಬದ ಮೇಲಕ್ಕೆ ಹೋಗಿದ್ದು, ನಾರಯ್ಯನ ಸಾವು, ಹೊಲೆಯರ ದಿಬ್ಬ - ಇವೆಲ್ಲಾ ಇದ್ದು ಒಂದು ಇತಿಹಾಸವಾಗಿತ್ತು, ವೀರನಾದ ನಾರಯ್ಯ ನೆಲಕ್ಕೆ ಬಿದ್ದಾಗ ಮಾತಯ್ಯನ ವೇದನೆ. ಹಾಡು ಶುರುವಾದ ಮೇಲೆ ಹಟ್ಟಿಯ ಜನ ಒಬ್ಬೊಬ್ಬರಾಗಿ ಬಂದು ಸೇರಿದರು. ಅವರ ಕಣ್ಣ ಮುಂದೆ ಎಲ್ಲನ್ನ ಹಾಡ್ತಾ ಇದ್ದ ಎಲ್ಲ ದೃಶ್ಯಗಳೂ ಬಿಚ್ಚಿಕೊಂಡವು. ಅದು ಅಷ್ಟು ಪ್ರಭಾವ ಬೀರುತ್ತೆ ಅಂತ ಅವನಿಗೆ ಅನ್ನಿಸೇ ಇರಲಿಲ್ಲ. ಎರಡು ಗಂಟೆಗಳ ಕಾಲ ನಡೆದ ಅದು ಬರೀ ಕಥೆ ಅಥವಾ ಹರಿಕಥೆ ಆಗಿರಲಿಲ್ಲ. ಹೆಂಗಸರು ಊಟ ಮುಗಿದ ಮೇಲೆ ತಮಗೆ ತಾವೇ ಹಾಡಿಕೊಳ್ಳೋ ಹಾಡುಗಳಲ್ಲಿನ ರಾಗಗಳನ್ನೇ ಎಲ್ಲನ್ನ ತನ್ನ ಹಾಡುಗಳಲ್ಲಿ ಬಳಸಿದ್ದ. ಮಾರನೆಯ ದಿನವೂ ಕಥೆ ಹೇಳು ಅಂದರು ಊರಿನವರು. ಈ ಬಾರಿ ಅದು ಎರಡು ಗಂಟೆ ಅಲ್ಲ, ಮೂರು ಗಂಟೆಗಳ ಕಾಲ ನಡೀತು. ಗಂಡಸರ ಕಣ್ಣಲ್ಲಿ ನೀರು. ಹೆಂಗಸರು ಜೋರಾಗಿ ಅತ್ತರು. ಹಾಡು ಕೇಳಿದ ಪಿಟ್ಟೋಣಿಗೆ ತಡೆಯಲಾಗಲಿಲ್ಲ. ಆ ರಾತ್ರಿ ಎಲ್ಲನ್ನನಿಗೆ ಮಾತಯ್ಯನ ಕಥೆ ಹೇಳಿದ. ಹೇಳೋದು ಬೇಡ ಅಂದುಕೊಳ್ತಾನೇ ಎಲ್ಲವನ್ನೂ ಹೇಳಿಬಿಟ್ಟ.

ಕಥೆ ಪೂರಾ ಕೇಳಿದ ಎಲ್ಲನ್ನನಿಗೆ ಜೀವನ ಅಂದರೆ ಕಣ್ಣೀರು ಮಾತ್ರ ಅಲ್ಲ ಅಂತ ಗೊತ್ತಾಯಿತು. ತನ್ನ

ಜಿ. ಕಲ್ಯಾಣರಾವ್‌ರವರ

ಅಸ್ಪೃಶ್ಯ ವಸಂತ 13

ಅನುವಾದ: ಪ್ರೊ. ನಗರಗೆರೆ ರಮೇಶ್

ಕಥೆ ಕೂಡಾ ತಾನು ಕಣ್ಣೀರು ಸುರಿಸೋದರಿಂದಲೇ ಮುಕ್ತಾಯವಾಗೋದಿಲ್ಲ. ಹಾಗೆ ನೋಡಿದರೆ ಯಾವ ಕಥೆಯೂ. ಕಣ್ಣೀರಿನೊಂದಿಗೆ ಮುಗಿಯಬಾರದು ಅಂದುಕೊಂಡ. ಮಾತಯ್ಯನ ಜೀವನ ಅಂದರೆ ಅಸ್ಪೃಶ್ಯದ ದಾರುಣ ಕಥೆ. ಜೀವನವೇ ಮಹಾ ಸಾಹಸಿ. ಅದು ಮಾತಯ್ಯನಷ್ಟು ಸಾಹಸಿ. ಹಾಡು ಪ್ರವಾಹದ ಥರ ಹರೀತಾ ಹೋಗ್ತಾಲೇ ಇತ್ತು. ಕಥೆಯ ಜಾಡು ಬದಲಾಯಿತು. ಎನ್ನಲೆದಿನ್ನೆ ಹಳ್ಳಿಯ ವಿವರಗಳು. ಆ ಸಮಾಜದ ರಚನೆ. ದೊಡ್ಡ ಶ್ಯಾನುಭೋಗ, ಜಮೀನು ಇವುಗಳಿಂದ ಶುರುವಾದ ಕಥೆ ಮಳೆ ನೀರು ಮನೆಗಳಿಗೆ ನುಗ್ಗಿದ್ದು, ಮಾತಯ್ಯನ ಸಾವು-ಈ ಘಟ್ಟಕ್ಕೆ ಬರುವ ಹೊತ್ತಿಗೆ ಒಂದು ಹೊಸ ತಿರುವನ್ನ ಪಡೆಯಿತು. ದೊಡ್ಡ ಶ್ಯಾನುಭೋಗನ ಕಥೆ ಮಾತಯ್ಯನ ಕೈಯಲ್ಲಿ ಮುಗಿದಿದ್ದು ಆ ಹಾಡಿನ ಕೊನೆಯ ದೃಶ್ಯ.

ಹಾಗೆ ಹಾಡೋವಾಗ ತಾನೊಬ್ಬ ಸಾಹಸಿಯ ಕಥೆಯನ್ನ ಹೇಳ್ತಾ ಇದ್ದೇನೆ ಅನ್ನೋದು ಎಲ್ಲನ್ನನಿಗೆ ತಿಳಿಯಲಿಲ್ಲ. ಅದು ಒಂದು ವೀರಗಾಥೆ. ಹಳೆಯ ಕಾಲದ ವೀರರ ಕಥೆಗಳ ರೀತಿಯಲ್ಲಿ ಕಥೆಯೊಳಗೆ ಕಥೆಯಾಗಿ ಮೂವತ್ತು ಕಥೆಗಳಿಲ್ಲದಿರಬಹುದು. ಆದರೂ ಇಲ್ಲೂ ಇಬ್ಬರು ವೀರರಿದ್ದಾರೆ. ಒಬ್ಬ ವೀರ ನೆಲಕ್ಕೆ ಬಿದ್ದರೆ ಮತ್ತೊಬ್ಬ ವೀರ ಆದರ ಸೇಡಿನ ಕಥೆ ಬರೆದ. ಇವರ ಹಿಂದೆ ಭೂಮಿಯ ಕಥೆ ಇದೆ. ಸ್ವಾಭಿಮಾನವಿದೆ. ಈ ಎಲ್ಲ ವಿಶ್ಲೇಷಣೆ, ವಿವರ ಎಲ್ಲನ್ನನಿಗೆ ತಾನು ಹಾಡುವಾಗ ಅರ್ಥವಾಗದಿರಬಹುದು. ಹಿಂದೆ ವೀರಗಾಥೆಗಳನ್ನ ಬರೆದ ಶ್ರೀನಾಥ ಮಹಾ ಕವಿಯಂಥವನಲ್ಲದಿರಬಹುದು ಎಲ್ಲನ್ನ. ಆದರೆ ಸಂವೇದನಾಶೀಲ ಹೃದಯವಿರುವ ಮಹಾನ್ ಕಲಾವಿದ. ಅವನು ಬಳಸುವ ಪದಗಳು ಅವನವೇ. ತನಗೆ ತಿಳಿದ ಪದಗಳು ತನ್ನ ಜನರವು. ಆ ಜೀವನ ಅವನದು, ಅವನ ಅನುಭವ; ತನ್ನ ಸುತ್ತಲ ವಾಸ್ತವ. ಎಲ್ಲನ್ನ ರಾಗದ ಜೊತೆ ಹಾರಾಡಲಿಲ್ಲ, ಬದಲಾಗಿ ರಾಗವನ್ನ ತನ್ನ ಜೊತೆ ಮುನ್ನಡೆಸಿದ. ಅದು ಸಹಜ ಸೃಜನಶೀಲತೆ. ಎಲ್ಲ ಜಾನಪದ ಕಲಾವಿದರೂ ಮಾಡಿದ್ದು ಹಾಗೇನೇ. ಅವರು ಯಾವುದೇ ಬಂಧಕ್ಕೆ ಸಿಗೋದಿಲ್ಲ. ಅವರ ಭಾವಗಳನ್ನ ಯಾವ ಸೆರೆಯಲ್ಲಿಯೂ ಕೂಡಿ ಹಾಕೋಕೆ ಆಗೋದಿಲ್ಲ. ಇವರ ಹಾಡುಗಳನ್ನ ವಿದ್ವಾಂಸರು ಗಾಳಿ ಹಾಡು ಅನ್ನಬಹುದು. ಸಹಜ ಸಂವೇದನೆಗೆ ಮತ್ತೊಂದು ಹೆಸರೇ ಗಾಳಿ ಹಾಡು. ಸ್ವೇಚ್ಛೆಯಾಗಿ, ನಿಸರ್ಗದಲ್ಲಿನ ಎಲ್ಲ ಸಹಜ ಪ್ರಕ್ರಿಯೆಗಳಂತೆ, ಬದಲಾವಣೆಯಂತೆ, ಪ್ರವಾಹ ತಿರುವಿನಂತೆ, ಸಣ್ಣಗೆ ಬೀಸುತ್ತಾ ತೇಲಿಹೋಗುವ ತಂಗಾಳಿಯಂತೆ..... ದನ ಮೇಯಿಸುವ ಹುಡುಗ ತನಗಿಷ್ಟಬಂದಂತೆ ನುಡಿಸುವ ಪಿಳ್ಳಂಗೋವಿಯಂತೆ.

ಹಾಡು ಮುಗಿಯಿತು. ಸ್ವಲ್ಪ ಕೆಲಸವಿದೆ. ನೋಡಿಕೊಂಡು ಬರ್ತೀನಿ ಅಂತ ಹೇಳಿ ಹೊರಟ ಎಲ್ಲನ್ನ. ಆ ಸ್ವಲ್ಪ ಕೆಲಸ ಅಷ್ಟು ವರ್ಷಗಳ ಅಗಲಿಕೆ ಅಂತ ಸುಭದ್ರಳಿಗೆ ಆಗ ಅನ್ನಿಸಲಿಲ್ಲ. ಹೋಗಿ ಬರೋದು ಅಂದರೆ ಅಷ್ಟು ದೂರ ಅಂತ ಭೂದೇವಿಗೆ ಅನ್ನಿಸಲಿಲ್ಲ. ಬರ್ತೀನಿ ಅಂತ ಹೇಳಿದ ದಿನ. ಮಾರನೆ ದಿನ. ಅದರ ಮಾರನೆ ದಿನ ಅವನಿಗಾಗಿ ಕಾದರು. ಎಲ್ಲನ್ನ ಮನೆ ಬಿಟ್ಟ ಮೂರನೆಯ ದಿನ ಪಿಟ್ಟೋಣಿ ಹೆಗಲ ಮೇಲೆ ಶಾಲು ಹೊದ್ದು ಹೊರಟ [illegible] ಜೊತೆಗೂಡಿದ. ಎಲ್ಲನ್ನ ಹೋಗಿರಬಹುದಾದ ಊರುಗಳಲ್ಲೆಲ್ಲಾ ಹುಡುಕಿದರು [illegible] ಇಲ್ಲ.

(ಮುಂದುವರೆಯುವುದು)

ಜೆಡಿಎಸ್ ಸೇರಬೇಕಾದ್ರೆ ಟೆಸ್ಟು ಮಾಡ್ತರಂತೆ ನಿಜವೆ?

ಕಾಳಮಾವ ದೇವೇಗೌಡರ ಗತ್ತಿನಲ್ಲಿ,

"ಏನು ಕೊಟ್ಟವುನ್ನ ಬಡಜೆಟ್ಟಿನಲ್ಲಿ?" ಎಂದು ಉಗ್ರಿ ಕಡೆ ಕಣ್ಣುಬಿಟ್ಟ.

ಉಗ್ರಿ ಬಾಯಿಬಿಡುವ ಮುನ್ನವೇ ಸೀರ,

"ಇನ್ನು ಮ್ಯಾಲೆ ಯಾವ ರೈತನೂ ಇಸಕುಡುದು ಸಾಯಂಗಿಲ್ಲ, ಅಂತಾ ಬೆನಿಪಿಟ್ಟು ಕೊಟ್ಟದ್ದನಂತೆ" ಎಂದ.

ಬಯಲು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ನಿಜವೇನ್ಲ ಉಗ್ರಿ?" ಎಂದಳು ಜುಮ್ಮಿ.

"ರೈತರ ಸಾಲಮನ್ನಾ ಮಾಡಿದ್ದನಂತೆ ಕಣೆ. ಯಾರ್ಯಾರು ಬ್ಯಾಂಕಿನಲ್ಲಿ ಸಾಲ ತಗಂಡಿದ್ರೊ ಅವುರ್ಯಾರು ಕಟ್ಟಂಗಿಲ್ಲ."

"ನೀನು ಸಾಲ ತಗದಿದ್ದೇನೊ ಸೀರ ಮಾವ?"

"ಆಗಲೆ ಕಟ್ಟಿಬುಟ್ಟೆ ಕಂಡ್ಯ."

"ಕಟ್ಟದೆಯಿದ್ರೆ ಈಗ ಮನ್ನ ಆಗದೊ."

"ಆಯ್ಯೋ, ಈ ತಲಿಕೆಟ್ಟ ಸರ್ಕಾರ ನಟಗಂಡು ಏನ್ನಾರ ಮಾಡಂಗಿದ್ದತೇನ್ಲೆ? ಇಲ್ಲಿ ಮಂಡಬದ್ದೊರೆ ಕಂಡ್ಯ ಬದುಕ್ತಾಯಿರೋರು, ಮಾನಮರಿಯಾದಿಗಂಜಿ ಸಾಲ ಕಟ್ಟದೋನಿಗೆ ಯಾವ ಪಾಯ್ದೆನೂ ಇಲ್ಲ" ಎಂದು ಸೀರ ಸರ್ಕಾರದ ಸಾಲವಿರದ್ದಕ್ಕೆ ಪೇಚಾಡಿದ.

"ನಿಜ ಕಣೊ ಸೀರಮಾವ. ಆಗ ಇಪ್ಪತ್ತೈದು ಸವುರು ಪಾಯಿ ಸಾಲ ತಗಂಡಿರೋರು ಕಟ್ಟಂಗಿಲ್ಲ ಅಂದ್ರು. ನಾವ್ಯಾರು ತಗಂಡಿರಲಿಲ್ಲ, ಅದ್ಯಾರು ತಗತ್ತರೊ, ಅದ್ಯಾರು ತಿಂತರೋ ದೇವುರಿಗೇ ಗೊತ್ತು" ಎಂದ ಉಗ್ರಿ.

"ಈಗ್ಲು ಅಂಗೆ ಆಗ್ಯದಲ್ಲ ಹೇಳು. ಇಲ್ಲಿರೊ ನಾವ್ಯಾರು ಸಾಲ ತಗಂಡಿಲ್ಲ, ಸಾಲಮನ್ನಾ ಅಂದ್ರೆ ನಾವ್ಯಾರಾರ ಕುಣದಾಡಂಗಿದ್ದವೇ?"

"ರೈತರು ಬದುಕ್ಲಿ ಬುಡ್ಯ. ಸಾಲ ನಾವೆ ತಗಬೇಕು ಅನ್ನದೇನೂ. ಒಟ್ಟಿನಲ್ಲಿ ರೈತ ನ್ಯಾಣಾಯ್ಕಂಡು ಸತ್ತ ಅನ್ನೊ ಸುದ್ದಿ ಬರದಂಗಿದ್ರೆ ಸಾಕು" ಎಂದ ಕಾಳಮಾವ.

"ಗೊತ್ತಾಯ್ತದೆ ತಗೊ ಮುಂದೆ. ಸಾಲಮನ್ನಾ ಆದ್ರು ರೈತ ಸಾಯ್ತನೆ ಅನ್ನದಾದ್ರೆ ಬ್ಯಾರೆ ಕಾರಣೇನು ಅಂತ ಮುಂದೆ ಗೊತ್ತಾಯ್ತದೆ" ಎಂದ ಉಗ್ರಿ.

"ಅವನು ಭೂಮಿ ನಚ್ಚರವರಿಗೂ ಅವನ ಬವಣೆ ತಪ್ಪಿದ್ದಲ್ಲ ಕಂಡ್ಯ. ಭಾರಿ ಕಬ್ಬು ಬ್ಯಳಿತನೆ ಅಂತಿವಿ. ಅವು ನೇನಾಗ್ಯವುನೆ? ಬತ್ತ ಬ್ಯಳದು ಕಣಜ ಮೂಟೆಲ್ಯಲ್ಲ ತುಂಬಿ ಕಂಡು ಕುಂತವುನೆ ಅನ್ನೊನು ಆದಾಯದ ಮ್ಯಾಲೆ ಕುಂತಿದ್ದನೆ? ಅಂಗೊ ಅಂಗೆ. ಅದನ್ಯಲ್ಲ ಹೇಳಕ್ಯಾಗದಿಲ್ಲ" ಎಂದು ಕಾಳಮಾವ ಕೃಷಿ ನೀತಿ ಹೇಳಿದವನ ಗತ್ತಿನಲ್ಲಿ ಕೂತ.

"ಭಲೆ ಚಾನ್ಸಿದೆ, ಲಕ್ಕಿ ಚಾನ್ಸಿದೆ, ಲಲಲಾವ್ ಲಲಲಾವ್ ಲಕ್ಕಿ ಚಾನ್ಸಿದೆ, ಭಲೆ ಚಾನ್ಸಿದ್ದೇ" ಎಂದು ಹಾಡೇಳಿಕೊಂಡು ವಾಟಿಸ್ಸೆ ಬಂದ.

"ಏನು ಚಾನ್ಸೊ? ಯಾವುದಾರ ಲಾಟ್ರಿಗೀಟ್ರಿ ಹ್ವಡದದೇನೊ?" ಎಂದ ಉಗ್ರಿ.

"ಸೊಸೈಟಿಲಿ ಒಂದಿಷ್ಟು ಹಳೆ ಸಾಲಿತ್ತು ಕಣೊ ಉಗ್ರಿ. ತಗಂಡಿದ್ದು ಆರುಸವುರ, ಬಡ್ಡಿಸೇರಿ ಒಂಭತ್ತು ಸವುರಾಗಿತ್ತು. ಅದೀಗ ಚಿದಂಬರಂ ಮನ್ನಾ ಮಾಡಿದ ನೋಡು."

"ಏ ಒಂಭತ್ತು ಸವುರುಪಾಯಿ ಸಾಲನೂ ಒಂದು ಸಾಲವೇನೊ? ಲಕ್ಷಾಂತ್ರಪಾಯಿ ಸಾಲ ಮಾಡಿರೊ ರೈತನಿಗಾದ್ರೆ ಭಲೆ ಚಾನ್ಸು ಅನ್ನಬವುದು. ನಿಂದ್ಯಾವ ಪುಟಗೋಸಿ ಸಾಲನೊ?" ಎಂದ ಉಗ್ರಿ.

"ಅದಲ್ಲ ಕಣೊ ಉಗ್ರಿ. ಸೊಸೈಟಿ ಸೆಕೆಟ್ರಿ ಕಂಡಾಗ ಒಂಥರಾ ಇನ್‌ಸಲ್ಟಾಗದು. ಈಗ ಎದ್ರಿಗೆ ಬರ್ಲಿ ಏನು ತಿಳಕಂಡೆ ನನ್ನ ನೀನು ಅನ್ನಂಗೆ ನ್ಯಡಿಬಹುದು. ಸಾವರ ಆಗ್ಲಿ, ನೂರಾಗ್ಲಿ ಸಾಲ ಸಾಲನೆ ಅಲವೇನೋ ಉಗ್ರಿ?"

"ನಿಜ ಕಣೊ. ಈ ದೇಸದಲ್ಲಿ ಮಾನಮರಿಯಾದಿಗೆ ಅಂಜಿ ಬದುಕಿರೋನು ರೈತನೆ ಕಣೊ. ಅದ್ಕೆ ಅಲವೆ ಅವುನು ಸಾಯ್ತಾಯಿರದು?"

"ಈ ರೈತರ ಸಾಲಮನ್ನಾ ಮಾಡಬೇಕಾದ್ರೆ ದ್ಯಾವೇಗೌಡ ಭಾರೀ ಗಲಾಟೆ ಮಾಡಿ ಮನ್ನಾ ಮಾಡಿಸಿದನಂತೆ" ಎಂದ ಸೀರ.

"ಇದೇನು ಚಿಗಪ್ಪ ಹಿಂಗಂತೀ? ಅವುನು ಲೋಕಸಭೆಗೆ ಹೋಗಿದ್ದೆ ಒಂದು ಸತಿಯಾ. ಅಂತದ್ರಲ್ಲಿ ರೈತರ ಸಾಲಮನ್ನಾ ಮಾಡಿ ಅಂತ ಅವುನೆಲ್ಲೇಳಿದಾ.....?" ಎಂದ ವಾಟಿಸ್ಸೆ.

"ಏನಪ್ಪ ಕುಮಾರಸ್ವಾಮಿ ಅಂಗಂದವುನಂತೆ. ನಮ್ಮಪ್ಪ ಜಗಳಮಾಡಿ ರೈತರ ಸಾಲಮನ್ನಾ ಮಾಡಿಸ್ತ ಅಂತವ."

"ಕುಮಾರಣ್ಣ ಅಂಗಂದಿರಬೇಕಾದ್ರೆ ಅಂಗನ್ನು ಅಂತ ದ್ಯಾವೇಗೌಡನೇ ಹೇಳಿ ಕೊಟ್ಟಿರತನೆ ಚಿಗಪ್ಪ ಕುಮಾರಸ್ವಾಮಿ ಎಲ್ಲಿ ಬಡಜೆಟ್ಟ ಓದಕ್ಯೋಯ್ತನೆ? ಅವುನೆಲ್ಲೊ ಜಮೀಲ್‌ನ ಅದ್ದೆಲಿ ಅಡ್ಡಡ್ಡ ಮನಿಕಂಡು ಮಾತಾಡ್ತಯಿರತನೆ. ಆಗ ದ್ಯಾವೇಗೌಡ ಈ ರೈತರ ಸಾಲಮನ್ನಾ ವಿಷಯದ ಬೆನಿಪಿಟ್ಟು

"ಏನು ಟೆಸ್ಟ ಮಾಡ್ತರೋ ಟೆಸ್ಟಿಕಲ್ಲಾ? ಹೆ... ಮಾಡ್ತರೊ, ಅಥವಾ ಪ್ರಾಪರ್ಟಿ ಟೆಸ್ಟು ಮಾ... ಅಥವಾ ಪೊಲೀಸ್ ಸ್ಟೇಷನ್ ಕಂಪ್ಲೇಂಟ್ ... ಮಾಡ್ತರೊ?"

"ಏನಪ್ಪ ಆ ಸಾಬಿ ಅಂಗಂದವುನೆ?"

"ಅವುನ್ನ ನೋಡಿದೇಟಿಗೆ ನಗುಬತ್ತದೆ. ಇನ್ನ ಅ... ಮಾತಾಡಿದ ಅಂದ್ರೆ ಏನಾರ ಮೀನಿಂಗ್ ಇರತದ... ಉಗ್ರಿ? ಬಹುಶಃ ಅವುನು ಮಾಡೊ ... ಹಿಂಗಿರಬಹುದು."

"ಯಂಗಿದ್ದತು ಹೇಳು ನೋಡನ?"



ತಾವು ತಗೋಬೇಕು ಅಂತ ಪ್ಲಾನ್ ಮಾಡಿ ಪೋನ್ ಮಾಡಿರತನೆ. ಇವುನು ಅಂಗಂದಿರತನೆ ಅಷ್ಟೆಯಾ" ಎಂದ ವಾಟಿಸ್ಸೆ.

"ಆಹಹ, ಕಂಡೋನಂಗೆ ಹೇಳ್ತಿಯಲ್ಲಾ ನೀನು" ಎಂದಳು ಜುಮ್ಮಿ.

"ನೋಡಕ್ಕ, ದೇವೇಗೌಡ ಏನೂ ಅಂತ ನನಿಗೊತ್ತು. ಯಾರ್ಯಾರ ಕೈಲಿ ಏನು ಮಾಡುಸ್ತನೆ ಅಂತ ನಾನು ಇಲ್ಲೆ ಕುಂತಗಂಡು ಹೇಳಬಲ್ಲೆ."

"ಅದಿರ್ಲಿ, ಮಿರಾಜುದ್ದೀನ್ ಪಟೇಲ ಏನಂದವನೆ ಗೊತ್ತೆನೊ ವಾಟಿಸ್ಸೆ?"

"ಏನಂದವುನಪ್ಪಾ?"

"ಈಗ ಜೆಡಿಎಸ್ ಟಿಕೆಟು ಕೊಡಬೇಕಾದ್ರೆ ಟೆಸ್ಟು ಮಾಡಿ ಕೊಡತರಂತಲ್ಲಾ?"

"ದ್ಯಾವೇಗೌಡ್ರ ಪ್ಯಾಮಿಲಿ ಟೆಸ್ಟು ಅಂದ್ರೆ ಇಷ್ಟೆ ಕ... ಮುಂದೆ ಜೆಡಿಎಸ್‌ನಿಂದ ಟಿಕೇಟು ತಗಳೊ ಕ್ಯಾಂಡೇ... ಕೆಲವು ಹೋರಲ್ ಎಗ್ಸಾಂ ಮಾಡ್ತರೆ. ಅದರಲ್ಲಿ ಅ... ಪಾಸಾಗಬೇಕು. ಹೋರಲ್ ಇಲ್ದೆಯಿದ್ರು ಬ... ಲಾಂಗ್‌ವೇಜ್, ನಾಲೆಡ್ಜು ಪಿಡಬ್ಲ್ಯುಡಿ ಕಂಟ್ರಾಕ್ಟಲ್ಲಿ ಲ್ಯಾ... ಡೀಲಿಂಗ್‌ನಲ್ಲಿ ಎಷ್ಟು ಮಾಡ್ತವುನೆ... ಹಿಂಗೆ ಒಂದಿ... ಮಾಹಿತಿ ಸಂಗ್ರಹಿಸ್ತರೆ."

"ಅಂಗ್ಯಲ್ಲ ಮಾಡ್ತರೇನ್ಲ?" ಎಂದಳು ಜುಮ್ಮಿ.

"ಊ ಕಣಕ್ಕ. ಈ ಹಿಂದೆ ಮೋಸ ಹೋಗಿರದ್... ಈಗ ಟೆಸ್ಟು ಮಾಡಿ ಕ್ಯಾಂಡೇಟ್‌ಗಳ ತಗಳದು ಅವುರಿ... ಅನಿವಾರ್ಯ ಆಗಿದೆ. ಆದ್ದರಿಂದ ಮುಂದೆ ಬ... ಜೆಡಿಎಸ್ ಗುಲಾಮರು ಯಂಗಿರಬೇಕಪ್ಪಾ ಅಂದ್ರೆ ... ಮಿರಾಜುದ್ದೀನ್ ಪಟೇಲ್‌ತರ ಬಾಸಣ ಮಾಡೋ ... ನಮ್ಮು ಕುಮಾರಸ್ವಾಮಿ ಸಾಹೇಬ್ರು, ನಮ್ಮು ರೇ...

ಭಯೋತ್ಪಾದಕ-ದೇಶಭಕ್ತ-ನ್ಯಾಯಾಲಯ


ಭಯೋತ್ಪಾದಕ

ಸಿದ್ದಲಿಂಗ ದೇವರ ಮಗ. ಹಾಗೆಂದ ತಕ್ಷಣ ಕಸದತೊಟ್ಟಿಯಲ್ಲೋ, ಮಳೆಯ ಸಂದಿಯಲ್ಲೋ ಉದ್ಭವ ಮೂರ್ತಿಯಂತೆ ದೊರೆತ ಮಗು ಅಂತ ಅಲ್ಲ, ತಂದೆ ತಾಯಿ ಇಬ್ಬರೂ ಇದ್ದರು. ಮದುವೆಯಾಗಿ ಬಹಳ ವರ್ಷಗಳೇ ಕಳೆದರೂ ಆ ಭಗವಂತ ಮಕ್ಕಳ ಭಾಗ್ಯ ಕರುಣಿಸಿರಲಿಲ್ಲ, ಕಾಣಬಾರದ ವೈದ್ಯರನ್ನೆಲ್ಲ ಕಂಡರು. ಮಾಡಬಾರದ ವೈದ್ಯವನ್ನೆಲ್ಲ ಮಾಡಿದರು. ಆದರೂ ವಂಶಕ್ಕೊಂದು ಕುಡಿ ಅಂತ ಆಗಿರಲಿಲ್ಲ, ಯಡಿಯೂರು ಸಿದ್ದಲಿಂಗೇಶ್ವರನಿಗೆ ಹರಕೆ ಹೊತ್ತರು. ದೇವರು ಕಣ್ಣು ತೆರೆದ. ವಂಶೋದ್ಧಾರಕನೊಬ್ಬ ಜನಿಸಿದ. ದೇವರ ಹರಕೆ ಹೊತ್ತ ನಂತರ ಫಲಿಸಿದ ಫಲ ಇದು ಆದುದರಿಂದ ಸಿದ್ದಲಿಂಗ ಎಂದೇ ನಾಮಕರಣ ಮಾಡಿದರು.

ಮೂರು ವರ್ಷದ ಮಗು ಆಗಿದ್ದಾಗ ಯಡಿಯೂರಿಗೆ ಹೋಗಿ ಸಿದ್ದಲಿಂಗೇಶ್ವರನಿಗೆ ಮುಡಿ ಒಪ್ಪಿಸಿ ಬಂದರು. ಶಾಲೆಗೆ ಸೇರಿಸುವ ದಿನವೂ ಅಷ್ಟೆ. ದೇವಸ್ಥಾನಕ್ಕೆ ಹೋಗಿ ಮಗುವನ್ನೂ ಅಡ್ಡಬೀಳಿಸಿ, "ಸ್ವಾಮಿ ನಮ್ಮಪ್ಪ ಈ ಮಗಾವ ನಿನ್ನ ಮಡಲಿಗೆ ಹಾಕಿವ್ನಿ ಹಾಲ್ನಲ್ಲಾರೂ ಹಾಕು, ನೀರ್ನಲ್ಲಾರು ಹಾಕು" ಅಂತ ಸ್ವಾಮಿಗೆ ಒಪ್ಪಿಸಿದರು. ಸಿದ್ದಲಿಂಗನೂ ಹಾಗೇ ಬೆಳೆದ. ತನ್ನ ಎಲ್ಲ ಯಶಸ್ಸಿಗೂ ಆ ಸ್ವಾಮಿಯೇ ಕಾರಣ ಎಂದು ನಂಬಿದ್ದ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸಾಗಬೇಕಾದರೆ ಯಡಿಯೂರು ಸಿದ್ದಲಿಂಗೇಶ್ವರನೇ ಕಾರಣ ಎಂದು ನಂಬಿ, ಪಾಸಾದರೆ ಮುಡಿ ನೀಡುತ್ತೇನೆ ಎಂದು ಹರಕೆಯನ್ನು ತೀರಿಸಿ ಬಂದ. ಪಿಯೂಸಿಯಲ್ಲೂ ಹರಕೆ ಹೊತ್ತ, ಆದರೆ ಯಾಕೋ ಆ ದೇವರು ಕಣ್ಣು ಬಿಡಲಿಲ್ಲ, ತನ್ನ ಪ್ರಾರ್ಥನೆಯಲ್ಲೇ ಏನೋ ಕುಂದು ಇದ್ದಿತೆಂದು ಕೆನ್ನೆಗೆ ಹೊಡೆದುಕೊಂಡು 'ದೇವರೇ ಕ್ಷಮಿಸಪ್ಪ' ಎಂದು ಬೇಡಿಕೊಂಡ. ಪ್ರಾಯಶ್ಚಿತ್ತಕ್ಕಾಗಿ ಮುಡಿ ನೀಡಿದ. 'ಈ ಸಲವಾದರೂ ಪಾಸು ಮಾಡಿಸಪ್ಪ ಸ್ವಾಮಿ' ಎಂದು ಮತ್ತೆ ಹರಕೆ ಹೊತ್ತ ಸ್ವಾಮಿಯ ಹರಕೆಯ ಫಲ. ಎರಡನೇ ಸಲಕ್ಕೆ ಸಿದ್ದಲಿಂಗ ಪಾಸಾದ. ಹೀಗೆ ಬಿಎ, ಎಂಎ ಪಾಸಾದದ್ದು 'ಪೊಲೀಸ್ ಇಲಾಖೆಲಿ ಕೆಲಸ ಸಿಕ್ಕಿದ್ದು' ಎಲ್ಲ ಯಡಿಯೂರ ಸಿದ್ದಲಿಂಗೇಶ್ವರನ ಕೃಪೆಯಿಂದ ಅಂತ ಬಲವಾಗಿ ನಂಬಿದ್ದ.

ತನ್ನನ್ನು ನಂಬಿದವರನ್ನು ಯಾವತ್ತೂ ಆ ದಯಾಮಯನಾದ ಪರಮಾತ್ಮ ಕೈ ಬಿಡುವುದಿಲ್ಲ ಎಂಬುದಕ್ಕೆ ಸಿದ್ದಲಿಂಗನೇ ಸಾಕ್ಷಿ. ಹೇರಳವಾಗಿ ಹಣ ಸಂಪಾದಿಸುವ ಮಾರ್ಗ ಸೂಚಿಸಿದ. ಇಲಾಖೆಯಲ್ಲಿ ಬಡ್ತಿಯನ್ನು ಕೊಡಿಸಿದ. ಅಂತಹ ಸ್ವಾಮಿಗೆ ಪೂಜೆಯನ್ನು ಸಲ್ಲಿಸುವುದನ್ನು ಸಿದ್ದಲಿಂಗ ತಪ್ಪಿಸಿದ ದಿನ ಇಲ್ಲ, ಪೊಲೀಸ್ ಠಾಣೆಗೆ ಬಂದ ತಕ್ಷಣ ಅವನು ಮಾಡುತ್ತಿದ್ದದ್ದೇ ಪೂಜೆ. ಗಂಧದ ಕಡ್ಡಿ ಹಚ್ಚಿ ಭಕ್ತಿಯಿಂದ ಆಶೀರ್ವಾದ ಯಾಚಿಸಿದ ನಂತರವೇ ಮುಂದಿನ ಕೆಲಸ.

ಅವತ್ತೂ ಹಾಗೇ ಆಯಿತು.



ಸಾಹೇಬರು ಪೂಜೆ ಮುಗಿಸುವುದನ್ನೇ ಕಾಯುತ್ತಿದ್ದ ಪೇದೆ 'ಸಾ' ಅಂದ. 'ಏನು' ಅನ್ನುವಂತೆ ಮುಖ ಮಾಡಿದರು ಅವರು.

'ಬೈಕ್ ಕಳ್ಳ ಸಿಕ್ಕಿದ್ನೆ ಸಾ'

ಯಾವುದೋ ಜುಜುಬಿ ಕೇಸು. ಸಾಹೇಬರವರೆಗೂ ಬರುವಂತಹದಲ್ಲ

'ನೀನೇ ನೋಡ್ಕೋ' ಅಂದರು.

ಅಷ್ಟು ಸರಳ ಆಗಿರಲಿಲ್ಲ ಕೇಸು.

ಬೈಕ್ ಕದ್ದವನ ಹೆಸರು ಹೇಳಿದ.

ಸಾಹೇಬರು ಚುರುಕಾದರು.

'ಏನ್ ಮಾಡ್ತಾ ಅವ್ನೆ'

'ಓದ್ತಾ ಅವನಂತೆ'

'ಎಲ್ಲಿ?'

ಪೇದೆ ತಾನು ಸಂಗ್ರಹಿಸಿದ್ದ ವಿವರ ತಿಳಿಸಿದ.

ಅಂದರೆ.... ಅವನು ಬುದ್ಧಿವಂತ ವಿದ್ಯಾರ್ಥಿ!

ಎಲ್ಲರ ಜೊತೆಯೂ ಸೌಹಾರ್ದತೆಯಿಂದ ಇರುತ್ತಾನೆ ಅಂದರೆ... ಇವನು ಅವನೇ ಇರಬೇಕು!

ಸಮಯ ವ್ಯರ್ಥ ಆಗಬಾರದಲ್ಲ; ಈ ಸುವರ್‌ಗಳು ಅಲ್ಲಿರುವ ಪದಾರ್ಥಗಳನ್ನೇ ಇಲ್ಲದಂತೆ ಮಾಡಿದರೆ!

ತಕ್ಷಣ ಅವನು ಇದ್ದ ರೂಮಿಗೆ ಹೋದರು. ಬೀಗ ಒಡೆದು ಒಳಪ್ರವೇಶಿಸಿದರು. ಕೊಠಡಿಯನ್ನೆಲ್ಲ ಜಾಲಾಡಿದರು.

ಅಲ್ಲಿ ಸಿಕ್ಕಿದ್ದೇನು?

ಎರಡು ಖುರಾನ್ ಪ್ರತಿಗಳು!

ಒಂದೇ ಪ್ರತಿ ಸಾಕಲ್ಲ, ಎರಡು ಯಾಕೇ ಬೇಕು ಇವನಿಗೆ? ಅಂದರೆ ಇವನು.... ಅವನೇ!

ಮಿಕ್ಕವೆಲ್ಲ ಕೆಲಸಕ್ಕೆ ಬಾರದವು.

ಠಾಣೆಗೆ ಹಿಂತಿರುಗಿದರು. ಸೆಲ್‌ನಲ್ಲಿ ನೋಡಿದರು. ಬೈಕ್ ಕಳ್ಳ ಅಮಾಯಕನಂತೆ ನಿಂತಿದ್ದ. 'ಕಳ್ಳ ಸೂಳೆ ಮಗ' ಅಂದುಕೊಂಡರು. ನಂತರ ಮಾಮೂಲು. ಅಪರಾಧಿಗಳ ಬಾಯಿ ಬಿಡಿಸಲು ಕೊಡಲೇಬೇಕಾದ ಹಿಂಸೆಯನ್ನು ಕೊಟ್ಟರು.

ಏನು ಹಿಂಸೆ ಅದು?

ಪೆನ್ನಿಗೇನು ಮರ್ಯಾದೆ ಇಲ್ಲವೆ? ಅದನ್ನೆಲ್ಲ ವರ್ಣಿಸಲು 'ಚಿತ್ರಹಿಂಸೆ' ಅಂದರೆ ಸಾಕು.

ಏನು ಆಶ್ಚರ್ಯ! ತಾವು ಊಹಿಸಿದ್ದಕ್ಕಿಂತ ಭಯಂಕರವಾಗಿತ್ತು ಅವನು ನೀಡಿದ ಮಾಹಿತಿ.

ಭಯೋತ್ಪಾದಕರ ಜಾಲ ಆಳ ಹಾಗೂ ವಿಸ್ತಾರವಾಗಿ ಭಾರತದ ಉದ್ದಗಲಕ್ಕೂ ವಿಸ್ತರಿಸಿತ್ತು! ಪ್ರಮುಖ ವಾಣಿಜ್ಯ ಕೇಂದ್ರಗಳನ್ನು, ಧಾರ್ಮಿಕ ಸ್ಥಳಗಳನ್ನು ಸ್ಫೋಟಿಸುವ ಸ... ನಡೆದಿತ್ತು!

ಮಾರನೇ ದಿನ ಸುದ್ದಿ ಮಾಧ್ಯಮಗಳಲ್ಲಿ ಅದೇ ಸು... 'ನಗರದಲ್ಲಿ ಭಯೋತ್ಪಾದಕರ ಅಟ್ಟಹಾಸ'

ರೋಚಕವಾಗಿ ವಿವರ ನೀಡಲಾಗಿತ್ತು.

ಈ ವಿವರಗಳೆಲ್ಲ ಅವರಿಗೆ ದೊರೆತದ್ದು ಹೀಗೆ!

ಬಲ್ಲ ಮೂಲಗಳಿಂದ!

ತಲ್ಲಣಗೊಂಡಿತು ಜನತೆ.

ಅಣಕ

ಎಚ್.ಎಲ್. ಕೇಶವಮೂರ್ತಿ

ದೇಶಭಕ್ತ

ಕುದಿಯಿತು ಅವನ ರಕ್ತ.

ಉಗ್ರಗಾಮಿಗಳಿಂದ ದೇಶದ ರಕ್ಷಣೆಗೆ ಆಪತ್ತು!

ಹಾಕಿದನು ಅವನಿಗೆ ಬಹಿಷ್ಕಾರ.

ಸಾಕೆ ಇಷ್ಟು?

ಅವನಿಗೆ ಅವತ್ತು ಪರೀಕ್ಷೆ ಇತ್ತು. ಪರೀಕ್ಷಾ ಕೇಂದ್... ಹಾಕಿದ ಮುತ್ತಿಗೆ. ಮಾಡಿದರು ದಾಳಿ. ಕೊಡಲಿಲ್ಲ ಅವ... ಪರೀಕ್ಷೆ ಬರೆಯಲು.

ಆತನ ಅಪರಾಧ ಸಾಬೀತಾಗಿಲ್ಲ, ಶಂಕಿತ ಉ... ಅಷ್ಟೆ. ಉಗ್ರ ಎಂದು ತೀರ್ಪು ನೀಡಲು ಇವ... ನ್ಯಾಯಾಲಯವೇ?

ಇದು ಕುತರ್ಕ. ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

ಮಾಡಿಸಿದ ನ್ಯಾಯವಾದಿಗಳಿಂದ ಠರಾವು; 'ಅವ... ಪರ ವಾದಿಸುವ ನ್ಯಾಯವಾದಿಗಳಿಗೆ ವಕೀಲರ ಸಂಘದಿಂದ ಬಹಿಷ್ಕಾರ!'

ವಿಚಾರಣೆ ಆಗದೆಯೇ ಶಿಕ್ಷೆಯೇ?

ಅಂತಹವರ ವಿಚಾರಣೆ ಅವಶ್ಯಕತೆ ಇಲ್ಲ!

ಯಾವುದೋ ನ್ಯಾಯವಾದಿ ಆರೋಪಿ ಪರ ವಕಾಲತ್ತು ವಹಿಸಲು ಮುಂದೆ ಬಂದ. ಹೇಗಾಗಬೇಕು ದೇಶಭಕ್ತರಿಗೆ? ಅವನ ಮನೆಯ ಮೇಲೆ ದಾಳಿ ನಡೆಸಿತು; ಕಚೇರಿಗೆ ಬೆಂಕಿ ಹಚ್ಚಿತು.

ಅಂತ ಕಡ್ಡಾಯವಾಗಿ ಹೇಳಬೇಕು. ಇದು
ಟೆಸ್ಟು. ಇನ್ನ ಮೂರನೇ ಟೆಸ್ಟು ವಿನಷ್ಟಾ
ಮ್ಮ ರಾಷ್ಟ್ರನಾಯಕರು, ಮಾಜಿ ಪ್ರಧಾನಿಗಳು
ಳಬೇಕು. ಅವ್ರರ ಆಶೀರ್ವಾದದಿಂದ ಇವತ್ತು
ಈ ಸ್ಥಿತಿಲಿದೆ ಅಂತಲೆ ಹೇಳಬೇಕು" ಎಂದು
ದ್ದ.

ನ್ಯಾಕೆ ಅಂಗೆ ನಗತಿ?" ಎಂದಳು ಮುಮ್ಮಿ.

ಬಂತು ಕಣಕ್ಕ. ಪಾರ್ಟಿ ಈ ಸ್ಥಿತಿಗೆ ಬಂತು
ವರು ಏನೋ ಒಂಥರಾ ವರಸೆ ಮಾಡ್ತು,
ಬಂತು. ಯಾಕವ್ವಾ ಅಂದ್ರೆ ಆಗ ದಳದಲ್ಲಿ
ಲೀಡರಿದ್ರು. ಸಿಂಧ್ಯಾ, ಸಿದ್ದರಾಮಯ್ಯ, ಪ್ರಕಾಶ,
ಪಾಟೀಲ, ಮಹಾದೇವಪ್ಪ, ಇಬ್ರಾಹಿಂ,
ಇಂಥೋರ್ನೆಲ್ಲ ಇದ್ರು. ಈಗ ನೋಡು. ಚೆಲುವ,
ಚಿಲ್ಲಂಗೂರು, ಮೀರಜ್... ಹಹಹ ಹೆಸರ
ನಾಕು ಜೆಡಿಎಸ್ ಸೇರಸಾ ಅನ್ನಿಸ್ತದೆ ಕಣಕ್ಕ. ಇನ್ನ
ಅವುನ ಗೊಗ್ನೆ ಉಗುಳು, ಅವುನ ನಗ
ಓಡಿ ಬರನ ಅನ್ನಸ್ತದೆ ಕಣಕ್ಕ" ಎಂದು ವಾಟಸ್ನೆ
ಮ್ಮ ನಗತೊಡಗಿದ. ಆತ ನಗುವ ವೈಖರಿಗೆ
ನಗು ಬಂತು.

ಕೀಗ್ನ ಸುಮ್ಮನತ್ತಗೆ" ಎಂದಳು.

ಅದೆ ಹೇಳ್ತಿನಿರಕ್ಕ. ಜೆಡಿಎಸ್‌ನೋರು ಪಾರ್ಟಿ
ಗಂಡು ಗೆದ್ದ ಮೇಲೆ ಪ್ರತಿದಿನ ದೇವೇಗೌಡ್ರ
ಗಿ ಅಟೆಂಡೆನ್ಸ್ ಹಾಕಬೇಕು. ಆಕಸ್ಮಾತ್
ದ್ರೆ ಕಾರು, ಬಂಗ್ಲೆ, ಮಿನಿಸ್ಟ್ರು ಸವಲತ್ತು ಬಿಟ್ಟು
ಇರದಿಲ್ಲ. ಯಲ್ಲಾ ದೇವೇಗೌಡರತ್ರ ಇರತದೆ.
ಧಿಕಾರಿಗಳ ವರ್ಗಾವರ್ಗಿ ಬಾಲಕೃಷ್ಣ ರೇವಣ್ಣ
ಲಿತರದೆ. ಕನಸ್ನಲ್ಲೂ ಸಂಬಂಧಪಟ್ಟ ಮಂತ್ರಿ
ಅನ್ನಬಾರ್ದು ಅನ್ನಂಗಿಲ್ಲ. ಏನಿದ್ರು ಪಾರ್ಟಿ
ಲೆ. ಬಾಯಿಬಡಕಬೇಕು."

ಟಿ.ದ್ಯಾವೇಗೌಡನಂಗೆ ಅನ್ನು?"

ಕಣೊ ಉಗ್ರಿ, ಈ ಪೂಲಿಸ್‌ಫೆಲೊ ಜಿ.ಟಿ.
ವುರು ಕೊಡೊ ಕಿರುಕುಳನ್ನಲ್ಲ ಸಯಿಸಿಗಂಡು
ಪಾರ್ಟಿನೆ ಬುಟ್ಟು ವಂಟೊದ. ಆದ್ದರಿಂದ
ಂದೆ ಏನೇ ಆದ್ರೂ ಅಪ್ಪ ಮಕ್ಕಳೆದ್ರಿಗೆ ಬಾಯಿ
ಗೆ ಹೇಳಿದಂಗೆ ಕೇಳಿಕಂಡೋಗೊ ಗುಲಾಮಿ
ದೇವೇಗೌಡ್ರ ಕುಟುಂಬ ಹುಡುಕ್ತಾ ಅದೆ. ಅದ್ಕೆ
ಟೆಸ್ಟು ಇದ್ದವಂತೆ. ಇಲ್ಲಿಗೆ ಬತ್ತು ನೋಡು
ಕಥೆ!" ■

ಭಕ್ತ ಕೂಗಿದ 'ನಡೆಯಲಿ ಮಂಪರುಪರೀಕ್ಷೆ'
ದುವಾದ ಬೇಡಿಕೆ. ನಡೆಯಬೇಕಾಗಿತ್ತು ಅದು.
ಕ್ಷೆ ನಡೆಯಬೇಕಾದರೆ ಕನಿಷ್ಠ ಮೂರು ಗಂಟೆಗಳ
ಯಾವುದೇ ಆಹಾರ ಸೇವಿಸಿರಬಾರದಂತೆ.
ಂದ ಹಸಿದಿದ್ದ ಆರೋಪಿ ಮಂಪರು ಪರೀಕ್ಷೆಗೆ
ಆಹಾರ ಸೇವಿಸಿದ್ದ. ಅದೂ ಪೊಲೀಸರೇ
ಂದ.

ಯಾರದ್ದು?

ಸ್ಗರಿಸಿದ ದೇಶಭಕ್ತ-'ಹೊಟ್ಟೆ ಬರಿಯ ತಿಂದಿದ್ದ

ಪರು ಪರೀಕ್ಷೆ ತಪ್ಪಿಸಿಕೊಳ್ಳಲು ಅವನ ಹುನ್ನಾರ!

ನ್ಯಾಯಾಲಯ

ಶಭಕ್ತನ ಕೂಗು 'ವಿಚಾರಣೆ ಬೇಕಿಲ್ಲ, ನೀಡಿ

ಯಾಲಯ ಹೀಗೆ ನೇರವಾಗಿ ಹೇಳುವಂತಿಲ್ಲ!

ರೋಪಿಯ ಪರ ವಕೀಲರು?

ರೋಪಿ ಹೆಸರಿಸಿದ ಯಾರೂ ಒಪ್ಪಲಿಲ್ಲ.
ಲಯವೇ ವಕೀಲರನ್ನು ನೇಮಿಸುವುದು
ರ್ದು ಆಯಿತು.

ಕ್ಯೂಟರ್‌ರವರು ಹೇಳಿದ್ದೇ ವೇದವಾಕ್ಯ!

ದು, ಆರೋಪಿ ವಿದ್ಯಾರ್ಥಿ. ತರಗತಿಗಳಿಗೆ ತಪ್ಪಸದೆ
ಗುತ್ತಿದ್ದ, ಭಯೋತ್ಪಾದಕರ ಸಂಘಟನೆಗೆ ಸಮಯ
ಸ್ಫೋಟಕ ವಸ್ತುಗಳನ್ನು ತಯಾರು ಮಾಡಲು,
ಬಚ್ಚಿಡಲು ಹೇಗೆ ಸಾಧ್ಯ ಆಯಿತು?

ಮವಾದ ಪ್ರಶ್ನೆ ಅನ್ನಿಸಬಹುದು. ಇದನ್ನು ಯಾರೋ
ಬಂಧದಲ್ಲಿ ಎತ್ತಿದ್ದರಂತೆ. ಅದಕ್ಕೆ ಬಂದ ನೇರ
ರಾತ್ರಿ ವೇಳೆ ಇದಕ್ಕೆ ಮೀಸಲಿಟ್ಟಿದ್ದ!'

ರೋಪಿ ಏನು ಹೇಳುತ್ತಾನೆ ಇದಕ್ಕೆ?

ತ್ರಿ ವೇಳೆ ಭಯೋತ್ಪಾದನಾ ಚಟುವಟಿಕೆಗಳಿಗೆ
ಗಿತ್ತು' ಎಂದು ತಪ್ಪು ಒಪ್ಪಿಕೊಂಡ!

ಕ್ಷಿತ ತೀರ್ಪು ಬೇಕು?

ಯಾಲಯ ನೀಡಿತು ಜೀವಾವಧಿ ಶಿಕ್ಷೆ!

ವಾಗಿ ತಿಳಿದು ಬಂದಿದ್ದು 'ಭಯೋತ್ಪಾದಕರಿಗೆ
ಗಿತ್ತು' ■

ಒಬ್ಬರೇ ಇದ್ದಾಗ.....


ಮರೆಯುವ ಮುನ್ನ



■ ಪಿ. ಲಂಕೇಶ್

ಮೇ 6,1990

ಮೊನ್ನೆ ಗೆಳೆಯನೊಬ್ಬ ಒಂದು ಪುಸ್ತಕ ಕೊಟ್ಟ. ಅದು ಮ್ಯಾಕ್ಸಿಂ ಗಾರ್ಕಿ ಬರೆದ ಪುಸ್ತಕ. ಗಾರ್ಕಿ ನಾನು ಅಷ್ಟಾಗಿ ಇಷ್ಟಪಡುವ ಸಾಹಿತಿಯಲ್ಲ; ಆದರೆ ಆತನ ಸಣ್ಣ ಕತೆಗಳನ್ನು ನೆನೆದಾಗ ಕ್ಷಣ ನನ್ನ ಅಭಿಪ್ರಾಯ ಬದಲಾಗುತ್ತದೆ. ಈಗ ನಾನು ಪಡೆದದ್ದು ಲೇಖನಗಳ ಸಂಕಲನ; ಟಿಪ್ಪಣಿಗಳು ಅನ್ನಬಹುದು. ಅದರಲ್ಲಿ 'ಒಬ್ಬರೇ ಇದ್ದಾಗ ಮನುಷ್ಯನ ವರ್ತನೆ' ಎಂಬ ಟಿಪ್ಪಣಿ ಇದೆ. ಆ ಟಿಪ್ಪಣಿ ಕೂಡ ನಮಗೆಲ್ಲ ಗೊತ್ತಿರುವುದನ್ನೇ ಹೇಳುತ್ತದೆ. ಯಾರೂ ಇಲ್ಲದಾಗ, ಮನೆಯ ಬಾಗಿಲ ಅಗಳಿ ಹಾಕಿದ್ದಾಗ, ಯಾರೊಬ್ಬರೂ ಇಣುಕಿ ಕೂಡ ನೋಡುವ ಸಂಭವವಿಲ್ಲದಾಗ... ಮನುಷ್ಯ ಹೇಗೆ ವರ್ತಿಸುತ್ತಾನೆ? ಒಮ್ಮೆ ಟಾಲ್‌ಸ್ಟಾಯ್ ಸುತ್ತ ಯಾರೂ ಇಲ್ಲದ್ದು ಖಾತ್ರಿ ಪಡಿಸಿಕೊಂಡು (ಅವಿತಿದ್ದ ಕುತೂಹಲದವನನ್ನು ಆತ ಗಮನಿಸಲಿಲ್ಲ) ಹಲ್ಲಿಯನ್ನು ಕೇಳಿದನಂತೆ, "ಆರೋಗ್ಯವೇ? ಹೇಗಿದ್ದಿಯಾ?" ಹಲ್ಲಿ ಉತ್ತರಿಸಲಿಲ್ಲ, ಬಹಳ ಹೊತ್ತು ಉತ್ತರಕ್ಕಾಗಿ ಕಾದ ಟಾಲ್‌ಸ್ಟಾಯ್ ಹೇಳಿದನಂತೆ, "ನನ್ನ ಬಗ್ಗೆ ಹೇಳುವುದಾದರೆ, ನಾನು ಸುಖವಾಗಿಲ್ಲ."



ಇನ್ನೊಬ್ಬ ಪ್ರಸಿದ್ಧ ರಷ್ಯನ್ ಸಾಹಿತಿ ಆ್ಯಂಟನ್ ಚೆಕಾವ್ ಒಬ್ಬಂಟಿಯಾಗಿ ತನ್ನ ತೋಟದಲ್ಲಿ ಕೂತಿದ್ದಾಗ ತನ್ನ ಹ್ಯಾಟ್‌ನಿಂದ ಸೂರ್ಯನ ಕಿರಣಗಳನ್ನು ಹಿಡಿಯಲು ಪ್ರಯತ್ನಿಸಿದನಂತೆ. ಆತ ಎಷ್ಟು ಪ್ರಯತ್ನಿಸಿದರೂ ಕಿರಣ್ ಹ್ಯಾಟ್‌ನಲ್ಲಿ ಸಿಕ್ಕಿಹಾಕಿಕೊಳ್ಳಲಿಲ್ಲ, ಕೊನೆಗೆ ಬೆವೆತು ಸುಸ್ತಾಗಿ ಕೂತ.


ಪಾದ್ರಿಯೊಬ್ಬ ಏಕಾಂಗಿಯಾಗಿದ್ದಾಗ ತನ್ನ ಬೂಟನ್ನು ಎದುರಿಗಿಟ್ಟುಕೊಂಡು, "ಹೋಗು!" ಅಂದನಂತೆ. ಅವು ಹೋಗಲಿಲ್ಲ, ಚಪ್ಪಾಳೆ ತಟ್ಟಿದ ಪಾದ್ರಿ "ಹ್ಹಾ, ತಿಳೀತಾ? ನಾನು ಇಲ್ಲದೆ ನೀನು ನಡಿಯೋಕೇ ಆಗೋಲ್ಲ!" ಅಂದನಂತೆ. ಅಷ್ಟರಲ್ಲಿ ಪ್ರವೇಶಿಸಿದ ಒಬ್ಬ ಪಾದ್ರಿಯ ವರ್ತನೆಯಿಂದ ಚಕಿತನಾಗಿ ನಿಂತು, "ಏನು ಫಾದರ್?" ಅಂದ. ಪಾದ್ರಿ ಬೆಚ್ಚಿ "ಈಗ ಎಷ್ಟು ಕೆಟ್ಟ ಶೂ ಮಾಡ್ತಾರೆ ಮಾರಾಯ" ಎಂದು ಬೇರೆ ವಿಷಯ ಮಾತಾಡತೊಡಗಿದ.

ಇದೆಲ್ಲ ನಿಮಗೆ ವಿಚಿತ್ರವಾಗಿ ಕಾಣುತ್ತದೆಯೆ? ನನಗಂತೂ ಹಾಗೆ ಕಾಣುವುದಿಲ್ಲ, ಗಾಂಧಿ ಒಬ್ಬರೇ ಇದ್ದಾಗ ತಮ್ಮ ಮೋಹಕ ನಗೆ ಅಭ್ಯಾಸ ಮಾಡಿಕೊಂಡಂತೆ, ಎದುರಾಳಿಗಳಿಗೆ ಬೆರಳು ತೋರಿಸಿ ಉತ್ತರಿಸಿದಂತೆ, ಗಂಭೀರವಾದರೂ ಎಗ್ಗಿಲ್ಲದ ನಡಿಗೆ, ಮಾತು, ನುಡಿಗಟ್ಟು ಇವೆಲ್ಲವುಗಳ ತಾಲೀಂ ನಡೆಸಿದಂತೆ ಕಲ್ಪಿಸಿಕೊಳ್ಳಬಲ್ಲೆ, ಯಾಕೆಂದರೆ ಇದರಲ್ಲಿ ಬಹುಪಾಲು ನಿಜ. ಮನುಷ್ಯ ಒಬ್ಬನೇ ಇದ್ದಾಗ...ತನ್ನ ಒಳಗಿನ ಜೀವಕ್ಕೆ, ಅನುಭವಕ್ಕೆ, ಕಾತರಗಳಿಗೆ ಹತ್ತಿರ ಇರುತ್ತಾನೆ. ಹೊರಜಗತ್ತಿನ ಸವಾಲುಗಳಿಗೆ ಆತ ತನ್ನ ಆಳದಿಂದ ಕಂಡುಕೊಳ್ಳುವ ಉತ್ತರ, ಪರಿಹಾರ ಈ ಏಕಾಂಗಿತನದಲ್ಲಿ ಸಾಧ್ಯವಾಗುತ್ತದೆ. ಕನ್ನಡಿ ಎದುರು ಮಾತಾಡುವವರು, ತಮ್ಮಿಂದ ಸಾಧ್ಯವಾಗದ ನರ್ತನವನ್ನು ತಮಗಾಗಿ ಮಾಡುವವರು, ವಿಫಲಗೊಂಡ ಭಾಷಣವನ್ನು ಏಕಾಂತದಲ್ಲಿ ಮಾಡಿ ಸರಿ ಮಾಡಿಕೊಳ್ಳುವವರು, ತಮ್ಮ ಬಿಂಬಕ್ಕೇ ಕಣ್ಣು ಮಿಟುಕಿಸುವವರು, ಹೇಳಿದ ಸುಳ್ಳನ್ನು ಸಮರ್ಥಿಸಿಕೊಳ್ಳುವವರು.


ಸೇತುವೆಯ ಮೇಲೆ ಒಬ್ಬಂಟಿಯಾಗಿ ನಿಂತ ಭಾರ ಮನಸ್ಸಿನ ಹುಡುಗಿ. ಗಾರ್ಕಿ ಮರೆಯಲ್ಲಿದ್ದಾನೆ. ಚಂದ್ರ ಕೆಂಪಗಿದ್ದಾನೆ. ನಿತ್ಯಕ್ಕಿಂತ ಹೆಚ್ಚು ಕುಡಿದಂತೆ ಇದ್ದಾನೆ. ಸೇತುವೆ ಕೆಳಗೆ ಹರಿಯುತ್ತಿದ್ದ ನೀರಿನಲ್ಲಿ ಚಂದ್ರನ ಬಿಂಬ ನೋಡಿದ ಹುಡುಗಿ ತಲೆಯೆತ್ತಿ ಆಕಾಶದಲ್ಲಿನ ಚಂದ್ರನನ್ನು ನೋಡುತ್ತಾಳೆ- ಮ್ಲಾನವದನದ, ಆತ್ಮಹತ್ಯೆಗೆ ತಯಾರಾದಂಥ ಹುಡುಗಿ ಇದ್ದಕ್ಕಿದ್ದಂತೆ ಅಮಲೇರಿದ ಚಂದ್ರನಿಗೆ ನಾಲಿಗೆ ಹಿರಿದು ಅಣಕಿಸುತ್ತಾಳೆ, ರೇಗಿಸಲು ಯತ್ನಿಸುತ್ತಾಳೆ....

ಒಬ್ಬಂಟಿಯಾಗಿದ್ದಾಗ ಮನುಷ್ಯರು ಹುಚ್ಚರಂತೆ ವರ್ತಿಸುತ್ತಾರೆ ಅನ್ನುತ್ತಾರೆ; ಅಲ್ಲ, ನಿಜಕ್ಕೂ ಒಬ್ಬಂಟಿಯಂತೆ ವರ್ತಿಸುತ್ತಾರೆ. ನಟ ಮತ್ತು ಪ್ರೇಕ್ಷಕ, ಸಾಹಿತಿ ಮತ್ತು ವಿಮರ್ಶಕ ಎಲ್ಲ ಆಗುವ ಮನುಷ್ಯ.... ಒಬ್ಬಂಟಿ ಜಗತ್ತಿನ ಪ್ರಾಣಿಯಾಗುತ್ತಾನೆ.

ಹುಚ್ಚಿದ್ದು ಕುಣಿವವರು



ಇದ್ದಕ್ಕಿದ್ದಂತೆ ಹುಚ್ಚರ ಬಗ್ಗೆ ಚರ್ಚೆ... ಹುಚ್ಚರು, ಕವಿಗಳು, ಪ್ರೇಮಿಗಳು ಒಂದೇ ತರಹ ಎಂದುಕೊಂಡ ಪ್ಲೇಟೋ ಎಷ್ಟು ಜಾಣನೆಂದರೆ, ಈತ ಹತ್ತೊಂಭತ್ತನೆ ಶತಮಾನದ ಚಿಂತನಕಾರ ನೀಟ್ಸೆಗೆ ನಿಜವಾಗಿಯೂ ಹುಚ್ಚನಂತೆ ಕಾಣುತ್ತಿದ್ದ. ಎಲ್ಲರ ಬಗ್ಗೆ ಸ್ಪಷ್ಟ, ಎಂಥ ಜಟಿಲ ವಿಷಯವನ್ನೂ ಮಾತುಗಳಲ್ಲಿ ಹೇಳಬಲ್ಲ ಪ್ಲೇಟೋ ನೀಟ್ಸೆಗೆ ಹಾಗೆ ಕಾಣಿಸಿದರೆ ಆಶ್ಚರ್ಯವಿಲ್ಲ, ಯಾಕೆಂದರೆ ನೀಟ್ಸೆ ಕೂಡ ಪ್ಲೇಟೋ ತರಹದವರ ದೃಷ್ಟಿಯಲ್ಲಿ ಹುಚ್ಚ, ಈ ನೀಟ್ಸೆ ಎಷ್ಟು ಪ್ರತಿಭಾವಂತನೆಂದರೆ ಮನುಷ್ಯನ ಆಳದ ತುಮುಲಗಳನ್ನು ಕಂಡುಕೊಂಡ,



ಕಾದಂಬರಿಕಾರ ದೋಸ್ತೊವ್‌ಸ್ಕಿಯ "ಕಾಯಿಲೆ"ಯ ಅರ್ಥಪೂರ್ಣತೆಯಿಂದ ಪ್ರಭಾವಿತನಾದ, ಪ್ಲೇಟೋನ ಜಾಣ ಹುಚ್ಚನ್ನು ಗೇಲಿ ಮಾಡಿ ಗ್ರೀಕ್ ನಾಟಕಕಾರರಾದ ಸಾಫೋಕ್ಲಿಸ್, ಯೂರಿಪಿಡೀಸ್ ಮುಂತಾದವರ ತಿಮಿರನ್ನು ಮೆಚ್ಚಿದ. ಹಾಗೆಯೇ ದೈಹಿಕ ಮಾನಸಿಕ ಹುಚ್ಚಿನಲ್ಲಿ ಮುಳುಗಿಹೋದ.

ನ್ಯುರಾಟಿಕ್, ಖಿಲು, ಅತೀ ಸೂಕ್ಷ್ಮಜ್ಞತೆ ಯಾರಲ್ಲಿ ಹೆಚ್ಚು? ಕೆಲವರ ಪ್ರಕಾರ ಬೃಹತ್ ನಗರಗಳಲ್ಲಿ ವಾಸಿಸುವ ಮನುಷ್ಯ ಖಿಲನಾಗಿರುತ್ತಾನೆ; ಪಟ್ಟಣದ ಸಾಂಧ್ರ ಅನುಭವದಿಂದ ಅವನ ಮನಸ್ಸು ಬಿರುಕುಬಿಟ್ಟಿರುತ್ತದೆ. ಇನ್ನು ಕೆಲವರ ಪ್ರಕಾರ ಗ್ರಾಮದ ನೋವು, ಆಘಾತಗಳು ಹುಚ್ಚುಹಿಡಿಸುತ್ತವೆ. ತೇಜಸ್ವಿಯವರ ಪ್ರಕಾರ ಅರಣ್ಯದ ಮಧ್ಯೆ ಇರುವ ಅವರ ಮೂಡಿಗೆರೆಯಲ್ಲೇ ಅಪಾರ ಜನ ಹುಚ್ಚರಿದ್ದಾರಂತೆ. ಅಂದಹಾಗೆ, ಮೂಡಿಗೆರೆಯ ಕೆಲವರು ಕಿಡಿಗೇಡಿಗಳು ತೇಜಸ್ವಿಯವರನ್ನು ಆ ಪಟ್ಟಿಯಲ್ಲಿ ಸೇರಿಸಿ ತಮಾಷೆ ಮಾಡುತ್ತಾರೆ.

ಅದೆಲ್ಲ ಇರಲಿ, ಕೇವಲ ನ್ಯೂರಾಟಿಕ್, ಸೂಕ್ಷ್ಮತೆ ಮನುಷ್ಯನನ್ನು ಹುಚ್ಚರ ಗುಂಪಿಗೆ ಸೇರಿಸುವುದಿಲ್ಲ, ನನ್ನ ಪ್ರಕಾರ ನಿಜವಾದ ಹುಚ್ಚ ಇತರರಲ್ಲಿ ಭಯ ಹುಟ್ಟಿಸುತ್ತಾನೆ; ಆತನ ನಡವಳಿಕೆ ಅನಿರೀಕ್ಷಿತವಾಗಿರುತ್ತದೆ; ಇಂದ್ರಿಯಗಳ ಮೇಲಿನ ಅವನ ಹತೋಟಿ ಕಮ್ಮಿ ಇರುತ್ತದೆ. ಇನ್ನೂ ಆಳಕ್ಕೆ ಹೋಗಿ ನೋಡುವುದಾದರೆ, ಪ್ರತಿಯೊಬ್ಬ ಸಹಜ ಮನುಷ್ಯನೂ ಮಾಡುತ್ತಲೇ ತನ್ನ ಮಾಟ ನೋಡಿಕೊಳ್ಳುತ್ತಾನೆ. ಚಿಂತಿಸುತ್ತಲೇ ಚಿಂತನೆಗೆ ಸಾಕ್ಷಿಯಾಗಿರುತ್ತಾನೆ. ಈ ಗುಣ ಹುಚ್ಚರಲ್ಲಿ ಕಡಿಮೆ ಇರುತ್ತದೆ.

ತನ್ನ ಅನುಭವವನ್ನೇ ತನ್ನಲ್ಲಿ ಅನುಭವಿಸುವ ಕವಿ ಹುಚ್ಚನಲ್ಲ, ಇತರರನ್ನು ಗಮನಿಸಲು ವ್ಯವಧಾನವಿಲ್ಲದ ವಿಚಿತ್ರ ವ್ಯಕ್ತಿ ಮಾತ್ರ.

ಇನ್ನೂ ಉರಿಯದವರೆ


ಮಾತನಾಡಿರಿ ಮಾತನಾಡದವರೆ
ಮಾತಾಡಿಸುವವರಿಲ್ಲ ಮಾತ ಕಲಿಯಿರಿ
ಗೀತ ಬರೆಯಲಿಲ್ಲ ನಿಮಗೆ
ಸೋತ ದನಿಯವರೆ, ಇನ್ನೂ ಮಾತನಾಡದವರೆ

ತಿದ್ದಿ ತಿದ್ದಿ ಬರೆಯಿರಿ
ಸುದ್ದ ಸುದ್ದ ಅಕ್ಷರವ
ತಿದ್ದಿಸಲು ಕೈಯ ಹಿಡಿಯುವರಿಲ್ಲ
ಗೆದ್ದು ಮೇಲೆ ಬನ್ನಿರಿ, ಇನ್ನೂ ಗೆಲದವರೆ

ಗಂಜಾಳದ ಕೈಯ ತೊಳೆದು
ಎಂಜಲೂಟವ ಬಿಟ್ಟು
ಮಂಜು ಸುಡುವ ಮೈಗೆ ಅರಿವೆ ತೊಟ್ಟು
ಪಂಜು ಹಿಡಿದು ಬನ್ನಿರಿ, ಇನ್ನೂ ಹೊರಡದವರೆ

ಮೆಟ್ಟ ಮೆಟ್ಟಿಕೊಂಡು ನಿಲ್ಲಿ
ಸುಟ್ಟು ಹೋಗಬಹುದು ನಿಮ್ಮುರಿಗೆ ಈ ಜಗವು
ಚಟ್ಟ ಕಟ್ಟಲೇಬೇಕು, ಚರ್ಮ ಸುಲಿಯಬೇಕು- 'ಅವರ'-
ಗಟ್ಟಿಯಾಗಿ ನಿಂತುಕೊಳ್ಳಿ, ಇನ್ನೂ ಉರಿಯದವರೆ

■ ಸಂತೋಷ ಗುದ್ದಿಯಂಗಡಿ



ಮಹಿಳಾ ದಿನಾಚರಣೆ ಯಾವ ಮಹಿಳೆಯರಿಗೆ?

ಮಾರ್ಚ್ 8 ಅಂತರರಾಷ್ಟ್ರೀಯ ದುಡಿಯುವ ಮಹಿಳೆಯರ ದಿನ. ತಾನು ಕೇವಲ ಭೋಗದ ಅಥವಾ ಪರಿಚಾರಿಕೆಯ ವಸ್ತುವಲ್ಲವೆಂದೂ, ಪುರುಷರಷ್ಟೇ ಸಮಾನ ಹಕ್ಕುಗಳನ್ನು ಹೊಂದಿರುವ, ಸಮಾಜದ-ಆಕಾಶದ ಅರ್ಧ ಭಾಗವೆಂದು ಸಾರುವ ದಿನ. ಆದರೆ ಈಗಲೂ ಸಮಾಜದಲ್ಲಿ ಮತ್ತು ನ್ಯಾಯಾಲಯವನ್ನು ಒಳಗೊಂಡಂತೆ ಪ್ರಭುತ್ವ. ಅಂಥ ಸಂಸ್ಥೆಗಳಲ್ಲಿ ಮಹಿಳೆಯರ ಬಗ್ಗೆ ಹಕ್ಕುಳ್ಳ ಸಹ ನಾಗರಿಕಳೆಂಬ ಸ್ಥಾನವನ್ನು ನೀಡಿಯೇ ಇಲ್ಲ. ಬಹಿರಂಗವಾಗಿ ಅಲ್ಲವಾದರೂ ಅಂತರಂಗದಲ್ಲಿ ಘೋಷಿಸಿಕೊಂಡು ಬಂದಿರುವ ಈ ಪುರುಷಪ್ರಧಾನ ಮೌಲ್ಯಗಳು ಮಹಿಳೆಯರ ಹಕ್ಕಿನ ವಿಷಯ ಬಂದಾಗ ಪ್ರಕಟಗೊಳ್ಳುತ್ತವೆ. ಇತ್ತೀಚೆಗೆ ಮಹಿಳೆಯರ ಬಗ್ಗೆ ಮುಖ್ಯ ನ್ಯಾಯಮೂರ್ತಿ ಸಿರಿಯಾಕ್ ಜೋಸೆಫ್ ಮಾಡಿದ ಕಾಮೆಂಟ್‌ಗಳು ಅದಕ್ಕೆ ಒಂದು ನಿದರ್ಶನ.

ಅದರ ಬಗ್ಗೆ ಒಂದು ವಿಡಂಬನಾತ್ಮಕ ಬರಹವನ್ನು ಹೈಕೋರ್ಟ್ ವಕೀಲೆ ಶೀಲಾ ಅವರು ಬರೆದಿದ್ದಾರೆ.

ಕಲಾ: ಮಾರ್ಚ್ 8 ಬರುತ್ತಿದೆ. ಹೆಂಗಸರ ಸಂಘಟನೆಗಳು, ಗೌರ್ಮೆಂಟ್ ಆಫೀಸರ್ಸ್ ಮುಂತಾದವರು ವರಮಹಾಲಕ್ಷ್ಮಿ ಹಬ್ಬ ಬರುವಂತೆ ತುಂಬಾ ಸಡಗರದಿಂದ ಓಡಾಡುತ್ತಿದ್ದಾರೆ.

ರಾಧ: ಇದೇನು ಹಂಗಂತೀಯಾ? ವರಮಹಾಲಕ್ಷ್ಮಿ ಹಬ್ಬದಲ್ಲಿ ಈಗೀಗ ಎಲ್ಲಾ ಜಾತಿಯವರು ಒಂದೇ ಸಮ ಒಡವೆ ವಸ್ತ್ರ ಉಟ್ಟು, ಹೂವು ಮುಡಿದು ಹಣ್ಣು ತಿಂಡಿ ಹಂಚಿದರೆ ತಪ್ಪೇ? ಬೆಳ್ಳಿ ದೇವರು ಅಥವಾ ತೆಂಗಿನಕಾಯಿಗೆ ಅಲಂಕಾರ ಮಾಡಿ ಮುತ್ತೈದೆಯರನ್ನ, ಕನ್ಯೆಯರನ್ನ ಕರೆದರೆ ತಪ್ಪೆ?

ಹಸೀನ: ಅಯ್ಯೋ ಇದೇನಿದು? ಮಾರ್ಚ್ 8ರ ಬಗ್ಗೆ ಹೇಳುತ್ತೀರಾ ಅಂದರೆ ವರಮಹಾಲಕ್ಷ್ಮಿ ಹಬ್ಬದ ಬಗ್ಗೆ ಹೇಳುತ್ತಿದ್ದೀರಲ್ಲ.

ಕಲಾ: ಆಯ್ತಪ್ಪ, ನಾನು ಹೇಳಿದ ಹಾಗೆ ಎಲ್ಲಾ ಗೌರ್ಮೆಂಟ್ ಆಫೀಸರ್ಸ್ ಮತ್ತಿತರರು ನನ್ನನ್ನು ಕರೀತಿದ್ದಾರೆ ಭಾಷಣ ಮಾಡೋದಕ್ಕೆ.

ಸೂಸನ್: ಓ ಹೌದ?

ಕಲಾ: ಒಂದು ಫೆಮಿನಿಸ್ಟ್ ಆಗಿದ್ದರೂ ಕನ್ನಡದಲ್ಲಿ ಮಾತಾಡುತ್ತೀನಿ. ಗಂಡಸರ ವಿರೋಧಿಯೂ ಅಲ್ಲ, ಆ ಕಾರಣದಿಂದ ಹೆಚ್ಚಾಗಿ ಕತೆ ಬರುತ್ತೆ.

ಹಸೀನ: ಪರವಾಗಿಲ್ಲಪ್ಪ, ನಾನು ನಿನ್ನ ಜೊತೆ ಬರಲಾ?

ಕಲಾ: ಯಾಕೆ ಕೇಳುತ್ತೀರಾ. ನಮ್ಮ ಚೀಫ್ ಜಸ್ಟೀಸ್ ಮತ್ತು ವುಮೆನ್ ಅಂಡ್ ಚೈಲ್ಡ್ ಸೆಕ್ರೆಟರಿ ನನಗೆ ಕರೆ ಕಳಿಸಿದ್ದಾರೆ.

ಸೂಸನ್: ಓ ಹಾಗೋ?

ಕಲಾ: ಹೌದು. ಅವತ್ತು ನಾವೆಲ್ಲಾ ವಿಧಾನಸೌಧದಿಂದ ಎಂ.ಜಿ. ರೋಡ್‌ವರೆಗೆ ಮಾರ್ಚ್ ಮಾಡುತ್ತೀವಿ.

ವಿಡಂಬನೆ

ರಾಧ: ಏನಕ್ಕೆ?

ಹಸೀನಾ: ಹೆಂಗಸರ ಹಕ್ಕಿಗಾಗಿ.

ರಾಧಾ: ಅಲ್ಲಾ ಅದೇ ಚೀಫ್ ಜಸ್ಟೀಸ್ ಚರ್ಚ್‌ಲ್ಲಿ, ದೇವರ ಬದಲು ಹೆಂಗಸರನ್ನು ಧ್ಯಾನಿಸ್ತೇನೆ ಅಂದಿದ್ದಾರಲ್ಲಾ?

ಕಲಾ: ಹೌದು ಹೌದು. ಹೆಂಗಸರ ಮೇಲಿರುವ ಕಾಳಜಿಯಿಂದ ಹಂಗಂದ್ರಂತೆ. ಎಲ್ಲಾ ಹೆಣ್ಣು ಮಕ್ಕಳೂ ಅವರ ಮಕ್ಳಂತೆ.

ರಾಧ: ಅಯ್ಯೋ ಪಾಪ ಗಂಡು ಮಕ್ಕೆಲ್ಲಾ ಅವರ ಮಕ್ಕಳಲ್ಲವಂತಾ?

ಹಸೀನ: ನನಗಂತೂ ಏನೂ ಅರ್ಥ ಆಗ್ತಿಲ್ಲ, ಮಾರ್ಚ್ 8 ಕ್ಕೆ ಸಡಗರ ಯಾಕೆ?



ಕಲಾ: ಕೆಲವು ಎಕ್ಸಿಕ್ಯೂಟಿವ್ಸ್ ಮತ್ತು ಇಂಜನಿಯರ್ಸ್ ಸೆಂಚುರಿ ಕ್ಲಬ್‌ನಲ್ಲಿ ಮಹಿಳೆಯರ ದಿನ ಆಚರಿಸುತ್ತಿದ್ದಾರಂತೆ. ಅಲ್ಲಿ ಎಂಟ್ರೆನ್ಸ್ ಬರೀ ಸೂಪರ್‌ವೈಸರ್ಸ್, ಮ್ಯಾನೇಜರ್ಸ್, ಲಾಯರ್ಸ್, ಡಾಕ್ಟರ್ಸ್‌ಗಳಿಗೆ ಮಾತ್ರವಂತೆ. ಅಲ್ಲಿ ಎಲ್ಲ ಹೆಂಗಸರಿಗೆ ಪ್ರವೇಶ ಇಲ್ಲ.

ರಾಧ: ಮತ್ತೆ ವುಮೆನ್ಸ್ ಡೇ ಯಾಕಂತೆ?

ಕಲಾ: ಅಯ್ಯೋ ಅದು ಇಂಟರ್‌ನ್ಯಾಷನಲ್ ವುಮೆನ್ಸ್ ಡೇ ಕಣೇ. ಯುನೈಟೆಡ್ ನೇಷನ್ಸ್ ಅದನ್ನು ರೆಕಗ್ನೈಸ್ ಮಾಡಿದೆ.

ಸೂಸನ್: ಇದು potato year ಅಥವಾ ಡಿಕೇಡ್ ಅಂತಾರಲ್ಲಾ ಹಾಗಾ?

ಕಲಾ: ಯಾಕೋ ನಮ್ಮ ಗುಂಪೇ ಸರಿ ಇಲ್ಲ, ಎಲ್ಲರೂ ವುಮೆನ್ಸ್ ಡೇ ಆಚರಿಸಿದ್ರೆ, ನೀವು potato ಬಗ್ಗೆ ಮಾತ್ನಾಡ್ತೀರಾ.

ಮುಂದುವರೆದ ಗೂಂಡಾ ಗುರು ವಾದಿರಾಜನ ಪದ್ಧತಿ

ಫೆ. 20ರ "....ಮತ್ತು ಶಿವಸೇನೆಯ ಒಂದು ಬರ್ಡ್ ಫ್ಲೂ" ಕ್ಲಿಪ್ಪಿಂಗ್‌ನ್ನು ಓದಿ ಇದನ್ನು ಬರೆಯುತ್ತಿದ್ದೇನೆ.

ಸಮಾಜದ ಅಂಕು-ಡೊಂಕುಗಳನ್ನು ಜನರಿಗೆ ಬಿಚ್ಚಿತೋರುವ ಒಬ್ಬ ಅತ್ಯುತ್ತಮ ವ್ಯಂಗ್ಯಚಿತ್ರಕಾರನಾಗ ಬೇಕಿದ್ದ ಬಾಳಾಠಾಕ್ರೆ ಸ್ವತಃ ಸಮಾಜದೆದುರಿಗೆ ಮಹಾ ಡೊಂಕೇಶನಾಗಿ ಕಂಡುಬಂದದ್ದು ನಮ್ಮ ಸಾಮಾಜಿಕ-ರಾಜಕೀಯ ವ್ಯಂಗ್ಯಗಳಲ್ಲೊಂದು (ಆತ ಒಬ್ಬ ಅತ್ಯುತ್ತಮ cortoonist ಆಗಿದ್ದನೆಂಬುದರಲ್ಲಿ ಎರಡು ಮಾತಿಲ್ಲ)


ಜನಾಂಗವಾದಿ 'ಹಿಟ್ಲರನ ಆತ್ಮಕಥೆ ಮೇನ್ ಕೇಂಫ್ ನನಗೆ ಮಾದರಿ' ಎಂದು ಹೇಳಿಕೊಳ್ಳುವ ಈತ ಭಾರೀ ಭದ್ರತಾ ವ್ಯವಸ್ಥೆಗೊಳಗೆ ಅಡಗಿ ಕುಳಿತೇ ತನ್ನ ವಿಧ್ವಂಸಕ ಹಾಗೂ ವಿಭಜನಾವಾದಗಳಿಗೆ ತನ್ನ 'ಸಾಮ್ನಾ'ದ ಮೂಲಕ ಕುಮ್ಮಕ್ಕು ನೀಡುತ್ತಲೇ ಇರುತ್ತಾನೆ. ಫಿರೋಜ್‌ಷಾ ಕೋಟ್ಲಾ ಪಿಚ್ ಅಗೆಯುವುದರಿಂದ ಹಿಡಿದು ಶಿವಾಜಿ ಬಗ್ಗೆ ಅವಹೇಳನಕಾರಿಯಾಗಿ ಬರೆಯಲಾಗಿದೆ ಎಂದು ಐತಿಹಾಸಿಕ ಲೈಬ್ರರಿಯನ್ನು ಧ್ವಂಸಗೊಳಿಸುವ ತನಕ ಈತನ ಶಿವಸೈನಿಕರ ಉಪಟಳಕ್ಕೆಲ್ಲ ಈತನೇ ರೂವಾರಿ ಆದರೂ ಈತ ಕಾನೂನಿಗೆ ಅತೀತ. ಇದು ಕೇವಲ ಭಾರತದಲ್ಲಿ ಮಾತ್ರ ಕಾಣಸಿಗುವಂತಾದ್ದು.

ತೊಗಾಡಿಯಾ, ಮುತಾಲಿಕ್, ಮೋದಿಯಂತಹ ವಿಭಜನಾವಾದಿಗಳಿಗೆ ಮೂಲತಃ ಈತನೇ ಡಾಗ್ (Dog)ಫಾದರ್ ಇದ್ದಂತೆ ಕೆಲಸದ ಪ್ರಯುಕ್ತ ವಲಸೆ ಹೋಗಿ ಮುಂಬಯಿಯಲ್ಲಿ ತುಂಬಿರುವ ದ.ಕ. (ಅವಿಭಜಿತ) ಜಿಲ್ಲಾ ಕನ್ನಡಿಗರ ಅರ್ಥಾತ್ "ಮದ್ರಾಸಿ"ಗಳ ವಿರುದ್ಧ ಬಡಿದಾಡಿ ಓಡಿಸುವ ಸಲುವಾಗೇ ಈತನ ಕುಖ್ಯಾತ ಶಿವಸೇನೆ ಹುಟ್ಟಿ ಕೊಂಡಿತ್ತು, ಇದೀಗ ಇದೇ ವಿಭಜನಾವಾದದ ಸಿದ್ಧಾಂತವನ್ನೇ ಆತನ ತಮ್ಮನ ಮಗ ರಾಜ್ ಠಾಕ್ರೆ ಉತ್ತರ ಪ್ರದೇಶಿಯರ ವಿರುದ್ಧ ಪ್ರಯೋಗ ಕ್ಕಿಳಿಸಿ ಮಹಾರಾಷ್ಟ್ರ ಹಾಗೂ ಇಡೀ ದೇಶದ ನೆಮ್ಮದಿಗೆ ಕಲ್ಲು ಹಾಕಿದ್ದಾನೆ. ತಮಾಷೆಯ ಸಂಗತಿ ಯಾವುದೆಂದರೆ, ದೇಶದ ಐಕ್ಯತೆಗೆ ಮಾರಕವಾದ ತತ್ವಸಿದ್ಧಾಂತಗಳ ಪ್ರತಿಪಾದಕರಾದ ಈ ಠಕ್ಕರ್ ಸಂತಾನಗಳಿಂದ ಅಥವಾ ಅವರ ಅನುಯಾಯಿಗಳೆನಿಸಿಕೊಂಡವರಿಂದ ನಾವು ಹಿಂದೂಗಳ ಹಾಗೂ ಭಾರತದ ಏಕತೆಯ ಬಗ್ಗೆ ಮಾತುಗಳನ್ನು, ಉಪದೇಶಗಳನ್ನು ಕೇಳಿಸಿಕೊಳ್ಳಬೇಕಾದ ದೌರ್ಭಾಗ್ಯ ಬಂದಿರುವುದು.

ಮೊನ್ನೆ ನಮ್ಮ ಪೇಜಾವರರು ಯಾದವರ ಮೊದಲ ಸ್ವಾಮಿಯ ಪಟ್ಟಾಭಿಷೇಕದಲ್ಲಿ ಪಾಲ್ಗೊಂಡು ಅವರುಗಳನ್ನು ಪುಸಲಾಯಿಸುವ ಮಾತುಗಳನ್ನಾಡಿದ್ದರು. ಅಲ್ಲಾ ಸ್ವಾಮಿ, ತಮ್ಮ ಜಾತಿಯ ಬ್ರಾಹ್ಮಣ ಸ್ವಾಮಿಯೊಬ್ಬನನ್ನು ಕ್ಷುಲ್ಲಕ ಕಾರಣಗಳಿಗಾಗಿ ಅಸ್ಪೃಶ್ಯನಂತೆ ಕಂಡು ರಾದ್ಧಾಂತ ಸೃಷ್ಟಿಸಿದ್ದ ನೀವು ಇದೀಗ ಹಿಂದುಳಿದ ಶೂದ್ರ ಯಾದವರಿಗೆ ದೀಕ್ಷೆ ಕೊಡುವ ಮಾತಾಡುತ್ತಿದ್ದೀರಲ್ಲ? ನಿಮ್ಮ ಈ ಸೋಗಲಾಡಿತನವನ್ನು ನೋಡಿ ಈ ಯದು ಕುಲನಂದನ ಕೃಷ್ಣನಿಗೇ ವಾಕರಿಕೆ ಶುರು ವಿಟ್ಟುಕೊಂಡ ಬಗ್ಗೆ ಸುದ್ದಿ ಬಂದಿದೆಯಲ್ಲ.

-ರವಿ ಪುತ್ತೂರ, ದ.ಕ.

ಶೂದ್ರ ಯಾದವ ಮಠದಲ್ಲಿ ಪೇಜಾವರರ ಗ್ಯಾಂಗ್‌ನ ವೈದಿಕ ದಬ್ಬಾಳಿಕೆ (ಲಂಕೇಶ್ 27.2.08) ಇದು ಅವರ ಪೂರ್ವಜರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿದೆ ಅಷ್ಟೇ. 400 ವರ್ಷಗಳ ಹಿಂದೆ ಇದೇ ಉಡುಪಿಯ ಮಠಾಧೀಶರಾಗಿದ್ದ ವಾದಿರಾಜರು ಇದನ್ನೇ ಇನ್ನೂ ಭಯಂಕರವಾಗಿ ಮಾಡಿ ಮೇಲ್ಪಂಕ್ತಿ ಹಾಕಿಕೊಟ್ಟಿದ್ದರು. ಮಧ್ವಾಚಾರ್ಯರು ದ್ವೈತ-ಮಾಧ್ವ ಪಂಥವನ್ನು ಸ್ಥಾಪಿಸಿದರೂ ಅವರಿಗೆ ಈ ಹೊಸ ಪಂಥವನ್ನು ಅಷ್ಟಾಗಿ ಪ್ರಚುರಪಡಿಸುವುದು ಸಾಧ್ಯವಾಗಿರ



ಲಿಲ್ಲ, ಕಾರಣ ಆಗ ತುಳುನಾಡು ಇಡೀ ಶೈವ ಸಂಸ್ಕೃತಿಯ ತೊಟ್ಟಿಲಾಗಿತ್ತು, ಈ ತುಳು ಪ್ರದೇಶದಲ್ಲಿ ಹಳ್ಳಿ-ಹಳ್ಳಿಯಲ್ಲಿ ಶಿವ, ದುರ್ಗೆ, ಸುಬ್ರಹ್ಮಣ್ಯ ಈ ಶೈವ ದೇವಸ್ಥಾನಗಳು ಇದ್ದು ಈ ಎಲ್ಲಾ ದೇವಸ್ಥಾನಗಳಲ್ಲೂ ಸಂಪ್ರದಾಯದಂತೆ ಶೈವರೇ ಪುರೋಹಿತರಾಗಿದ್ದರು. ಆದರೆ ಇಂದು ಪ್ರಸಿದ್ಧ ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ, ಕಟೀಲು, ಕದ್ರಿ ಸಹಿತ ಎಲ್ಲಾ ಪ್ರಸಿದ್ಧ ಶೈವ ದೇವಸ್ಥಾನಗಳಲ್ಲಿ ಪುರೋಹಿತರು ವೈಷ್ಣವರು! ಈಗ ತುಳುನಾಡಿನ 80% ಶೈವ ದೇವಸ್ಥಾನಗಳಲ್ಲಿ ಪುರೋಹಿತರು ವೈಷ್ಣವರು, ಪೂಜೆ ನಡೆಯುವುದು ವೈಷ್ಣವ ಪದ್ಧತಿಯಲ್ಲಿ. ಇಷ್ಟೇ ಅಲ್ಲ ಧರ್ಮಸ್ಥಳ, ಕಟೀಲು ಸಹಿತ ಎಲ್ಲಾ ಶೈಲ ದೇವಸ್ಥಾನಗಳಲ್ಲಿ ವೈಷ್ಣವ ಪುರೋಹಿತರು ತಮ್ಮ ಸಾಲಿಗ್ರಾಮವನ್ನು ಮೂಲದೇವರ ಮೂರ್ತಿಯ ಮುಂದಿಟ್ಟು ಪ್ರಥಮ ಪ್ರಾಶಸ್ತ್ಯದ "ಅಗ್ರಪೂಜೆ" ಈ ಕೃಷ್ಣ ಸಾಲಿಗ್ರಾಮಕ್ಕೆ ಅರ್ಪಿಸಿ ನಂತರದ ಪೂಜೆ ಮೂಲ ಶೈವ ದೇವಮೂರ್ತಿಗೆ ಅರ್ಪಿಸಲಾಗುತ್ತದೆ. (ಅಂದರೆ ದೇವರನ್ನೂ ಪೂಜೆಯಲ್ಲಿ ಮೋಸ ಮಾಡಬಹುದೆಂಬುದು ಈ ಪುರೋಹಿತರ ನಂಬಿಕೆ.) ಈ ಎಲ್ಲಾ ಧಾರ್ಮಿಕ ವಂಚನೆಯ ಮೂಲ ಹೋಗಿ ಮುಟ್ಟುವುದು ವಾದಿರಾಜರಲ್ಲಿ. 400 ವರ್ಷಗಳ ಹಿಂದೆ ವಾದಿರಾಜರು ಉಡುಪಿ ಮಠಾಧೀಶರಾಗಿದ್ದ ಸಮಯದಲ್ಲಿ ಅವರು ತಮ್ಮ ಪುಂಡ ಶಿಷ್ಯರ ಪಡೆ ಕಟ್ಟಿಕೊಂಡು ತುಳುನಾಡಿನ ಶೈವ ದೇವಸ್ಥಾನಗಳಿಗೆಲ್ಲಾ ನುಗ್ಗಿ ಅಲ್ಲಿಯ ಪುರೋಹಿತರನ್ನು ಮಾಧ್ವ ಮತಕ್ಕೆ ಬಲಾತ್ಕಾರವಾಗಿ ಮತಾಂತರಿಸಿಯೋ ಅಥವಾ ಮತಾಂತರಕ್ಕೆ ಒಪ್ಪದಿದ್ದವರನ್ನು ಸರಿಸಿ ತಮ್ಮ ಪುಂಡ ಶಿಷ್ಯರಲ್ಲಿ ಒಬ್ಬನನ್ನು ಅಲ್ಲಿ ಪ್ರತಿಷ್ಠಾಪಿಸಿಯೇ, ಅವುಗಳ ಮೇಲೆ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿದರು. ಶೈವ ದೇವಸ್ಥಾನಗಳನ್ನು ವೈಷ್ಣವರ ಹತೋಟಿಗೆ ತಂದು ಅಲ್ಲಿ ಸಾಲಿಗ್ರಾಮವನ್ನು ಪ್ರತಿಷ್ಠಾಪಿಸಿ ದೇವರನ್ನು ಮೋಸ ಪಡಿಸುವ ವೈಷ್ಣವ ಪದ್ಧತಿಗೆ ನಾಂದಿ ಹಾಡಿದ್ದು ಇದೇ "ಗೂಂಡಾ- ಗುರು" ವಾದಿರಾಜರು ಎಂದು ತುಳುನಾಡಿನ ಇತಿಹಾಸ ಹೇಳುತ್ತದೆ. ಅದರ ಪರಿಣಾಮವೇ ಇಂದು ಭಾರತದಲ್ಲಿ ಬೇರೆಡೆ ಎಲ್ಲಿಯೂ ಇಲ್ಲದ ಸ್ಥಿತಿ ತುಳುನಾಡಿನಲ್ಲಿದೆ. ಅಂದರೆ ಎಲ್ಲಾ ಶೈವ ದೇವಸ್ಥಾನಗಳಲ್ಲಿ ವೈಷ್ಣವ ಪುರೋಹಿತ, ವೈಷ್ಣವ ಪದ್ಧತಿಯಲ್ಲಿ ಪೂಜೆ ಹಾಗೂ ಮೂಲದೇವರಿಗಿಂತ ಮೊದಲು ಪುರೋಹಿತರ ಮನೆಯ ಸಾಲಿಗ್ರಾಮಕ್ಕೆ

ತ್ರೆ ಹೊಗಳಿಕೆ

ಅಗ್ರಪೂಜೆ. ವಾದಿರಾಜರು ಶತಮಾನಗಳ ಹಿಂದೆ ಮಾಡಿದ್ದನ್ನೇ ಅವರದ್ದೇ ಪೀಳಿಗೆಯ ಪೇಜಾವರರು ಚಿತ್ರದುರ್ಗದ ಯಾದವರ ಮಠದಲ್ಲಿ ಹಾಗೂ ಕುರುಬರ ಕಾಗಿನೆಲೆ ಮಠದಲ್ಲಿ ಪುನರಾವರ್ತಿಸಿದ್ದು ಅಷ್ಟೇ. ಉಡುಪಿಯವರು ತಮ್ಮ ಪರಂಪರೆಯನ್ನು ಕಾಪಾಡಿಕೊಳ್ಳದಿದ್ದರೆ ಹೇಗೆ?


ವೀರಶೈವ-ಲಿಂಗಾಯತ ಧರ್ಮವು ಕನ್ನಡ ಭಾಷಿತ ಪ್ರದೇಶದ ಮೂಲೆ, ಮೂಲೆಗೆ ಹರಡಿದರೂ ಅದೇಕೆ ಕನ್ನಡನಾಡಿನ ಭಾಗವೇ ಆಗಿದ್ದ ದ.ಕ., ಉಡುಪಿ ಜಿಲ್ಲೆಗೆ ಹರಡಲಿಲ್ಲ! ನೆರೆಯ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಜಿಲ್ಲೆವರೆಗೆ ಹರಡಿದ ಬಸವಧರ್ಮವು ಸಹ್ಯಾದ್ರಿಯಿಂದ ಕೆಲವೇ ಮೇಲು ಕೆಳಗಿಳಿದು ಕರಾವಳಿಯಲ್ಲೇಕೆ ಹರಡಲಿಲ್ಲ? ಎಂಬ ಪ್ರಶ್ನೆ ಹಲವು ಸಮಾಜತಜ್ಞರನ್ನು ಕಾಡುತ್ತಿದೆ. ನಿಜವೇನೆಂದರೆ, ವೀರಶೈವರಾಗಿದ್ದ ಕೆಳದಿ ಮತ್ತು ಇಕ್ಕೇರಿ ನಾಯಕರ ಆಡಳಿತಕ್ಕೆ 200 ವರ್ಷಕ್ಕೂ ಹೆಚ್ಚುಕಾಲ ಒಳಪಟ್ಟಿದ್ದ ದ.ಕ.-ಉಡುಪಿ ಜಿಲ್ಲೆಗಳಲ್ಲೂ ವೀರಶೈವ ಧರ್ಮ ಹರಡಿತ್ತು, ಆದರೆ ನಂತರ ವಾದಿರಾಜರು ನಡೆಸಿದ ಧಾರ್ಮಿಕ ಉತ್ಪಾತದಿಂದಾಗಿ ಮೇಲ್ವರ್ಗದ ವೀರಶೈವರು ಬಲವಂತದಿಂದ ಮಾಧ್ವಮತಸ್ಥರಾದರೆ, ಕೃಷಿಕರಾಗಿದ್ದ ವೀರಶೈವರು ಬಂಟ ಜಾತಿಗಳಲ್ಲಿ ಸಮ್ಮಿಳಿತವಾಗಿರಬೇಕೆಂದು ಭಾವಿಸಲಾಗುತ್ತದೆ. ಇದೇ ಕಾರಣಕ್ಕಿರ ಬಹುದು, ಬಂಟ-ನಾಡವ ಜಾತಿಯಲ್ಲಿ ಇಂದಿಗೂ ಮನೆಯ ಹಿರಿಯ ದಿನಾ ಬೆಳಗಾಗೆದ್ದು ವಿಭೂತಿ ಬಳಿದು ಕೊಂಡು ಮೊಟ್ಟ ಮೊದಲು ಶಿವ ಪೂಜೆ ಮಾಡಬೇಕು ಹಾಗೂ ಎಲ್ಲಾ ಕಾಲಕ್ಕೂ ಅವನೊಬ್ಬ ಸಸ್ಯಾಹಾರಿ ಆಗಿಯೇ ಇರಬೇಕು ಎಂಬ ನಿಯಮ ಬಹಳಷ್ಟು ಕೃಷಿಕ ಕುಟುಂಬಗಳಲ್ಲಿ ಇಂದಿಗೂ ಪಾಲಿಸಲಾಗುತ್ತಿರಬಹುದು.

-ಪ್ರವೀಣ್ ಎಸ್. ಶೆಟ್ಟಿ
ಮಂಗಳೂರು

...ಘಗಳ ಮಧ್ಯೆ ಕ್ಯಾಸೆಟ್ ರಿಲೀಸ್

...ನ್ನಡ ಚಿತ್ರರಂಗದಲ್ಲಿ ಈಗ ಬಹಳಷ್ಟು ಜನ ...ಸ ಪ್ರಯೋಗಗಳಿಗೆ ಧೈರ್ಯವಾಗಿ ಕೈ ...ತ್ತಿದ್ದಾರೆ.

...ದಾಹರಣೆಗೆ, ಕ್ಯಾಸೆಟ್ ರಿಲೀಸ್ ಸಮಾರಂಭ ... ಕೀಡಾಂಗಣದಲ್ಲಿ ಹಾಡು, ಕುಣಿತದೊಂದಿಗೆ ...ದ್ದರಿಯಾಗಿ ನಡೆಸುತ್ತಿದ್ದರು. ಆದರೆ ಮೊನ್ನೆ ...ಬಾರೇ ತುಂಗೆಬಾರೇ' ತಂಡದವರು ಉದಯ ...ಯ ಕಾರ್ಯಕ್ರಮವೊಂದರಲ್ಲಿ ತಮ್ಮ ಚಿತ್ರದ ...ಟ್ ಬಿಡುಗಡೆ ಮಾಡಿದರು. ಅಂದು ಈ ಕಾರ್ಯಕ್ರಮವನ್ನು



ವೀಕ್ಷಿಸುತ್ತಿದ್ದ ಪ್ರೇಕ್ಷಕರಿಗೆ ಫೋನ್ ಮಾಡಿ ಮಾತನಾಡುವ, ಪ್ರಶ್ನೆ ಕೇಳುವ ಅವಕಾಶವೂ ಇತ್ತು. ಅಷ್ಟೇ ಅಲ್ಲ, ಕೆಲವರಿಗೆ ಕಾರ್ಯಕ್ರಮದ ನಂತರ ಚಿನ್ನ ಮತ್ತು ಬೆಳ್ಳಿ ನಾಣ್ಯಗಳನ್ನು ಬಹುಮಾನವಾಗಿ ...ದರು. ಈ ಹೊಸ ಯೋಜನೆಯಿಂದ ಎಲ್ಲರಿಗೂ ... ಟಿವಿ ಚಾನೆಲ್‌ನವರಿಗೆ ಒಂದು ಪುಕ್ಕಟೆ ...ರ್ಯಕ್ರಮ, ಚಿತ್ರತಂಡಕ್ಕೆ ಬಿಟ್ಟಿ ಜಾಹೀರಾತು, ...ಕರಿಗೆ ಬಹುಮಾನಗಳು.... ಹೀಗೆ ಮೂವರೂ ...ಯೋ ಹ್ಯಾಪಿ. ಹೇಗಿದೆ '...ಬಾರೆ' ತಂಡದ ...ತ್ಕಾರ?!

ಈಗ ಅವರಿಗಿಂತಲೂ ವಿಭಿನ್ನವಾಗಿ ಕ್ಯಾಸೆಟ್ ...ಲೀಸ್ ಮಾಡಲು 'ಮೇಘವೇ ಮೇಘವೇ' ...ತಂಡ ಸನ್ನದ್ಧಗೊಂಡಿದೆ. ನಾಗೇಂದ್ರಪ್ರಸಾದ್ ...ಶನದ ಈ ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭ ...ರ್ಚ್ 7ರಂದು ಮೇಘಗಳ ನಡುವೆಯೇ ...ಯಲಿದೆಯಂತೆ. ಅಂದರೆ ಈ ಸಮಾರಂಭಕ್ಕಾಗಿ ...ತ್ರ ನಿರ್ಮಾಪಕರು ನೂರೈವತ್ತು ಜನ ಕುಳಿತು ...ಬಹುದಾದ ಒಂದು ವಿಮಾನವನ್ನು ಚಾರ್ಟರ್ ...ಡಿಗೆ) ಮಾಡಿದ್ದಾರೆ. ಅಂದು ಆ ವಿಮಾನದಲ್ಲಿ ...ಕರ್ತರು ಒಂದು ಗಂಟೆಗಳ ಕಾಲ ಆಕಾಶದಲ್ಲಿ ...ರಾಡುತ್ತಿರುವಾಗಲೇ ಕ್ಯಾಸೆಟ್ ರಿಲೀಸ್ ಸಮಾರಂಭ ...ಯಲಿದೆಯಂತೆ.

ಆದರೆ ಈ ಯೋಜನೆಯನ್ನು ಕ್ರಿಯಾಶೀಲತೆ ...ಬೇಕೋ ಹುಚ್ಚುತನ ಎನ್ನಬೇಕೋ ಗೊತ್ತಾಗುತ್ತಿಲ್ಲ. ...ವರೂ ಇಂತಹ ಒಂದು ಸಾಹಸಕ್ಕಾಗಿ ಲಕ್ಷಾಂತರ ...ಪಾಯಿ ಸುರಿಯುವ ಚಿತ್ರದ ನಿರ್ಮಾಪಕನ ...ರ್ಯವನ್ನು ಮೆಚ್ಚೋಣ. ಮೂರು ವರ್ಷದ ಹಿಂದೆ ...ಡ್ ರೋಮಿಯೋ ಚಿತ್ರತಂಡ ಕೆ.ಜಿ. ರಸ್ತೆಯಲ್ಲೇ ...ಸೆಟ್ ರಿಲೀಸ್ ಮಾಡಿ, ಡಬ್ಬಲ್ ಡೆಕ್ಕರ್ ಬಸ್‌ನಲ್ಲಿ ...ಕಾಗೋಷ್ಠಿ ನಡೆಸಿದ್ದರು.

ಈಗ ಕನ್ನಡ ಚಿತ್ರರಂಗ ಈ ರೀತಿಯಲ್ಲಾದರೂ ...ಡ್‌ನಿಂದ ಬಡ್ತಿ ಪಡೆದು ಆಕಾಶದೆತ್ತರಕ್ಕೆ ಹಾರುತಿದೆ ...ವಾದರೂ ಸಂತೋಷ ಪಡಬಹುದು.


...ಾಪತ್ತೆಯಾದ ...ಆದಿತ್ಯ!



ಆದಿತ್ಯ ಎಂಬ ನಟ ಈಗ ಗಾಂಧಿನಗರದಲ್ಲಿ ...ವಾಸವಾಗುತ್ತಿರುವುದು ಆಶ್ಚರ್ಯವೆನಿಸುತ್ತಿದೆ. ...ಕೆಂದರೆ ಆರಡಿ ಎತ್ತರದ ಈ ಸುಂದರಾಂಗ ಈಗ ...ದೇ ಒಂದು ಚಿತ್ರದಲ್ಲಿ ಕೂಡಾ ನಟಿಸುತ್ತಿಲ್ಲ. ...ಯಕರೇ ವಿಜೃಂಭಿಸುತ್ತಿರುವ ಈ ಪರ್ವಕಾಲದಲ್ಲಿ ... ಹುಡುಗನಿಗೆ ಮಾತ್ರ ಯಾಕೆ ಸಿನಿಮಾಗಳು ...ಬರುವುದು ಅಚ್ಚರಿ ಮೂಡಿಸುತ್ತದೆ.

ಕಳೆದ ವರ್ಷದ ಕೊನೆಯಲ್ಲಿ, ಈತ ಸಂಕ್ರಾಂತಿ ...ನ ದಿನದಂದೇ ತನ್ನ ಐದು ಚಿತ್ರಗಳು ಸೆಟ್ಟೇರಲಿವೆ ...ದು ಹೇಳಿದ್ದ. ಆದರೆ ಸಂಕ್ರಾಂತಿ ದಿನದಂದು ...ರ ಒಂದೇ ಒಂದು ಚಿತ್ರವೂ ಸೆಟ್ಟೇರಲಿಲ್ಲ. ಈಗ ...ಕ್ರಾಂತಿ ಕಳೆದು ಯುಗಾದಿ ಬರುತ್ತಿದ್ದರೂ ಆತನ ...ದ ಸಿನಿಸುದ್ದಿ ಬದಲಿಗೆ ಬರೀ ಕೊ... ಸುದ್ದಿಗಳೇ ...ತ್ತಿವೆ. ಆದಷ್ಟು ಬೇಗ ಆತ ಈ ... ...ಕೊಳ್ಳಲಿ...

ಪರಮ | ಕುಡುಕನೊಬ್ಬನ | ವಿಕ್ಷಿಪ್ತ | ಲೋಕ
ಇಂತಿ ನಿನ್ನ ಪ್ರೀತಿಯ



> ಎಲ್ಲಾ ಸರಿಯಿದ್ದರೂ ಚಿತ್ರದ ನಾಯಕನ ಕುಡುಕನ ಪಾತ್ರವೇ ಚಿತ್ರಕ್ಕೆ ವಿಲನ್ ಆಗಿ ಪರಿಣಮಿಸಿದೆ. ಕಂಠಪೂರ್ತಿ ಕುಡಿದು ಸಿನಿಮಾ ನೋಡಲು ಬಂದವರ ನಿಶೆ ಕೂಡ ಇಳಿದುಹೋಗುವಂತೆ ನಾಯಕ ತೆರೆಯ ಮೇಲೆ ಕುಡಿಯುತ್ತಾನೆ. ಚಿತ್ರದ ಆರಂಭದ ಸ್ವಲ್ಪ ಸಮಯ ಹೊರ ತುಪಡಿಸಿದರೆ, ಅಂತ್ಯದವರೆಗೂ ನಡೆಯುವ ನಾಯಕನ ಕುಡಿತವನ್ನು ಜೀರ್ಣಸಿಕೊಳ್ಳುವಲ್ಲಿ ಪ್ರೇಕ್ಷಕ ವಿಫಲನಾಗುತ್ತಾನೆ.

ಚಿತ್ರದ ನಾಯಕ ರಾಜೀವ (ಶ್ರೀನಗರ ಕಿಟ್ಟಿ) ಚಿತ್ರಕಲಾವಿದ. ವಿಕ್ಟೋರಿಯಾ ಆಸ್ಪತ್ರೆಗೆ ಬರುವ ಅನಾಥ ಶವಗಳನ್ನು ಈತನ ಸೋದರ ಮಾವ ರಂಗಾಯಣ ರಘು ಅಂತಿಮ ಸಂಸ್ಕಾರ ಮಾಡುತ್ತಿರುತ್ತಾನೆ. ಹೀಗೆ ಈತ ಸಂಸ್ಕಾರ ಮಾಡುವ ಹೆಣಗಳ ಚಿತ್ರ ಬಿಡಿಸುವುದು ನಾಯಕನ ಪ್ರವೃತ್ತಿ.

ಆತನೊಂದಿಗೇ ಚಿತ್ರಕಲೆ ಅಭ್ಯಾಸ ಮಾಡುವ ನಮನಾ ಎಂಬಾಕೆಯನ್ನು ಪ್ರೀತಿಸುತ್ತಿರುತ್ತಾನೆ. ಆಕೆಯೂ ಆತನೊಂದಿಗೆ ಸುತ್ತಾಡಿಕೊಂಡಿರುತ್ತಾಳೆ. ಇವರಿಬ್ಬರೂ ಪ್ರೀತಿಸುತ್ತಿರುವ ವಿಷಯ ಅವಳ ಅಣ್ಣನ ಕಿವಿಗೆ ಬಿದ್ದು ಆತ ರಾಜೀವನನ್ನು ಬೈಯುತ್ತಾನೆ. ಆದರಿಂದ ಕೋಪಗೊಳ್ಳುವ ರಾಜೀವ್ ನಮನಾಳ ಅಣ್ಣನ ಮೇಲೆ ಕೈ ಮಾಡುತ್ತಾನೆ. ನಂತರ ನಮನಾ ಬಂದು ತನ್ನ ಮದುವೆಯ ಕರೆಯೋಲೆಯನ್ನು ತಂದು ರಾಜೀವನ ಕೈಗೆ ಕೊಡುತ್ತಾಳಲ್ಲದೆ ಮದುವೆಗೆ ಬರದಂತೆ ವಿನಂತಿಸುತ್ತಾಳೆ....

ಹೀಗೆ ಮುರಿದುಬಿದ್ದ ಪ್ರೀತಿಯಿಂದ ಹತಾಶನಾಗುವ ರಾಜೀವ್ ಕುಡಿತಕ್ಕೆ ದಾಸನಾಗುತ್ತಾನೆ. ಸಿಕ್ಕಸಿಕ್ಕವರಲ್ಲಿ ದುಡ್ಡು ಕೇಳುತ್ತಾನೆ, ತನ್ನನ್ನು ತಾಯಿಯಂತೆ ಸಲಹುವ ಅತ್ತಿಗೆಯನ್ನು ದುಡ್ಡಿಗಾಗಿ ಸದಾ ಪೀಡಿಸುತ್ತಾನೆ. ಕಂಠಮಟ್ಟ ಕುಡಿದು ತೂರಾಡುತ್ತಾ ಕಂಡಕಂಡಲ್ಲಿ ಬಿದ್ದಿರುತ್ತಾನೆ.

ರಾಜೀವನ ಕುಡಿತದ ಪರಿಯನ್ನು ಕಂಡು ಆತನ ಅಣ್ಣ ಲೆಕ್ಚರರ್ ಕಿಶೋರ್ ಆತನಿಗೊಂದು ಮೂಗು ದಾರ ಹಾಕಿಸಿದರೆ ಎಲ್ಲ ಸರಿಹೋಗುತ್ತದೆ ಎಂದು ಭಾವಿಸಿ ತಂದೆ ತಾಯಿಯಿಲ್ಲದ ಹುಡುಗಿಯೊಬ್ಬಳನ್ನು ತಂದು ಗಂಟು ಹಾಕಿಸುತ್ತಾನೆ. ಅಲ್ಲಿಗೆ ಭಾವನಾಳ ಎಂಟ್ರಿ ಆಗುತ್ತದೆ. ಮದುವೆಯಾದರೂ ಆತ ತನ್ನ ಪ್ರೇಯಸಿಯನ್ನು ಮರೆಯುವುದಿಲ್ಲ. ಮೊದಲ ರಾತ್ರಿಯ ದಿನ ಕಂಠಪೂರ್ತಿ ಕುಡಿದು ಭಾವನಾಳನ್ನು ಎದುರಿಗೆ ಕೂರಿಸಿಕೊಂಡು 'ನಿನ್ನ ಚಿತ್ರ ಬರೆಯುತ್ತೇನೆ' ಎಂದು ಹೇಳಿ ತನ್ನ ಮಾಜಿ ಪ್ರೇಯಸಿ ನಮನಾಳ ಮುಖವನ್ನು ಬಿಡಿಸಿಡುತ್ತಾನೆ.

ಒಂದೇ ಮನೆಯಲ್ಲಿ ಇಟ್ಟುಕೊಂಡರೆ ತಮ್ಮ ಉದ್ಧಾರವಾಗುವುದಿಲ್ಲ ಎಂಬ ಕಾರಣಕ್ಕಾಗಿ ಅಣ್ಣ ಕಿಶೋರ್ ಆತನಿಗಾಗಿ ಪ್ರತ್ಯೇಕ ಮನೆಯೊಂದನ್ನು ಮಾಡಿ ಆತನ ಹೆಂಡತಿಯೊಂದಿಗೆ ಬೇರೆ ಕಳಿಸುತ್ತಾನೆ. ಆಗಲೂ ತಿದ್ದಿಕೊಳ್ಳದ ನಾಯಕ ಯಥಾವತ್ತಾಗಿ ತನ್ನ ಕುಡಿತವನ್ನು ಮುಂದುವರೆಸುತ್ತಾನೆ. ಅಷ್ಟೇಅಲ್ಲದೆ ತನ್ನೊಂದಿಗೆ ಕುಡಿದುಕೊಂಡು ತಿರುಗುವ ಪರೋಡಿ ಪಟಾಲಂನ್ನೂ ತನ್ನ ಮನೆಗೆ ಕರೆತಂದು ಕುಡಿಯತೊಡಗುತ್ತಾನೆ. ಈ ಮಧ್ಯೆ ಇವರಿಗೊಂದು ಮಗುವೂ ಜನಿಸುತ್ತದೆ.

ರಾಜೀವನ ಕುಡಿತದ ಚಾಳಿಯನ್ನು ಕಂಡು ಆತನ ಸ್ನೇಹಿತ ವಾಸ್ನೆ ಬಾಬು ಎಂಬಾತ ಕಿಟ್ಟಿ ಮನೆಯಲ್ಲಿರದ ಸಂದರ್ಭದಲ್ಲಿ ಬಂದು ಬಾಗಿಲು ತಟ್ಟುತ್ತಾನೆ ಮತ್ತು 'ನನ್ನೊಂದಿಗೆ ಸಹಕರಿಸು' ಎಂದು ರಾಜೀವನ ಹೆಂಡತಿಗೆ ಹೇಳುತ್ತಾನೆ. ಕುಪಿತಗೊಂಡ ಭಾವನಾ ಆತನನ್ನು ಉಗಿದು ಅಟ್ಟುತ್ತಾಳೆ. ರಾಜೀವ ಬಂದ ತಕ್ಷಣ ಈ ವಿಷಯವನ್ನು ಆತನ ಕಿವಿಗೆ ಮುಟ್ಟಿಸುತ್ತಾಳೆ. ತನ್ನ ಸ್ನೇಹಿತ ತನ್ನ ಹೆಂಡತಿಗೇ 'ಬುಲಾವ್' ನೀಡಿದ ಎಂಬ ವಿಷಯ ತಿಳಿಯುತ್ತಿದ್ದಂತೆ ಸಿಟ್ಟಿಗೆ ಬಿದ್ದ ರಾಜೀವ ವಾಸ್ನೆ ಬಾಬುವನ್ನು ಸಮಾ ರುಬ್ಬುತ್ತಾನೆ. ಯಾವಾಗಲೂ ಬಾಟಲಿಯೊಂದಿಗೆ ಮನೆಗೆ ಬರುವ ನಾಯಕ ಅಂದು ಮಲ್ಲಿಗೆ ಹೂವಿನೊಂದಿಗೆ ಬಂದು 'ಇನ್ನಾವತ್ತೂ ಕುಡಿಯೊಲ್ಲ' ಎಂದು ಪ್ರಮಾಣ ಮಾಡುತ್ತಾನೆ. ಆದಾದನಂತರ ಸ್ವಲ್ಪದಿನ ನೆಮ್ಮದಿಯ ಜೀವನ ಸಾಗುತ್ತದೆ... ಮಗುವೂ ಬೆಳೆದುನಿಲ್ಲುತ್ತದೆ... ಒಂದು ದಿನ ಭಾವನಾ ಮಹಡಿ ಮೇಲೆ ಒಣಹಾಕಿರುವ ಬಟ್ಟೆಯನ್ನು ತರಲು ಹೋಗುತ್ತಾಳೆ. ಆಗ ವಿದ್ಯುತ್ ತಂತಿ ತಗುಲಿ ಆಕೆ ಸಾಯುತ್ತಾಳೆ. ಎಲ್ಲೆಡೆ ಕತ್ತಲು ಆವರಿಸುತ್ತದೆ. ಅಲ್ಲಿಗೆ ಭಾವನಾ ಚಾಪ್ಟರ್ ಕ್ಲೋಸ್ ಆಗುತ್ತದೆ.

ಹೆಂಡತಿಯನ್ನು ಕಳಕೊಂಡ ನಾಯಕ ತನ್ನ ಕುಡಿತದ ಎರಡನೇ ಇನ್ನಿಂಗ್ಸ್ ಆರಂಭಿಸುತ್ತಾನೆ. ಒಂದು ದಿನ ಆತನ ಮಗಳು ಎಸ್.ಪಿ. ಬಾಲಸುಬ್ರಮಣ್ಯಂರ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲಿ ಸ್ಪರ್ಧಿಸಿ ಗೆಲ್ಲುತ್ತಾಳೆ. ಆಗ ನಿನ್ನ ತಂದೆ ಏನು ಮಾಡುತ್ತಾರೆ ಎಂದು ಆಕೆಯನ್ನು ಕೇಳಿದಾಗ ಆ ಮಗು 'ಪೇಂಟಿಂಗ್ ಮಾಡುತ್ತಾರೆ ಜೊತೆಗೆ ಜ್ಯೂಸ್ ಕುಡೀತಾರೆ' ಎಂದು ತನ್ನ ಅಪ್ಪನ ಪ್ರೊಫೆಷನ್ ಬಗ್ಗೆ ಹೇಳುತ್ತದೆ.. ಇದನ್ನು ಕೇಳಿದ ಎಸ್ಪಿ 'ಹೆಂಡ ಸಾರಾಯಿ ಸಹವಾಸ ಹೆಂಡತಿ ಮಕ್ಕಳ ಉಪವಾಸ' ಎಂಬ ನೀತಿ ಪಾಠವನ್ನು ಹೇಳುತ್ತಾರೆ. ಆಗ ಇನ್ನು ಮುಂದೆ ಕುಡಿಯುವುದಿಲ್ಲ ಎಂದ ಮಗಳಿಗೆ ಮಾತು ಕೊಡುವ ರಾಜೀವ್ ಆಕೆಯೊಂದಿಗೆ ಸೆಟಲ್ ಆಗುತ್ತಾನೆ.

ಆರಂಭದಿಂದ ಕೊನೆಯ ತನಕ ಪರಮ ಕುಡುಕನೊಬ್ಬನ ವಿಲಕ್ಷಣ ಜೀವನವನ್ನು, ಬೇಜವಾಬ್ದಾರಿ ನಡವಳಿಕೆಯನ್ನು, ಕುಡಿತಕ್ಕೆ ದಾಸನಾದವನ ವಿಕ್ಷಿಪ್ತ ಮನಃಸ್ಥಿತಿಯನ್ನು ಸೂರಿ ಮನಮುಟ್ಟುವಂತೆ ಕಟ್ಟಿಕೊಟ್ಟಿದ್ದಾರೆ. ಕುಡಿತಕ್ಕೆ ಬಲಿಯಾದವನು ತನ್ನ ಮನೆಮಂದಿಗೆ ಕೊಡುವ ವೇದನೆಯನ್ನು, ತನ್ನ ಹೆಂಡತಿಯ ಕಾಲುಗೆಜ್ಜೆ ಮಗುವಿನ ಕೈಲಿರುವ ಉಂಗುರ, ಕಡೆಗೆ ಮನೆಯಲ್ಲಿರುವ ಪಾತ್ರ ಪಗಡೆಗಳನ್ನೂ ಬಿಡದೆ ಮಾರಿಕೊಂಡು ಕುಡಿಯುವ ಭಯಾನಕ ವೃತ್ತಾಂತವನ್ನು ನಿರ್ದೇಶಕ ಸೂರಿ ನಾಯಕನ ಮೂಲಕ ಪರಿಚಯಿಸಿದ್ದಾರೆ. ಕೆಳ ಮಧ್ಯಮವರ್ಗದವರ ಬದುಕನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾರೆ.

ಬಹುತೇಕ ಎಲ್ಲ ನಿರ್ದೇಶಕರೂ ರಂಗಾಯಣ ರಘುರಿಂದ ಉದ್ದುದ್ದ ಡೈಲಾಗುಗಳನ್ನು ಹೇಳಿಸಿ ಚಪ್ಪಾಳೆ ಗಿಟ್ಟಿಸುತ್ತಿರುವ ಇಂದಿನ ದಿನಗಳಲ್ಲಿ ಸೂರಿ ಮಾತ್ರ ಚಿತ್ರದ ಆರಂಭದಲ್ಲೇ ರಂಗಾಯಣ ರಘು ನಾಲಿಗೆಯನ್ನು ಕತ್ತರಿಸಿ ಆತನನ್ನು ಮೂಕನನ್ನಾಗಿಸಿದ್ದಾರೆ. ಮಾತಿಲ್ಲದಿದ್ದರೂ ನಟಿಸಬಲ್ಲೆ ಎಂಬುದನ್ನು ರಘು ಸಾಬೀತುಮಾಡಿದ್ದಾರೆ.

'ಮಧುವನ ಕರೆದರೆ' ಎಂಬ ಹಾಡಿನಲ್ಲಂತೂ ಭಾವನಾ ಬಹಳ ಬಹಳ 'ಅನುಭವಿಸಿ' ನಟಿಸಿದ್ದಾರೆ. ನಾಯಕನ ಅಣ್ಣನಾಗಿ ನಟಿಸಿರುವ ಕಿಶೋರ್‌ರ ಅಣ್ಣನ ಗತ್ತು ಗಮನ ಸೆಳೆಯುತ್ತದೆ. ನಾಯಕ ಕಿಟ್ಟಿಯಂತೂ ಕುಡಿಯುವುದರಲ್ಲಿ ಕೋರ್ಸು ಮುಗಿಸಿ ಬಂದವರಂತೆ ಚೆನ್ನಾಗಿ ಅಭಿನಯಿಸಿದ್ದಾರೆ. ನಾಯಕಿ ಸೋನು ಕೂಡಾ ಮುದ್ದಾಗಿ ನಟಿಸಿದ್ದಾಳೆ. ಹೆಣ ಕುಯ್ಯುವ ಪಾತ್ರದ ಅರುಣ್ ಸಾಗರ್, ಬೋರ್ಡು ಬರೆಯುವ ಕಲಾವಿದನಾಗಿ ದಿನೇಶ್ ಮಂಗ್ಳೂರು... ಹೀಗೆ ಎಲ್ಲರೂ ತಮ್ಮ ಪಾತ್ರಕ್ಕೆ ನ್ಯಾಯ ಸಲ್ಲಿಸಿದ್ದಾರೆ.

ಚಿತ್ರದ ಕ್ಯಾಮೆರಾ ಕೆಲಸವಂತೂ ಯಾವ ಪರಭಾಷಾ ಚಿತ್ರಕ್ಕೂ ಕಡಿಮೆಯಿಲ್ಲದಂತೆ ಮೂಡಿಬಂದಿದೆ. ಕಡಿಮೆ ಖರ್ಚಿನಲ್ಲಿ ನಿರ್ಮಿಸಿರುವ ಶಶಿಧರ ಅಡಪರ ಸೆಟ್‌ಗಳು, ಮಳೆಯ ದೃಶ್ಯಗಳು ಮೋಹಕವಾಗಿವೆ. ಸೂರಿಯ ಸಂಭಾಷಣೆಯಂತೂ ಚುಟುಕಾಗಿ, ಚೊಕ್ಕವಾಗಿದೆ.

ಹೀಗೆ ಎಲ್ಲಾ ಸರಿಯಿದ್ದರೂ ಚಿತ್ರದ ನಾಯಕನ ಕುಡುಕನ ಪಾತ್ರವೇ ಚಿತ್ರಕ್ಕೆ ವಿಲನ್ ಆಗಿ ಪರಿಣಮಿಸಿದೆ. ಕಂಠಪೂರ್ತಿ ಕುಡಿದು ಸಿನಿಮಾ ನೋಡಲು ಬಂದವರ ನಿಶೆ ಕೂಡ ಇಳಿದುಹೋಗುವಂತೆ ನಾಯಕ ತೆರೆಯ ಮೇಲೆ ಕುಡಿಯುತ್ತಾನೆ. ಚಿತ್ರದ ಆರಂಭದ ಸ್ವಲ್ಪ ಸಮಯ ಹೊರತುಪಡಿಸಿದರೆ, ಅಂತ್ಯದವರೆಗೂ ನಡೆಯುವ ನಾಯಕನ ಕುಡಿತವನ್ನು ಜೀರ್ಣಸಿಕೊಳ್ಳುವಲ್ಲಿ ಪ್ರೇಕ್ಷಕ ವಿಫಲನಾಗುತ್ತಾನೆ. ಪ್ರೀತಿಯ ಉತ್ಕಟತೆಯನ್ನು ಕೇವಲ ಕವನಗಳ ಸಾಲುಗಳಲ್ಲಿ, ಮಾತಿನಲ್ಲಿ, ಹಾಡಿನಲ್ಲಿ ಹೇಳಿರುವ ಸೂರಿ ಕುಡಿತವನ್ನು ಮಾತ್ರ ನಿರಂತರವಾಗಿ ತೋರಿಸಿದ್ದಾರೆ.

ಆದರೆ ಇದೇ ಚಿತ್ರದ ಮೈನಸ್ ಪಾಯಿಂಟ್ ಎಂದು ಅರಿತ ಸೂರಿ ಬಿಡುಗಡೆಯ ನಂತರ ಏಳು ನಿಮಿಷದ ಕುಡಿತವನ್ನು ಕತ್ತರಿಸಿದ್ದಾರಂತೆ..

ಏನೇ ಇರಲಿ ಕುಡುಕನೊಬ್ಬನನ್ನು ಕಟ್ಟಿಕೊಂಡು ಹೆಣಗುವ ಹೆಂಡತಿಯರು, ಕುಡುಕ ಮಗನಿಗೆ ಜನ್ಮವಿತ್ತ 'ದುನಿಯಾ'ದ ಸಮಸ್ತ ತಾಯಂದಿರೂ ನೋಡಬಹುದಾದ ಚಿತ್ರ 'ಇಂತಿ ನಿನ್ನ ಪ್ರೀತಿಯ'...


■ ಅರುಣ್.ಜೆ

ಗೆದ್ದು ನಿಂತ 'ಗಜ'

ಈ ವರ್ಷದ ಮೊದಲ ಚಿತ್ರ 'ಗಜ' ಐವತ್ತು ದಿನಗಳನ್ನು ಯಶಸ್ವಿಯಾಗಿ ಪೂರೈಸಿ ಮುಂದೆ ಸಾಗುತ್ತಿದೆ. ಕಳೆದ ಎರಡು ವರ್ಷಗಳಿಂದ ಬರೀ ಸೋಲನ್ನೇ ಕಂಡಿದ್ದ ದರ್ಶನ್ ಮುಖದಲ್ಲಿ ಕೊನೆಗೂ ಗೆಲುವಿನ ನಗು ಕಾಣಿಸುತ್ತಿದೆ. ಇಂತಹ ನಗು ಶಿವಣ್ಣ, ಸುದೀಪ್, ರವಿಚಂದ್ರನ್, ವಿಷ್ಣುವರ್ಧನ್ ಮೊದಲಾದವರ ಮುಖದಲ್ಲಿ ಈ ವರ್ಷ ಕಾಣಲು ಸಾಧ್ಯವೇ? ಎಂದು ಕಣ್ಣಲ್ಲಿ ದುರ್ಬೀನು ಇಟ್ಟುಕೊಂಡು ಗಾಂಧಿನಗರದವರು ಹುಡುಕಾಡುತ್ತಿದ್ದಾರೆ.



R B P LANKESH, Kannada Weekly Price Rs. 12/- 12-3-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.





'ಓಂ' ಆರಂಭದಲ್ಲೇ ಶುಭಂ?



ಪಿರಮಿಡ್ ಸಾಯಿಮಿರಾ ನಿರ್ಮಾಣದ, ರಾಜ್‌ಕುಮಾರ್ ಮಕ್ಕಳಾದ ಶಿವರಾಜ್‌ಕುಮಾರ್-ರಾಘವೇಂದ್ರ ರಾಜ್‌ಕುಮಾರ್- ಪುನೀತ್ ರಾಜ್‌ಕುಮಾರ್ ಈ ತ್ರಿಮೂರ್ತಿಗಳ ಮಿಲನದ ಚೊಚ್ಚಮೊದಲ ಚಿತ್ರ 'ಓಂ' ಆರಂಭಕ್ಕೆ ಮುಂಚೆಯೇ ಅಂತ್ಯ ಕಾಣುವ ಸೂಚನೆ ಕಾಣುತ್ತಿದೆ. ಇದಕ್ಕೆ ಕಾರಣ ಆ ಚಿತ್ರಕ್ಕೆ ನಮೂದಿಸಲ್ಪಟ್ಟ ನಿರ್ದೇಶಕ ರವಿ ಶ್ರೀವತ್ಸ.

'ಮಾದೇಶ' ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿರುವ ಶಿವರಾಜ್‌ಕುಮಾರ್‌ಗೆ ಈ ನಿರ್ದೇಶಕನ ಬಗ್ಗೆ ಅತೀವವಾದ ಅತೃಪ್ತಿ ಉಂಟಾಗಿದೆಯಂತೆ. ಆರಂಭದಲ್ಲಿ ಅತಿ ವಿನಯದಿಂದ ತಗ್ಗಿ ಬಗ್ಗಿ ನಡೆಯುತ್ತಿದ್ದ ರವಿ ಶ್ರೀವತ್ಸ ಚಿತ್ರೀಕರಣ ಆರಂಭವಾದ ನಂತರ ತಂತ್ರಜ್ಞರಿಗೆಲ್ಲಾ ಮನಬಂದಂತೆ ಬೈಯುವುದು, ಎಗರಾಡುವುದನ್ನು ನೋಡಿ ಶಿವಣ್ಣನಿಗೆ ಬೇಸರವಾಗಿದೆಯಂತೆ. ಹೀಗಾಗಿ 'ಮಾದೇಶ' ಚಿತ್ರ ನಿರೀಕ್ಷಿಸಿದಂತೆ ನಡೆಯುತ್ತಿಲ್ಲ ಮಾತ್ರವಲ್ಲ, ಆ ಚಿತ್ರತಂಡದಲ್ಲಿ ಈಗ ಅಂತಹ ಸಂಭ್ರಮದ ವಾತಾವರಣವೂ ಕಾಣಿಸುತ್ತಿಲ್ಲ. ಹೀಗಾಗಿ ಈ ಚಿತ್ರದ ನಂತರ ಆರಂಭವಾಗಬೇಕಾಗಿದ್ದ 'ಓಂ' ಚಿತ್ರದ ಮೇಲೂ ಶ್ರೀವತ್ಸನ ದುಷ್ಪರಿಣಾಮ ಬೀರದೆ ಇರಲಾರದು ಎಂಬುದು ಚಿತ್ರೋದ್ಯಮದವರ ಅನಿಸಿಕೆ.

ಕತ್ತ ಕತ್ತೆಯಲ್ಲಿ ಕಿಟ್ಟಿ

ನಾಗರಾಜಮೂರ್ತಿಯವರ 'ಪ್ರಯೋಗರಂಗ'ದಲ್ಲಿ ಅಭಿನಯದ ಓನಾಮವನ್ನು ಕಲಿತು, ರಂಗಭೂಮಿ ಹಿನ್ನೆಲೆಯಿಂದ ಬಂದು ಟೀವಿ ಸೀರಿಯಲ್ಲುಗಳಲ್ಲಿ ನಟಿಸಿ, ನಂತರ ಚಿತ್ರರಂಗದಲ್ಲಿ ಸಿಕ್ಕ ಸಣ್ಣ ಪುಟ್ಟ ಅವಕಾಶಗಳಲ್ಲಿ ಸೈ ಎನಿಸಿಕೊಂಡು, ಒಂದು ಕನ್ನಡಚಿತ್ರ ಮತ್ತು ಒಂದು ತಮಿಳು ಚಿತ್ರದಲ್ಲಿ ನಾಯಕನಾಗಿ ಸೋತು ಈಗ ಮತ್ತೊಮ್ಮೆ ಪರೀಕ್ಷೆ ಬರೆದಿರುವ ನಟ ಶ್ರೀನಗರ ಕಿಟ್ಟಿ.

ಸದ್ಯ 'ಇಂತಿ ನಿನ್ನ ಪ್ರೀತಿಯ' ಚಿತ್ರದಲ್ಲಿ ಕಂಠಪೂರ್ತಿ ಕುಡಿದು 'ಟೈಟಾ'ಗಿರುವ ಕಿಟ್ಟಿಯನ್ನು ಚಿತ್ರದ ನಶೆ ಇಳಿಯುವ ಮೊದಲೇ 'ಲಂಕೇಶ್' ಮಾತನಾಡಿಸಿತು.

● **'ಎಣ್ಣೆ ಗಾಡಿ' ಪಾತ್ರದಲ್ಲಿ ಇಷ್ಟೊಂದು ನೈಜವಾಗಿ ನಟಿಸಿರುವುದರ ಗುಟ್ಟೇನು?**

ಈ ಪಾತ್ರ ಮಾಡಿಸುವುದಕ್ಕೋಸ್ಕರ ಸೂರಿ ನನ್ನನ್ನ ಬೆಂಗಳೂರಿನ ಬಹಳಷ್ಟು ಸಾರಾಯಿ ಅಂಗಡಿಗೆ ಕರಕೊಂಡು ಹೋಗಿ ತೋರ್ಸಿದ್ದಾನೆ. ಮೆಜೆಸ್ಟಿಕ್ಕಿನ ಕಪಾಲಿ ಗಲ್ಲಿ ಕಲಾಸಿಪಾಳ್ಯದ ಸಾರಾಯಿ ಅಂಗಡಿ, ಚಾಕ್ನಾ ಗಾಡಿಗಳು... ಎಲ್ಲಾ ಕಡೆ ಹೋಗಿ ನೋಡಿಕೊಂಡು ಬಂದು, ಪ್ರೊಫೆಷನಲ್ ಕುಡುಕರನ್ನು ಅಧ್ಯಯನ ಮಾಡಿ ನಟಿಸಿದ್ದೇನೆ. ಸ್ವತಃ ನನಗೇ ಬಾರ್ ನಡೆಸಿದ ಅನುಭವ ಇರೋದ್ರಿಂದ ಇನ್ನೂ ಅನುಕೂಲ ಆಯ್ತು.

● **ನೀವು ಕುಡಿಯೋದಿಲ್ವಾ?**

ಕುಡೀತೀನಿ... ಆದ್ರೆ ಚಿತ್ರದಲ್ಲಿ ತೋರ್ಸಿರೋ ಹಾಗೆ ಕುಡಿಯಲ್ಲ. ಅಪರೂಪಕ್ಕೊಮ್ಮೆ ಚೂರು ಚೂರು ತೊಗೊಂತೀನಿ, ಅಷ್ಟೇ...

● **ಈ ಚಿತ್ರದ ಕುಡುಕನ ಪಾತ್ರ ನಿಮಗೆ ಹೀರೋ ವ್ಯಾಲ್ಯೂ ತಂದು ಕೊಡುತ್ತಾ?**

ಪಾತ್ರ ಯಾವುದಾದ್ರೂ ಸರಿ, ಮಾಡೋಕೆ ನಾನು ರೆಡಿ. ಈ ಚಿತ್ರದಿಂದ ಹೀರೋ ವ್ಯಾಲೂ ಬರತ್ತೆ ಅಂತ ಹೇಳಕ್ಕಾಗಲ್ಲ, ಆದ್ರೆ ಒಂದಷ್ಟು ಛಾನ್ಸ್ ಸಿಕ್ತಾ ಇರೋದಂತೂ ನಿಜ.

● **ಮುಂದಿನ ಪ್ರಾಜೆಕ್ಟ್?**

ದಿನೇಶ್ ಬಾಬು ಅವರೊಂದಿಗೆ ಒಂದು ಸಿನಿಮಾ, ಜೊತೆಗೆ ನಾಗತಿಹಳ್ಳಿಯವರೊಂದಿಗೂ ಸಿನಿಮಾ ಒಂದರ ಚರ್ಚೆ ನಡೀತಿದೆ.... ಇದಲ್ಲದೆ ಬೇರೆ ಒಂದೆರಡು ಅವಕಾಶಗಳಿವೆ. ಆದರೆ ಇನ್ನೂ ಫೈನಲ್ ಆಗಿಲ್ಲ.

● **ಮತ್ತೆ ತಮಿಳಿನ ಕಡೆಗೆ ಹೋಗೋ ಯೋಚ್ನೆ ಇದ್ಯಾ?**

ದೇವ್ರಾಣೆಗೂ ಇಲ್ಲ, ಸಾಕಪ್ಪಾ ಸಾಕು ಅವರ ಸಹವಾಸ. ಇಲ್ಲಿಂದ ಹೋದವರಿಗೆ ನಯಾಪೈಸೆಯ ಮರ್‍ಯಾದೇನೂ ಕೊಡಲ್ಲ ಆ ಜನ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಪ್ರೆಸ್ ಮೀಟ್ ಮಾಡಿದ್ರೂ ಯಾವ ಜರ್ನಲಿಸ್ಟುಗಳೂ ಬರೊಲ್ಲ ಅಲ್ಲಿ... ಅಲ್ಲಿನ ಮೀಡಿಯಾದವರು ಇಲ್ಲಿಂದ ಹೋದವರ್‍ನ ಮೂಸಿ ಕೂಡ ನೋಡಲ್ಲ...

● **ಮತ್ಯಾಕೆ ತಮಿಳಿಗೆ ಹೋದ್ರಿ?**

ಇಲ್ಲೇ ಒಳ್ಳೆ ಅವಕಾಶ ಸಿಕ್ಕಿದ್ದಿದ್ರೆ ಖಂಡಿತಾ ಅಲ್ಲಿಗೆ ಹೋಗ್ತಿರ್ಲಿಲ್ಲ. ಇಲ್ಲಿ ನನಗೆ ಎದುರಾದ ಅವಕಾಶಗಳ ಕೊರತೆ ನನ್ನನ್ನು ತಮಿಳಿಗೆ ದೂಡಿತು. ಸದಾ ಕನ್ನಡ ಕನ್ನಡ ಅಂತ ಅರ್ರೊಳ್ಳುವ ನಾವು ನಿಜವಾಗ್ಲೂ ಅಲ್ಲಿಗೆ ಹೋಗ್ಬಾರ್‍ದು ಅನ್ನೋ ಮನವರಿಕೆ ನನಗಾಗಿದೆ.

● **ಮದ್ವೆ ಯಾವಾಗ?**

ಈಗಾಗಲೇ ಎಂಗೇಜ್ ಆಗಿರುವ ಹುಡ್ಗೀ ಜೊತೆಯಲ್ಲೇ ಮೇನಲ್ಲಿ ಮತ್ತೊಂದ್ಸಾರಿ ಎಂಗೇಜ್‌ಮೆಂಟು, ಜೂನ್ ಎಂಡ್ ಒಳಗೆ ಮದ್ವೆ.. ಆಮೇಲೆ 'ಮಳೆಯ ರಾತ್ರಿ'ಯಲ್ಲಿ ಮಾವನೊಂದಿಗೆ...

● **ಇದೇನಿದು ಮಾವನೊಂದಿಗೆ 'ರಾತ್ರಿ' ಅಂತೀರಲ್ಲ?**

ಅಯ್ಯೋ ಅದು ಹಾಗಲ್ಲ, ನನ್ನ ಭಾವಿ ಮಾವ ರವಿ ಬೆಳಗೆರೆಯವರು ನಿರ್ದೇಶಿಸುತ್ತಿರುವ 'ಒಂದು ಮಳೆಯ ರಾತ್ರಿ' ಎಂಬ ಸಿನಿಮಾದಲ್ಲಿ ನಾಯಕನಾಗಿ ನಟಿಸ್ತೀನಿ. ಈ ಚಿತ್ರದಲ್ಲಿ ನನ್ನದೇ ಮುಖ್ಯಪಾತ್ರ....

ಸಂದರ್ಶನ: **ಅರುಣ್.ಜಿ**

ಹೀಗೂ ಉಂಟಾ?




ಭಾನುವಾರ ರಾತ್ರಿಯಾದರೆ ಟೀವಿ ನೈನ್ ಚಾನೆಲ್‌ನಲ್ಲಿ 'ಹೀಗೂ ಉಂಟೇ...?' ಎಂದು ವಿಸ್ಮಯ ಜಗತ್ತನ್ನು ಪರಿಚಯಿಸುವ, ಮೂಢ ನಂಬಿಕೆಗಳನ್ನು ವೈಭವೀಕರಿಸುವ, ಸಣ್ಣಪುಟ್ಟ ದೇವಸ್ಥಾನಗಳಿಗೂ ಪುಕ್ಕಟೆ ಪ್ರಚಾರ ನೀಡುವ ನಾರಾಯಣಸ್ವಾಮಿ ಎಂಬ ಗಡ್ಡಧಾರಿ ಸುರಸುಂದರಾಂಗನೂ ಈಗ 'ಟೀಂ' ಎಂಬ ಚಿತ್ರದ ಹೀರೋ ಆಗಲು ಹೊರಟಿದ್ದಾರೆ!

ಹೀಗೆ ಒಂದೆಡೆ ನಾರಾಯಣ ಸ್ವಾಮಿ 'ಟೀಂ' ಕಟ್ಟಲು ರೆಡಿಯಾಗಿನಿಂತಿದ್ದರೆ ಇನ್ನೊಂದೆಡೆ ಚಿತ್ರಬ್ರಹ್ಮ ಎಂಬ ಸ್ವಯಂ ಬಿರುದಾಂಕಿತದ ಮದನ್ ಮಲ್ಲು ಮಾತ್ರ ನಾರಾಯಣ ಸ್ವಾಮಿಯ 'ಹೀಗೂ ಉಂಟೇ' ಟೈಟಲ್‌ನ್ನೇ ಬಳಸಿಕೊಂಡು ಗಾರ್ಮೆಂಟ್ಸ್ ಮಹಿಳೆಯರ ಕಷ್ಟವನ್ನು ಸಿನಿಮಾದ ಮೂಲಕ ಹೇಳಹೊರಟಿದ್ದಾರೆ.

ಹೀಗೆ ನಾರಾಯಣ ಸ್ವಾಮಿಯನ್ನು ಹೀರೋ ಮಾಡಲು ಹೊರಟಿರುವುದನ್ನು, ಗಾರ್ಮೆಂಟ್ಸ್ ಮಹಿಳೆಯರ ಬದುಕಿನ ಗಂಧ ಗಾಳಿ ಗೊತ್ತಿಲ್ಲದ ಮಲ್ಲು ಸಿನಿಮಾ ಮಾಡುತ್ತಿರುವುದನ್ನು ನೋಡಿದ ಜನ ಮಾತ್ರ 'ಹೀಗೂ ಉಂಟಾ' ಎಂದು ಕೇಳುವಂತಾಗಿದೆ...

ವಾಸ್ನೇನೂ ಹೀರೋನೇ?



ಅತ್ತ 'ದುನಿಯಾ' ಹಿಟ್ ಆಗುತ್ತಿದ್ದಂತೇ ಅದರಲ್ಲಿ ಸಣ್ಣ ಪಾತ್ರ ಮಾಡಿದ್ದ ಲೂಸ್ ಮಾದ ಅಲಿಯಾಸ್ ಯೋಗೇಶ್‌ಗೆ ಎಲ್ಲೂ ಇಲ್ಲದ ಬೇಡಿಕೆ ಒದಗಿಬಂತು. ಇತ್ತ 'ಇಂತಿ ನಿನ್ನ ಪ್ರೀತಿಯ' ಚಿತ್ರದಲ್ಲಿ ದುನಿಯಾದಲ್ಲಿನ ಲೂಸ್ ಮಾದನ ಮುಂದುವರಿದ ಪಾತ್ರದಂತೆ ಇರುವ ವಾಸ್ನೆ ಬಾಬು ಯಾನೆ ಪವನ್ ಕೂಡ ಹೀರೋ ಮಾಡಲು ಒಂದಷ್ಟು ಜನ ಈಗಲೇ ಸ್ಕೆಚ್ ಹಾಕುತ್ತಿದ್ದಾರಂತೆ. ಅಷ್ಟೇ ಅಲ್ಲದ ಆತನ ಚಿತ್ರಕ್ಕೆ 'ವಾಸ್ನೆ ಬಾಬು' ಅಂತಲೇ ಹೆಸರಿಡಬೇಕು ಎಂಬುದೂ ಇವರ ಯೋಚನೆಯಂತೆ....

ಇನ್ನು ಒಂದೆರಡು ದಿನಗಳಲ್ಲಿ ನಿರ್ಧಾರವಾಗುವ 'ಇಂತಿ ನಿನ್ನ ಪ್ರೀತಿಯ' ಚಿತ್ರದ ಕಲೆಕ್ಷನ್ ಮೇಲೆ ವಾಸ್ನೆ ಬಾಬುವಿನ ಭವಿಷ್ಯ ನಿಂತಿರುವುದಂತೂ ಸುಳ್ಳಲ್ಲ!

ಏನೇ ಇರಲಿ ವಾಸ್ನೆ ಬಾಬುವಿಗೊಂದು ಗಮ್ಮನೆಯ ಕಂಗ್ರಾಟ್ಸ್ ಹೇಳೋಣ ಅಲ್ಲವೇ?

ಹಳೇ ಹೆಂಡ ಹೊಸ ಬಾಟಲಿಗೆ



ಅಂಬರೀಷ್ ಚಿತ್ರಜೀವನ ಮುಗಿದೇಹೋಯಿತು ಎನ್ನುವಷ್ಟರಲ್ಲೇ ಇದೀಗ ಅಂಬಿಗೆ ಬೇಡವೆಂದರೂ ಒಳ್ಳೊಳ್ಳೆಯ ಪಾತ್ರಗಳು ಸಿಗುತ್ತಿವೆ. ಆದರೆ ವಿಶೇಷವೆಂದರೆ ಇವೆಲ್ಲವೂ ಅವರೇ ಹಿಂದೆ ಮಾಡಿ ವಿಜೃಂಭಿಸಿದಂತಹ ಪಾತ್ರಗಳು. ಉದಾಹರಣೆಗೆ ರಾಜೇಂದ್ರಸಿಂಗ್ ಬಾಬು ನಿರ್ಮಾಣ, ನಿರ್ದೇಶನದ 'ತಿಪ್ಪಾರಳ್ಳಿ ತರ್ಲೆಗಳು' ಚಿತ್ರದಲ್ಲಿ ಅಂಬರೀಷ್ ಮತ್ತೊಮ್ಮೆ 'ಅಂತ' ಚಿತ್ರದ ಕನ್ವರ್‌ಲಾಲ್ ಪಾತ್ರದಲ್ಲಿ ಆರ್ಭಟಿಸುತ್ತಿದ್ದಾರೆ.

ಅದೇ ತರಹ ಈಗ ಹೊಸ ನಿರ್ದೇಶಕ ಮಹೇಶ್ವರ್ ನಿರ್ದೇಶನದ 'ಟೀಂ' ಚಿತ್ರದಲ್ಲಿ ಅಂಬರೀಷ್ 'ನ್ಯೂ ಡೆಲ್ಲಿ' ಚಿತ್ರದ ಮಾವರಿ ಪತ್ರಕರ್ತನ ಪಾತ್ರದಲ್ಲಿ ರಾರಾಜಿಸಲಿದ್ದಾರಂತೆ.

ಇದರರ್ಥ ಅಂಬಿಗಾಗಿ ಹೊಸ ಪಾತ್ರಗಳನ್ನು ಸೃಷ್ಟಿಸುವ ನಿರ್ದೇಶಕರು ಈಗ ಕಡಿಮೆಯಾಗಿದ್ದಾರೆ. ಆದ್ದರಿಂದ ಹಳೇ ಹೆಂಡವನ್ನು ಹೊಸ ಬಾಟಲಿಗೆ ಹಾಕಿಕೊಟ್ಟಂತೆ ಈಗ ಅಂಬಿಯನ್ನು ಅವರೇ ನಿರ್ವಹಿಸಿದ್ದ ಪಾತ್ರಗಳಿಗೆ ಹೊಸ ರೂಪ ಕೊಟ್ಟು ತೋರಿಸುತ್ತಿದ್ದಾರೆ. ಓಲ್ಡ್ ಈಸ್ ಗೋಲ್ಡ್ ಎಂಬುದು ಈ ನಿರ್ದೇಶಕರಿಗೆ ಅರ್ಥವಾಗಿಲ್ಲದಿರುವುದು ಬೇಸರದ ವಿಷಯ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44